ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 20 ಶನಿವಾರ 2026

47


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 65 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ವಿಜಯೋತ್ಸವ



ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ 5 ಸ್ಥಾನ ಗೆದ್ದ ಹಿನ್ನೆಲೆಯಲ್ಲಿ ಅಗ್ರಹಾರ ವೃತ್ತದಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಂದ ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಕಾಂಗ್ರೆಸ್ ಹಿರಿಯ ಮುಖಂಡ ವಾಸು, ಕೆಪಿಸಿಸಿ ಸದಸ್ಯರಾದ ನಜರ್‌ಬಾದ್ ನಟರಾಜ್, ಕೆ ಆರ್ ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಡೈರಿ ವೆಂಕಟೇಶ್, ಲೋಕೇಶ್, ಎಸ್.ಎನ್.ರಾಜೇಶ್, ಕೃಷ್ಣಪ್ಪ (ಗಂಟಯ್ಯ), ಚನ್ನಪ್ಪ, ನಿತೀಶ್ ಕುಮಾರ್, ದೀಪಕ್, ರವಿಚಂದ್ರ, ಹರೀಶ್ ನಾಯ್ಡು, ಮೋಹನ್ ಹಾಗೂ ಇನ್ನಿತರರು ಹಾಜರಿದ್ದರು.

ಮತಾಂತರ ವಿರೋಧಿ ಕಾಯ್ದೆ ಜಾರಿಗೂ ಮುನ್ನ ವಿಸ್ತೃತ ಚರ್ಚೆಯಾಗಲಿ

ಮೈಸೂರು, ಜೂ.19(ಜಿಎ)–ಮತಾಂತರ ವಿರೋಧಿ ಕಾಯ್ದೆ ಜಾರಿ ಮಾಡುವ ಮುನ್ನ ವಿಸ್ತೃತ ಚರ್ಚೆಯಾಗಬೇಕು ಎಂದು ಇಂಡಿಯಾ ಬೈಬಲ್ ಲಿಟರೇಚರ್ ಅಪೊಸ್ಟೊಲೇಟ್ ಸಂಸ್ಥಾಪಕ ನಿರ್ದೇಶಕ ರೆ.ಫಾ. ಬೆಂಜಮಿನ್ ವಾಸ್ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಸ್ಲಿಮರು, ಕ್ರೈಸ್ತರು ಸೇರಿದಂತೆ ಹಲವಾರು ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಭಾಷಣ, ಸಮುದಾಯ ಹಿಂಸಾಚಾರ ಆರೋಪ, ಆರಾಧನಾ ಸ್ಥಳಗಳ ಮೇಲೆ ನಡೆಯುತ್ತಿರುವ ದಾಳಿ ಗಮನಿಸಿದಲ್ಲಿ ಇದು ಸಾಮಾಜಿಕ ತಾರತಮ್ಯದ ಉದ್ದೇಶದ್ದಾಗಿವೆ ಎಂಬುದು ಗೋಚರವಾಗುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು.

ಹಲವು ರಾಜ್ಯಗಳಲ್ಲಿ ಜಾರಿಗೊಂಡಿರುವ ಮತಾಂತರ ವಿರೋಧಿ ಕಾನೂನುಗಳನ್ನು ಬಲವಂತದ ಅಥವಾ ವಂಚನೆ ಮೂಲಕ ತಡೆಯಲು ಅಗತ್ಯವೆಂದು ಬೆಂಬಲಿಗರು ಹೇಳುತ್ತಾರೆ. ಆದರೆ, ಯಾವುದೇ ಸಾಕ್ಷ್ಯವಿಲ್ಲದಿದ್ದರೂ ಸಹಾ ಈ ಕಾನೂನುಗಳನ್ನು ಕ್ರೈಸ್ತ ಪಾದ್ರಿಗಳು, ಮಿಷನರಿಗಳು ಹಾಗೂ ಅಂತರ್ ಧರ್ಮೀಯ ದಂಪತಿಗಳನ್ನು ಗುರಿಯಾಗಿಸಿಕೊಂಡು ಬಳಸಲಾಗುತ್ತಿದೆ ಎಂಬ ವಾದವೂ ಇದೆ. ಹೀಗಾಗಿ ಈ ಕುರಿತು ವಿಸ್ತೃತ ಚರ್ಚೆ ನಡೆಯಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಆನಂದ್ ಉಪಸ್ಥಿತರಿದ್ದರು.

ನಾಳೆ ಮೈಕ್ರೋಪ್ಲಾಸ್ಟಿಕ್‌ಗಳಿಂದ ಮುಕ್ತಿ ವಾಕಥಾನ್; ಗಿಡ ನೆಡುವ ಕಾರ್ಯಕ್ರಮ



ಮೈಸೂರು,ಜೂ.19–ಮೈಸೂರು ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಸಂಘ ಹಾಗೂ ಸಂತಸ್ ಫೌಂಡೇಶನ್ ವತಿಯಿಂದ ಫೆಡರೇಶನ್ ಆಫ್ ಅಬ್ಸ್ಟೆಟ್ರಿಕ್ ಅಂಡ್ ಗೈನಕಾಲಜಿಕಲ್ ಸೊಸೈಟೀಸ್ ಆಫ್ ಇಂಡಿಯಾ, ಕರ್ನಾಟಕ ರಾಜ್ಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಸಂಘ ಮತ್ತು ಮೈಸೂರು ಅಸೋಸಿಯೇಷನ್ ಆಫ್ ಹಾಸ್ಪಿಟಲ್ಸ್ ಸಹಯೋಗದಲ್ಲಿ ಜೂ.21ರಂದು ಬೆಳಗ್ಗೆ 7ರಿಂದ 9ರವರೆಗೆ ಕಾರಂಜಿ ಕೆರೆ ಪಾರ್ಕಿಂಗ್ ಪ್ರದೇಶದಲ್ಲಿ ಮೈಕ್ರೋಪ್ಲಾಸ್ಟಿಕ್‌ಗಳ ಹೆಚ್ಚುತ್ತಿರುವ ಅಪಾಯ ಹಾಗೂ ಪರಿಸರ ಸಂರಕ್ಷಣೆಯ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ವಾಕಥಾನ್ ಮತ್ತು ಸ್ಥಳೀಯ ಜಾತಿಯ ಮರಗಳ ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ವಾಕಥಾನ್ ಕಾರಂಜಿ ಕೆರೆಯಿಂದ ಆರಂಭವಾಗಿ ಲಲಿತ ಮಹಲ್ ರಸ್ತೆಯ ಮೂಲಕ ಕವಾಗಾನು ಗೇಟ್‌ವರೆಗೆ ಸಾಗಲಿದೆ. ಅಲ್ಲಿಂದ ಭಾಗವಹಿಸುವವರು ಎಡಕ್ಕೆ ತಿರುಗಿ ಸಿದ್ಧಾರ್ಥನಗರ ಉದ್ಯಾನವನವನ್ನು ಪ್ರವೇಶಿಸಲಿದ್ದು, ಅಲ್ಲಿ ಸ್ಥಳೀಯ ಜಾತಿಯ ಸಸಿಗಳ ನೆಡುವ ಕಾರ್ಯಕ್ರಮ ಹಾಗೂ ಜಾಗೃತಿ ಕಾರ್ಯಕ್ರಮ ನಡೆಯಲಿದೆ.

'ಫ್ಯಾಷನವ್ಯಾ' ವಸ್ತು ಪ್ರದರ್ಶನ



ಫ್ಯಾಷಿಯೋನಿಸ್ಟಾ ಗ್ರೂಪ್ ಆಫ್ ಎಕ್ಸಿಬಿಷನ್ಸ್ ವತಿಯಿಂದ ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಿರುವ ಎರಡು ದಿನಗಳ 'ಫ್ಯಾಷನವ್ಯಾ' ಪ್ರದರ್ಶನದ 9ನೇ ಆವೃತ್ತಿಯನ್ನು ಶುಕ್ರವಾರ ಉದ್ಯಮಿ ಶ್ರುತಿ ಜಾಜಾ, ಡಿಸೈನರ್ ಆರ್.ಹೇಮಂತ ಚಂದ್ರಶೇಖರ್, ಆಭರಣ ಮತ್ತು ಜೀವನಶೈಲಿ ಮಾರ್ಗದರ್ಶಕರಾದ ದಿವ್ಯಾ ಅಮ್ಮ ಉದ್ಘಾಟಿಸಿದರು. ಶನಿವಾರ ಬೆಳಗ್ಗೆ 11ರಿಂದ ರಾತ್ರಿ 9ರವರೆಗೆ ಈ ವೈವಿಧ್ಯಮಯ ವಿನ್ಯಾಸಗಳ ವಸ್ತು ಪ್ರದರ್ಶನಕ್ಕೆ ಭೇಟಿ ನೀಡಬಹುದು.


ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು: ದಕ್ಷಿಣ ಮತ್ತು ಎನ್‌ಆರ್ ಎಸ್ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ನಿರ್ವಹಣಾ ಕಾಮಗಾರಿ ಕೆಲಸದ ನಿಮಿತ್ತ ಜೂ.20ರಂದು ಬೆಳಗ್ಗೆ 10 ರಿಂದ ಸಂಜೆ 6ರ ವರೆಗೆ ವಿದ್ಯಾರಣ್ಯಪುರಂ 25 ರಿಂದ 30ನೇ ಕ್ರಾಸ್, ಕನಕಗಿರಿ, ವಿದ್ಯುತ್ ಕಾಲೋನಿ, ಸ್ಟರ್ಲಿಂಗ್ ಸುತ್ತ–ಮುತ್ತ, ಕೃಷ್ಣಮೂರ್ತಿಪುರಂ, ಇಂಡಸ್ಟ್ರಿಯಲ್ ಸಬರ್ಬ್ 10ರಿಂದ 13ನೇ ಹಂತ, ಚಾಮುಂಡಿಪುರಂ ವೃತ್ತ, ಸಿಲ್ಕ್ ಫ್ಯಾಕ್ಟರಿ ಸುತ್ತ–ಮುತ್ತ, ಅಶೋಕಪುರಂ, ವೀರದರಕೇರಿ, ನಂಜುಮಳಿಗೆ ಸುತ್ತ–ಮುತ್ತ, ಬಂಡಿಪಾಳ್ಯ, ಹೊಸಹುಂಡಿ, ಗುಡುಮಾದನಹಳ್ಳಿ, ಏಳಿಗೆಹುಂಡಿ, ಉತ್ತನಹಳ್ಳಿ, ಆಲನಹಳ್ಳಿ ರಿಂಗ್ ರಸ್ತೆ ಸುತ್ತ–ಮುತ್ತ, ನಾಚನಹಳ್ಳಿ ಪಾಳ್ಯ, ಕವಿತಾ ಬೇಕರಿ ಸರ್ಕಲ್, ಜೆ.ಪಿ. ನಗರ ಎಯಿಂದ ಇ ಬ್ಲಾಕ್, ಗೊಬ್ಬಳಿ ಮರ, ಪೊಲೀಸ್ ಬೂತ್ ವೃತ್ತ ಓಂಕಾರ್ ಬಡಾವಣೆ, ಸಿದ್ದಲಿಂಗೇಶ್ವರ ಬಡಾವಣೆ ಸುತ್ತ–ಮುತ್ತ. ಸುಭಾಷ್‌ನಗರ, ಮೊಹಮ್ಮದ್ ಸೇಠ್ ಬ್ಲಾಕ್, ಗಾಂಧಿನಗರ, ಎ.ಜೆ.ಬ್ಲಾಕ್, ಎನ್.ಆರ್. ಮೊಹಲ್ಲಾ, ನಾರ್ಥ್–ಈಸ್ಟ್ ಆಫ್ ಎನ್.ಆರ್ ಮೊಹಲ್ಲಾ, ಕೆಸರೆ 3ನೇ ಹಂತ, ರಾಜೇಂದ್ರನಗರ, ಬಡಾಮಕನ್, ಕುರಿಮಂಡಿ, ಉಸ್ಮಾನಿಯಾಬ್ಲಾಕ್, ತಿಲಕ್‌ನಗರ, ಕಾಮಟಗೇರಿ, ಗುಜರಿ, ಬೆಂಗಳೂರು–ಮೈಸೂರು ರಸ್ತೆ, ಇರ್ವಿನ್ ರಸ್ತೆ, ನ್ಯೂ ಸಯ್ಯಾಜಿರಾವ್ ರಸ್ತೆ, ಮೀನಾ ಬಜಾರ್, ಕಬೀರ್ ರಸ್ತೆ, ಮಿಷನ್ ಆಸ್ಪತ್ರೆ, ಅಕ್ಬರ್ ರಸ್ತೆ, ಸಾಡೇ ರಸ್ತೆ, ಕೆ.ಟಿ.ಸ್ಟ್ರೀಟ್, ಆರ್.ಎಂ.ಸಿ ಸುತ್ತ–ಮುತ್ತ, ಗಣೇಶ್‌ನಗರ, ನೆಕ್ಸಾಸ್ ಮಾಲ್ ಸುತ್ತ ಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.



ನಿಧನ


ಹೆಚ್.ಎಸ್. ಬಾಬು



ಮೈಸೂರು, ಜೂ.19– ಮೈಸೂರಿನ ಜೆ.ಪಿ. ನಗರದ ನಿವಾಸಿ ಹಾಗೂ ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್ ಹೆಚ್.ಎಸ್. ಬಾಬು (78) ಗುರುವಾರ ನಿಧನರಾದರು.

ಮೃತರು ಪತ್ನಿ ಕಲ್ಪನಾ, ಪುತ್ರಿ ಪನ್ನಘ, ಪುತ್ರ ಪ್ರಜ್ವಲ್ ಸೇರಿದಂತೆ ಅಪಾರ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಜಯಲಕ್ಷ್ಮೀ



ಚಾಮರಾಜನಗರ, ಜೂ.19– ನಗರದ ಶಂಕರಪುರ ಒಂದನೇ ರಸ್ತೆ ನಿವಾಸಿ, ನಾಗಸುಂದರ್ ಅವರ ಧರ್ಮಪತ್ನಿ ಶ್ರೀಮತಿ ವಿಜಯಲಕ್ಷ್ಮೀ(65) ಅವರು ಶುಕ್ರವಾರ ಸಂಜೆ ನಿಧನರಾದರು.

ಇವರು ತೆರಕಣಾಂಬಿ ಶ್ರೀ ವಿನಾಯಕ ಕಾನ್ವೆಂಟ್‌ನಲ್ಲಿ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ್ದರು. ಪತಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದು, ಶನಿವಾರ(ಜೂ.20) ಬೆಳಗ್ಗೆ 11 ಗಂಟೆಗೆ ಶ್ರೀ ಶಂಕರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಟ್ಟಗಳ್ಳಿ ರೆಸ್ಟೋ ಬಾರ್ ಅಗ್ನಿ ದುರಂತ ಪ್ರಕರಣ

ಲೈಸೆನ್ಸ್ ಪಡೆಯದ, ಅಗ್ನಿ ಸುರಕ್ಷತಾ ಕ್ರಮ ಕೈಗೊಳ್ಳದ ಒಂಬತ್ತು ರೆಸ್ಟೋರೆಂಟ್‌ಗಳಿಗೆ ಬೀಗ

ಹಲವು ಉದ್ದಿಮೆಗಳಿಗೆ ನೋಟಿಸ್ ಜಾರಿ; ಅಧಿಕಾರಿಗಳ ಕ್ಷಿಪ್ರ ಕಾರ್ಯಾಚರಣೆ

ಮೈಸೂರು, ಜೂ.19(ಎಂಟಿವೈ)– ಮೈಸೂರಿನ ದಟ್ಟಗಳ್ಳಿಯಲ್ಲಿ ರೆಸ್ಟೋಬಾರ್ ಅಗ್ನಿ ದುರಂತ ಪ್ರಕರಣದಿಂದ ಎಚ್ಚೆತ್ತುಕೊಂಡಿರುವ ಮೈಸೂರು ಪಾಲಿಕೆ ಅಧಿಕಾರಿಗಳು ವಿವಿಧೆಡೆ ದಾಳಿ ನಡೆಸಿ ಲೈಸೆನ್ಸ್ ಪಡೆಯದೇ ಹಾಗೂ ಅಗ್ನಿ ಸುರಕ್ಷಾ ಕ್ರಮ ಕೈಗೊಳ್ಳದ ಒಂಬತ್ತು ರೆಸ್ಟೋರೆಂಟ್‌ಗಳಿಗೆ ಬೀಗ ಜಡಿದು, ಹಲವು ರೆಸ್ಟೋರೆಂಟ್‌ಗಳಿಗೆ ನೋಟಿಸ್ ನೀಡಲಾಗಿದೆ.

ದಟ್ಟಗಳ್ಳಿಯಲ್ಲಿ ಜೂ.15ರಂದು ರೆಸ್ಟೋಬಾರ್‌ನಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ ಇಬ್ಬರು ನೌಕರರು ಮೃತಪಟ್ಟು, ಏಳು ಮಂದಿ ಗಾಯಗೊಂಡ ಪ್ರಕರಣದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರು ಶುಕ್ರವಾರ ಬೆಳಗ್ಗೆ ಅಗ್ನಿ ಸುರಕ್ಷತೆ ಬಗ್ಗೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಕಟ್ಟುನಿಟ್ಟಾಗಿ ನಿಯಮ ಪಾಲಿಸದೇ ಇರುವ ರೆಸ್ಟೋರೆಂಟ್, ಹೋಟೆಲ್ ಸೇರಿದಂತೆ ಇನ್ನಿತರ ಮಳಿಗೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆದೇಶಿಸಿದ್ದರು. ಈ ಹಿನ್ನೆಲೆಯಲ್ಲಿ ಸಂಜೆಯಿಂದಲೇ ಕಾರ್ಯಪ್ರವೃತ್ತರಾದ ಮೈಸೂರು ಮಹಾನಗರ ಪಾಲಿಕೆಯ ವಿವಿಧ ವಲಯಗಳ ಅಧಿಕಾರಿಗಳ ತಂಡ ತಮ್ಮ ವ್ಯಾಪ್ತಿಯಲ್ಲಿರುವ ರೆಸ್ಟೋರೆಂಟ್‌ಗಳ ಪರಿಶೀಲನೆ ನಡೆಸಿ, ನಿಯಮ ಉಲ್ಲಂಘಿಸಿರುವ ರೆಸ್ಟೋರೆಂಟ್‌ಗಳಿಗೆ ಬೀಗ ಹಾಕಿದ್ದಾರೆ.

ವಲಯ ಕಚೇರಿ 6ರಲ್ಲಿ ಮೂರಕ್ಕೆ ಬೀಗ: ಅಗ್ನಿ ದುರಂತ ತಪ್ಪಿಸಲು, ಅಗ್ನಿ ಸುರಕ್ಷತಾ ಕ್ರಮ ಕೈಗೊಳ್ಳದ ರೆಸ್ಟೋರೆಂಟ್, ರೂಫ್ ಟಾಪ್ ರೆಸ್ಟೋರೆಂಟ್‌ಗಳನ್ನು ಪರಿಶೀಲಿಸಿದ ನಗರ ಪಾಲಿಕೆಯ ವಲಯ ಕಚೇರಿ 6ರ ಅಧಿಕಾರಿಗಳ ತಂಡ ಮೂರು ರೂಫ್ ಟಾಪ್ ರೆಸ್ಟೋರೆಂಟ್‌ಗಳಿಗೆ ಬೀಗ ಹಾಕಿದ್ದಾರೆ. ಮೈಸೂರಿನ ಪೈವಿಸ್ತಾದ ಕುಫಾ, ಆಂಧ್ರ ರುಚುಲು ರೆಸ್ಟೋರೆಂಟ್ ಹಾಗೂ ರೂಪ, ಅಂಬರಾ ರೆಸ್ಟೋರೆಂಟ್‌ಗೆ ಬೀಗ ಹಾಕಲಾಗಿದೆ. ಈ ಮೂರು ರೆಸ್ಟೋರೆಂಟ್‌ಗಳಲ್ಲಿ ಅಗ್ನಿ ಸುರಕ್ಷತಾ ಕ್ರಮ ಅನುಸರಿಸದೇ ಇದ್ದದ್ದು ಕಂಡುಬಂದಿದೆ. ಅಲ್ಲದೆ, ಅಗ್ನಿ ದುರಂತ ಸಂಭವಿಸಿದರೆ ಗ್ರಾಹಕರು ಸುರಕ್ಷಿತವಾಗಿ ಹೊರಗೆ ಹೋಗುವುದಕ್ಕೆ ಅಸಾಧ್ಯವಾಗದಂತಹ ಪರಿಸ್ಥಿತಿ ಇದ್ದು, ಈ ಹಿನ್ನೆಲೆಯಲ್ಲಿ ಬೀಗ ಹಾಕಲಾಗಿದೆ.



ಅಗ್ನಿ ಸುರಕ್ಷತಾ ನಿಯಮ ಪಾಲಿಸದ ರೆಸ್ಟೋರೆಂಟ್‌ಗಳಿಗೆ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಶುಕ್ರವಾರ ಸಂಜೆ ಬೀಗ ಜಡಿದರು.

ಇನ್ನೂ 4 ರೆಸ್ಟೋರೆಂಟ್ ಬಂದ್

ವಲಯ ಕಚೇರಿ 5ರ ವ್ಯಾಪ್ತಿಯ ಪರ್ಪಲ್ ಹಾಸ್ ರೆಸ್ಟೋರೆಂಟ್ ಅನ್ನು ಅಬಕಾರಿ ಇಲಾಖೆ ನಿಯಮ ಪಾಲಿಸದ ಹಿನ್ನೆಲೆಯಲ್ಲಿ ಮುಚ್ಚಲಾಗಿದೆ. ವಲಯ ಕಚೇರಿ 7ರ ವ್ಯಾಪ್ತಿಯಲ್ಲೂ ದಿ ಅರ್ಬನ್ ಡೆಕ್ ರೂಫ್‌ಟಾಪ್ ರೆಸ್ಟೋರೆಂಟ್ ಹಾಗೂ ಆಶೀರ್ವಾದ್ ಗ್ರಾಂಡ್ ಹೋಟೆಲ್ ರೂಫ್ ಟಾಪ್ ಹಾಲ್ ಅನ್ನು ಬಂದ್ ಮಾಡಿಸಲಾಗಿದೆ. ಇನ್ನು ವಲಯ ಕಚೇರಿ 9ರ ಮಹದೇವಪುರ ಮುಖ್ಯ ರಸ್ತೆಯಲ್ಲಿ ಸೆಲ್ಲರ್‌ನಲ್ಲಿ ಅಗ್ನಿ ಸುರಕ್ಷತೆ, ಎಕ್ಸಾಸ್ಟ್ ಫ್ಯಾನ್ ಹಾಗೂ ಸ್ವಚ್ಛತೆ ಇಲ್ಲದೆ ನಡೆಸಲಾಗುತ್ತಿದ್ದ ರೆಸ್ಟೋರೆಂಟ್ ಅನ್ನೂ ಪಾಲಿಕೆ ಅಧಿಕಾರಿಗಳು ಮುಚ್ಚಿಸಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ವಲಯ ಕಚೇರಿ 6ರ ಎಸಿ ಎಂ.ಎಸ್.ಪ್ರತಿಭಾ, ಅಭಿವೃದ್ಧಿ ಅಧಿಕಾರಿ ಜಗದೀಶ್, ಪರಿಸರ ಅಭಿಯಂತರರಾದ ಮೈತ್ರಿ, ಆರೋಗ್ಯ ಪರಿವೀಕ್ಷಕರಾದ ಮಂಜುಕುಮಾರ್, ಬಸವರಾಜ್, ಜೆಇಗಳಾದ ಮೋಹನ್, ಕೃಷ್ಣಮೂರ್ತಿ, ಧನುಷ್ ಪಾಲ್ಗೊಂಡಿದ್ದರು.

ವಲಯ ಕಚೇರಿ 4ರಲ್ಲಿ ಎರಡಕ್ಕೆ ಬೀಗ: ಮಹಾನಗರ ಪಾಲಿಕೆಯ ವಲಯ ಕಚೇರಿ 4ರಲ್ಲಿ ನಾಲ್ಕು ರೆಸ್ಟೋರೆಂಟ್ ಪರಿಶೀಲಿಸಿದ ಅಧಿಕಾರಿಗಳು ಎರಡಕ್ಕೆ ಬೀಗ ಜಡಿದು, ಇನ್ನೆರಡಕ್ಕೆ ನೋಟಿಸ್ ನೀಡಿದ್ದಾರೆ. ವಿವಿ ಮೊಹಲ್ಲಾದ ಗೋಕುಲಂ ಮುಖ್ಯ ರಸ್ತೆಯ ಲೀ ಟೆರೆಸ್, ಟಿಂಬರ್ ಗಾರ್ಡನ್ ರೆಸ್ಟೋರೆಂಟ್‌ಗಳಿಗೆ ಬೀಗ ಹಾಕಿದ್ದಾರೆ. ಈ ಎರಡು ರೆಸ್ಟೋರೆಂಟ್‌ಗಳಲ್ಲಿ ಅಗ್ನಿ ಸುರಕ್ಷತೆ ಬಗ್ಗೆ ಯಾವುದೇ ಮುನ್ನೆಚ್ಚರಿಕಾ ಕ್ರಮ ಕೈಗೊಂಡಿರಲಿಲ್ಲ. ಅಲ್ಲದೆ, ವೈರಿಂಗ್ ಸುರಕ್ಷಿತವಾಗಿರಲಿಲ್ಲ. ಬೆಂಕಿ ಕ್ಷಣಾರ್ಧದಲ್ಲಿ ಹರಡಲು ಸಹಕಾರಿಯಾಗುವ ಕೆಲ ವಸ್ತುಗಳನ್ನು ರೆಸ್ಟೋರೆಂಟ್ ಒಳಗೆ ಬಳಸಲಾಗಿತ್ತು. ಈ ಹಿನ್ನೆಲೆಯಲ್ಲಿ ಎರಡೂ ರೆಸ್ಟೋರೆಂಟ್‌ಗಳಿಗೆ ಬೀಗ ಹಾಕಲಾಗಿದೆ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಅಲ್ಲದೆ, ಕೆಲ ನಿಯಮವನ್ನು ಗಾಳಿಗೆ ತೂರಿರುವ ಹಿನ್ನೆಲೆಯಲ್ಲಿ ಒನ್ ಇಸ್ತಾ ಪಿಜ್ಜಾ ರೆಸ್ಟೋರೆಂಟ್, ಹೀಟ್ ಫಿಟ್ ಆನ್‌ಲೈನ್ ಬಿರಿಯಾನಿ ಪ್ಯಾರಡೈಸ್‌ಗೆ ನೋಟಿಸ್ ನೀಡಲಾಗಿದೆ. ಇವುಗಳಲ್ಲಿ ವೆಂಟಿಲೇಷನ್ ಇಲ್ಲದ ಕಾರಣ ಹಾಗೂ ಕೆಲ ನಿಯಮ ಅನುಸರಿಸುವಂತೆ ನೋಟಿಸ್ ನೀಡಲಾಗಿದೆ.

ವಲಯ ಕಚೇರಿ 4ರ ಎಸಿ ಮಹೇಶ್‌ಕುಮಾರ್ ಜಿಗಣಿ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ, ಪರಿಸರ ಅಭಿಯಂತರರಾದ ಶ್ರೀದೇವಿ, ಹೆಲ್ತ್ ಇನ್ಸ್‌ಪೆಕ್ಟರ್ ಪ್ರಕಾಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಧರ್ಮಾಧಿಕಾರಿ ಮಾರುತಿ ಗುರೂಜಿಯಿಂದ ಮೈಸೂರಲ್ಲಿ ಭಕ್ತರಿಗೆ ಆಶೀರ್ವಚನ

ಮೈಸೂರು, ಜೂ.19(ಜಿಎ)– ಹೊನ್ನಾವರದ ಬಂಗಾರಮಕ್ಕಿಯಲ್ಲಿನ ವೀರಾಂಜನೇಯ ಮಹಾ ಸಂಸ್ಥಾನಮ್‌ನ ಹೇಮಪುರ ಮಹಾಪೀಠಂನ ಧರ್ಮಾಧಿಕಾರಿ ಮಾರುತಿ ಗುರೂಜಿ ಜೂ.23 ರಿಂದ 25 ರವರೆಗೆ ನಗರದ ಕೃಷ್ಣಮೂರ್ತಿಪುರಂ ರಾಮ ಮಂದಿರದಲ್ಲಿ ಭಕ್ತರಿಗೆ ಆಶೀರ್ವಚನ ನೀಡಲಿದ್ದಾರೆ ಎಂದು ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂ.22 ರಂದು ರಾತ್ರಿ 8 ಗಂಟೆಗೆ ಅವರನ್ನು ಶ್ರೀರಾಮ ಮಂದಿರದಲ್ಲಿ ಮಂಗಳ ವಾದ್ಯಗಳೊಡನೆ ಸ್ವಾಗತಿಸಲಾಗುವುದು. 23 ರಂದು ಬೆಳಗ್ಗೆ 9.30ಕ್ಕೆ ರಾಮತಾರಕ ಹೋಮ–ಹವನ, ರಾತ್ರಿ 8.30ಕ್ಕೆ ತೀರ್ಥ ಫಲ ಮಂತ್ರಾಕ್ಷತೆ, 24ರಂದು ಬೆಳಗ್ಗೆ 10.30ಕ್ಕೆ ಸಿಂಧೂರ ಅರ್ಚನೆ ನಡೆಯಲಿದೆ, 108 ದಂಪತಿ ಭಾಗವಹಿಸಲಿದ್ದಾರೆ. ಜೂ.25ರಂದು ಸಂಜೆ 4 ಗಂಟೆಗೆ ಗುರುವಂದನಾ ಕಾರ್ಯಕ್ರಮ ನಡೆಯಲಿದ್ದು, ನಗರದ ವಿವಿಧ ಬ್ರಾಹ್ಮಣ ಸಂಘ ಸಂಸ್ಥೆಗಳಿಂದ ಗುರುಗಳಿಗೆ ಗುರು ನಮನವಿರಲಿದೆ ಎಂದರು.

ಈ ವೇಳೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ.ಹರೀಶ್‌ಗೌಡ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ. ಲಕ್ಷ್ಮೀದೇವಿ, ವಿ.ಮನು, ಪ್ರದೀಪ್‌ಗೌಡ, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ ಉಪಸ್ಥಿತರಿದ್ದರು.



ಮಾರುತಿ ಗುರೂಜಿ ಅವರ ನೇತೃತ್ವದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.06.2026 ಶನಿವಾರ, ಮಳೆ ನಕ್ಷತ್ರ: ಮೃಗಶಿರ 08.06.2026ರಿಂದ 21.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

■ **ಶಾಂತಲ ವಿದ್ಯಾಪೀಠ** : ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಯೋಗ ಚಿಕಿತ್ಸಕರಿಂದ ಯೋಗಾಸನ ಮತ್ತು ಪ್ರಾಣಾಯಾಮ, ಸ್ಥಳ: ಶಾಂತಲ ವಿದ್ಯಾಪೀಠ, ಬೆಳಗ್ಗೆ 6.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆನ್ನುನೋವು, ಕತ್ತು ನೋವಿನ ಸಮಸ್ಯೆಗಳಿಗೆ ಆಕ್ಯುಪಂಕ್ಚರ್, ಯೋಗ ಚಿಕಿತ್ಸಾ ಶಿಬಿರ, ಅರ್ಥ್ರೈಟಿಸ್, ಕುತ್ತಿಗೆ ನೋವು ಹಾಗೂ ಬೆನ್ನು ನೋವಿಗೆ ತಪಾಸಣಾ ಚಿಕಿತ್ಸಾ ಶಿಬಿರ, ಸಯಾಟೀಕ್/ಗೃಧ್ರಸಿ ರೋಗ, ಅಸೃಗ್ದರ (ಗರ್ಭಾಶಯ ರಕ್ತಸ್ರಾವ), ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ**: ರುಮಾಟಾಯ್ಡ್ ಅರ್ಥ್ರೈಟಿಸ್ (ಆಮವಾತ), ತುರಿಕೆ, ಮಕ್ಕಳಲ್ಲಿ ಕಂಡುಬರುವ ಕೆಮ್ಮು, ಜ್ವರ, ಅಸ್ತಮಾ ಸಮಸ್ಯೆಗಳಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಮೈಸೂರು, ಬೆಳಗ್ಗೆ 9.30 ರಿಂದ.

■ **ಕರ್ನಾಟಕ ಲೇಖಕಿಯರ ಸಂಘ, ಮೈಸೂರು ಘಟಕ** : ತಿಂಗಳ ತಿಳಿವು ಮಾಲಿಕೆ–2, ಲೇಖಕಿ ಶ್ರೀಮತಿ ಎಚ್.ಆರ್. ಲೀಲಾವತಿ ಅವರ ಆತ್ಮಕತೆ ಹಾಡಾಗಿ ಹರಿದಾಳೆ ಕೃತಿ ಬಿಡುಗಡೆ ಕಾರ್ಯಕ್ರಮ, ಕೃತಿ ಕುರಿತು : ಶ್ರೀಮತಿ ಕುಸುಮಾ ಆಯರಹಳ್ಳಿ, ಶ್ರೀಮತಿ ಸುಚಿತ್ರಾ ಹೆಗಡೆ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಬೆಳಗ್ಗೆ 10ಕ್ಕೆ.

■ **ಮಹಾಜನ ಎಜುಕೇಷನ್ ಸೊಸೈಟಿ, ಮಹಾಜನ ಕಾನೂನು ಕಾಲೇಜು** : ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮತ್ತು ಮಾನವ ಹಕ್ಕುಗಳು – ತಂತ್ರಜ್ಞಾನ ಯುಗದಲ್ಲಿ ಹೊಸ ಸವಾಲುಗಳು ಕುರಿತು ಕಾರ್ಯಾಗಾರ, ಉದ್ಘಾಟನೆ : ಹೈಕೋರ್ಟ್ ನ್ಯಾಯಾಧೀಶ ಇ.ಎಸ್. ಇಂದಿರೇಶ್, ಮುಖ್ಯ ಅತಿಥಿಗಳು : ಕರ್ನಾಟಕ ಕಾನೂನು ವಿವಿ, ಹುಬ್ಬಳ್ಳಿ ಕುಲಪತಿ ಪ್ರೊ. ಸಿ. ಬಸವರಾಜು, ಅಧ್ಯಕ್ಷತೆ : ಮಹಾಜನ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಬಿ.ಎಸ್. ರವಿಕುಮಾರ್, ಸ್ಥಳ: ಸುಬ್ಬಲಕ್ಷ್ಮಿ ಸಭಾಂಗಣ, ಜಯಲಕ್ಷ್ಮಿಪುರಂ, ಬೆಳಗ್ಗೆ 10ಕ್ಕೆ.

■ **ಶಾರಾವಿ ಫೌಂಡೇಶನ್, ಭವೇದ್ ಆಯುರ್ವೇದ** : ಉಚಿತ ಮಧುಮೇಹ ತಪಾಸಣೆ ಮತ್ತು ಆಯುರ್ವೇದ ಸಲಹಾ ಶಿಬಿರ, ಸ್ಥಳ: ಭವೇದ್, ಗೋಕುಲಂ 3ನೇ ಹಂತ, ಬೆಳಗ್ಗೆ 10 ರಿಂದ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು, ಉಜಿರೆಯ ಎಸ್‌ಡಿಎಂ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಕಾಲೇಜು, ಬೆಂಗಳೂರಿನ ಆರ್‌ಜಿಯುಎಚ್‌ಎಸ್** : 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ, ಮುಖ್ಯ ಅತಿಥಿಗಳು : ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಆರ್. ದಿನೇಶ್, ಜಿಎಸ್‌ಎಸ್‌ಎಸ್ ಯೋಗದ ಸಂಸ್ಥಾಪಕ ಯೋಗಾತ್ಮ ಶ್ರೀಹರಿ, ಮೈಸೂರಿನ ಸಮ್ಯಕ್ ಯೋಗ ಮತ್ತು ಆಯುರ್ವೇದ ಸಂಸ್ಥೆ ಸ್ಥಾಪಕ–ನಿರ್ದೇಶಕ ಯೋಗಾಚಾರ್ಯ ರಾಕೇಶ್, ಅಧ್ಯಕ್ಷತೆ : ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಾಚಾರ್ ಜೋಶಿ, ಸ್ಥಳ: ಪ್ರೊ. ಚಿನ್ನಸ್ವಾಮಿ ಶೆಟ್ಟಿ ಸಮ್ಮೇಳನ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ಸಾಹಿತ್ಯ ಅಕಾಡೆಮಿ, ಚಕೋರ, ಸಾಹಿತ್ಯ ವಿಚಾರ ವೇದಿಕೆ, ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು** : ವಿಶೇಷ ಉಪನ್ಯಾಸ ಮಾಲಿಕೆ ವಿಷಯ : ಕನ್ನಡ ನುಡಿ ಒಳಗೊಂಡ ವಿಚಾರದ ಲಯಗಳು, ಉದ್ಘಾಟನೆ : ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಲ್.ಎನ್. ಮುಕುಂದರಾಜ್, ವಿಶೇಷ ಉಪನ್ಯಾಸ : ಲೇಖಕ ಬಿ. ಮಹೇಶ್ ಹರವೆ, ಅಧ್ಯಕ್ಷತೆ : ಶೇಷಾದ್ರಿಪುರಂ ಪದವಿ ಕಾಲೇಜು ಪ್ರಿನ್ಸಿಪಾಲ್ ಡಾ. ಕೆ. ಸೌಮ್ಯ ಈರಪ್ಪ, ಉಪಸ್ಥಿತರು : ಅಕಾಡೆಮಿ ಸದಸ್ಯ ಸಂಚಾಲಕ ಪ್ರೊ. ಎಸ್. ಚಂದ್ರಕಿರಣ್ ಕುಳವಾಡಿ, ಡಾ. ಸಿ.ಪಿ. ಲಾವಣ್ಯ, ಡಾ. ಎನ್. ಯೋಗೇಶ್, ಡಾ. ಶಭನಾ ಮೈಸೂರು, ಸ್ಥಳ: ಶೇಷಾದ್ರಿಪುರಂ ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ದಿ ಮೈಸೂರು ಸಿಟಿ ಗಾಂಧಿನಗರ ಆದಿಕರ್ನಾಟಕ ಅಭಿವೃದ್ಧಿ ಸಂಘ** : ಪ್ರತಿಭಾ ಪುರಸ್ಕಾರ, ಉದ್ಘಾಟನೆ : ಶಾಸಕ ದರ್ಶನ್ ಧ್ರುವನಾರಾಯಣ್, ಅಧ್ಯಕ್ಷತೆ : ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ. ಡಿ. ಆನಂದ್, ಮುಖ್ಯ ಅತಿಥಿಗಳು : ಶಾಸಕ ತನ್ವೀರ್ ಸೇಠ್, ವಿಧಾನ ಪರಿಷತ್ ಸದಸ್ಯ ಕೆ. ವಿವೇಕಾನಂದ, ಸ್ಥಳ: ಸಂಘದ ಸಮುದಾಯ ಭವನ, ಗಾಂಧಿನಗರ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ** : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ. ಎನ್.ಎಸ್. ರಾಮೇಗೌಡ ಅವರ ಎಜುಕೇಷನ್ : ಆನ್ ಓವರ್‌ವ್ಯೂ ಆಫ್ ಫಾರ್ಮಲ್ ಓಪನ್ ಅಂಡ್ ಡಿಸ್ಟೆನ್ಸ್ ಲರ್ನಿಂಗ್ ಪುಸ್ತಕ ಬಿಡುಗಡೆ ಸಮಾರಂಭ, ಸಾನ್ನಿಧ್ಯ : ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ ಜಿ. ಮಹಾರಾಜ್, ಉದ್ಘಾಟನೆ : ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಕೃತಿ ಲೋಕಾರ್ಪಣೆ : ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಪ್ರಾಸ್ತಾವಿಕ ನುಡಿ: ಕರಾಮುವಿವಿ ವಿಶ್ರಾಂತ ಕುಲಪತಿ ಡಾ. ಎನ್.ಎಸ್. ರಾಮೇಗೌಡ, ಪುಸ್ತಕ ಪರಿಚಯ : ಕರಾಮುವಿವಿ ಮಾಜಿ ಡೀನ್ ಪ್ರೊ. ಚಂಬಿ ಪುರಾಣಿಕ್, ಗೌರವ ಅತಿಥಿಗಳು : ಶಾಸಕರಾದ ಡಿ. ರವಿಶಂಕರ್, ಕೆ. ಹರೀಶ್‌ಗೌಡ, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಸ್ಥಳ: ಘಟಿಕೋತ್ಸವ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಮನೋವಿಜ್ಞಾನ ಹಿರಿಯ ವಿದ್ಯಾರ್ಥಿಗಳ ಸಂಘ** : ಪ್ರಧಾನ ಮಂತ್ರಿ ಪ್ರೊಫೆಸರ್‌ಶಿಪ್ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಮೇವಾಸಿಂಗ್ ಅವರಿಗೆ ಅಭಿನಂದನಾ ಕಾರ್ಯಕ್ರಮ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉಪಸ್ಥಿತರು : ಮನೋವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಸಂಪತ್‌ಕುಮಾರ್, ಸ್ಥಳ: ಸೆಮಿನಾರ್ ಹಾಲ್, ಬೆಳಗ್ಗೆ 11.30ಕ್ಕೆ.

■ **ಕಲಾಸುರುಚಿ** : ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 937, ಕಥೆ ಹೇಳುವವರು: ಶ್ರೀಮತಿ ಸರಸ್ವತಿ ಕೆ, ನಿವೃತ್ತ ಶಿಕ್ಷಕರು, ಕೆಎಆರ್‌ಪಿ ಬಾಡಿಗಾರ್ಡ್ ಲೈನ್ಸ್ ಹಿರಿಯ ಪ್ರಾಥಮಿಕ ಶಾಲೆ, ಮೈಸೂರು ದಕ್ಷಿಣ ವಿಭಾಗ, ಮೈಸೂರು. ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಯೇಸುವಿನ ಪವಿತ್ರ ಹೃದಯ ದೇವಾಲಯ** : ದೇವಾಲಯದ ವಾರ್ಷಿಕೋತ್ಸವ, ಮೈಸೂರು ಧರ್ಮಪ್ರಾಂತ್ಯದ ವಿಶ್ರಾಂತ ಗುರು ಬೆಕೆಟ್ ಡಿಸೋಜ ಅವರಿಂದ ದಿವ್ಯ ಬಲಿಪೂಜೆ, ಸ್ಥಳ: ಯೇಸುವಿನ ಪವಿತ್ರ ಹೃದಯ ದೇವಾಲಯ, ಯಾದವಗಿರಿ, ಸಂಜೆ 5.30ಕ್ಕೆ.

■ **ಬಿಎಸ್‌ಎಸ್ ವಿದ್ಯೋದಯ, ರಾಗಾ ಮ್ಯೂಸಿಕ್ ಅಕಾಡೆಮಿ** : ಭಗಿನಿ ರಾಗ ಸೌರಭ, ವಿದುಷಿ ಅಶ್ವಿನಿ ಕೊಲಿಕ್ಕಜ್ಜೆ ಅವರಿಂದ ಸಂಗೀತ ಕಾರ್ಯಕ್ರಮ, ವಿದುಷಿ ತನ್ಮಯಿ–ವಯೋಲಿನ್, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ವಿದ್ವಾನ್ ಶ್ರೀನಿಧಿ ಕೌಂಡಿನ್ಯ–ಘಟಂ, ಸ್ಥಳ: ಬಿಎಸ್‌ಎಸ್ ವಿದ್ಯೋದಯ, ರಾಘವೇಂದ್ರಸ್ವಾಮಿ ಮಠದ ಸಮೀಪ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಮಹಾಮೇಧಾನಂದ ಅವರಿಂದ ಲಿವಿಂಗ್ ಅಟ್ ದಿ ಸೋರ್ಸ್ ಯೋಗಾ ಟೀಚಿಂಗ್ಸ್ ಆಫ್ ವಿವೇಕಾನಂದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಅಖಿಲ ಭಾರತೀಯ ಸಾಹಿತ್ಯ ಪರಿಷತ್, ಮೈಸೂರು ಜಿಲ್ಲೆ, ರಾಷ್ಟ್ರೋತ್ಥಾನ ಸಾಹಿತ್ಯ, ವನವಾಸಿ ಕಲ್ಯಾಣ, ಮಂಥನ** : 'ಅವಿಶ್ರಾಂತ ಧ್ಯೇಯಜೀವಿ' ಮೈ.ಚ. ಜಯದೇವ : ಬದುಕು–ನೆನಪು ಗ್ರಂಥದ ಲೋಕಾರ್ಪಣೆ ಸಮಾರಂಭ, ಗ್ರಂಥ ಲೋಕಾರ್ಪಣೆ : ಮಂಗಳೂರು ಗಣೇಶ ಬೀಡಿ ವರ್ಕ್ಸ್ ಪಾಲುದಾರರಾದ ಜಗನ್ನಾಥ್ ಶೆಣೈ, ಮುಖ್ಯ ಭಾಷಣಕಾರರು : ರಾ.ಸ್ವ. ಸಂಘ ಜೇಷ್ಠ ಪ್ರಚಾರಕ ಸು. ರಾಮಣ್ಣ, ಸ್ಥಳ: ಮಾಧವ ಕೃಪಾ, ಜೆಎಲ್‌ಬಿ ರಸ್ತೆ, ಸಂಜೆ 6.30ಕ್ಕೆ.

■ **ಭಾರತೀಯ ವಿದ್ಯಾಭವನ** : ಕಲಾಯೋಗಿ ಗುರು ವಿದ್ವಾನ್ ಎಸ್. ರಘುನಂದನ್ ಅವರಿಂದ ಸುಂದರ ಕಾಂಡ ಕಾರ್ಯಕ್ರಮ, ಸ್ಥಳ: ತಾತಾಚಾರಿ ಸಭಾಂಗಣ, ಭಾರತೀಯ ವಿದ್ಯಾಭವನ, ವಿಜಯನಗರ ಮೊದಲನೇ ಹಂತ, ಸಂಜೆ 6ಕ್ಕೆ.

■ **ಮೈಸೂರಿನ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ(ಐಐಇಟಿ)** : ವತಿಯಿಂದ ಜೋಧ್‌ಪುರದ ಅಭಿನಯ ಗುರುಕುಲ್ ತಂಡದ ಎರಡು ವಿಶಿಷ್ಟ ಹಿಂದಿ ನಾಟಕಗಳ ಪ್ರದರ್ಶನ, ರಘುನಂದನ್ ತ್ರಿವೇದಿ ಕೃತಿ ಆಧಾರಿತ 'ಆಲ್ಬಮ್' ನಾಟಕ, ಸ್ಥಳ: ಹಾರ್ಡ್‌ವಿಕ್ ಶಾಲೆಯ ಐಐಇಟಿ ಆವರಣ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ಕೃಷ್ಣ ಗಾನಸಭಾ** : ಸ್ಮರಣಾರ್ಥ ಸಂಗೀತ ಕಾರ್ಯಕ್ರಮ, ವಿದುಷಿ ಅನಘ ಭಾರದ್ವಾಜ್ ಅವರಿಂದ ಗಾಯನ, ವಿದುಷಿ ಪ್ರೇರಣ ನವೀನ್–ವಯೋಲಿನ್, ವಿದ್ವಾನ್ ಸುಂದರೇಶ್–ಮೃದಂಗ, ಸ್ಥಳ: ಆಳ್ವಾರ್ ಕಲಾ ಭವನ, ಸಂಜೆ 6ಕ್ಕೆ.

■ **ರಂಗಾಯಣ** : ಶಿವಮೊಗ್ಗ ರಂಗಾಯಣದ ಕಲಾವಿದರಿಂದ ಸ್ವಾತಂತ್ರ್ಯದ ಓಟ ನಾಟಕ ಪ್ರದರ್ಶನ, ನಿರ್ದೇಶನ : ನಟರಾಜ್ ಹೊನ್ನವಳ್ಳಿ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಪ್ರಾಯೋಜಿತ ಕಾರ್ಯಕ್ರಮ – 'ಹರಿತ್ತೆ ಜಗತ್ತು' ಸಸ್ಯ ವೈದ್ಯರ ಕಿವಿಮಾತು, ಪ್ರಸ್ತುತಿ : ಡಾ. ವಸಂತ ಕುಮಾರ್ ತಿಮಕಾಪುರ, ಪ್ರಾಯೋಜಕರು –ಗ್ರೀನ್ ಲೈಫ್ ಕ್ರಾಪ್ ಟೆಕ್, ಮೈಸೂರು, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಯೋಗದ ಜಗತ್ತು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಚಿಟ್ಟಿಬಾಬು–ವೀಣಾ ವಾದನ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು' ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ– 14 ವರ್ಷಗಳ ನಂತರ, ರಚನೆ–ಸೇವಂತಿ ಡಿ. ರೈ, ನಿರ್ದೇಶನ–ಹೆಚ್.ಎಸ್. ಸರಸ್ವತಿ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ ಆಯ್ದ ಕಾರ್ಯಕ್ರಮ), 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ವಿಜ್ಞಾನದ ಮುನ್ನಡೆ, 6.50 ಕೃಷಿರಂಗ :ಕಿಸಾನ್ ವಾಣಿ– ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ ಗುಂಡ್ಲುಪೇಟೆ ತಾಲ್ಲೂಕು, ಆಲತ್ತೂರುಗ್ರಾಮದ ಕೃಷಿಕ ದಂಪತಿ ಎಂ. ಶಿವಮೂರ್ತಿ ಹಾಗೂ ಜಿ. ಶ್ರುತಿ, ಪ್ರಸ್ತುತಿ–ಎನ್. ಕೇಶವ ಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ವಿವೇಕ್ ಕರ್ಮಹೆ – ತುಮರಿ, ದಾದ್ರ– ಗಾಯನ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 20 ಶನಿವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 65 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಗ್ಯಾರಂಟಿಗಳಿಗೆ ಮರು ಅರ್ಜಿ ಸಲ್ಲಿಸಬೇಕಿಲ್ಲ

ಹಾಲಿ ಫಲಾನುಭವಿಗಳ ಪಟ್ಟಿಯಲ್ಲಿ ಪರಿಷ್ಕರಣೆ ನಿರ್ಧಾರ

ಬೆಂಗಳೂರು: ರಾಜ್ಯ ಸರ್ಕಾರ ಗ್ಯಾರಂಟಿ ಫಲಾನುಭವಿಗಳಿಗೆ ಶುಭ ಸುದ್ದಿ ಕೊಟ್ಟಿದೆ. ಗ್ಯಾರಂಟಿ ಯೋಜನೆಗಳಿಗೆ ಮರು ಅರ್ಜಿ ಸಲ್ಲಿಸುವಂತಿಲ್ಲ ಎಂಬ ಮಹತ್ವದ ನಿರ್ಧಾರ ವನ್ನು ಸರ್ಕಾರ ಕೈಗೊಂಡಿದೆ.

ಗ್ಯಾರಂಟಿ ಪರಿಷ್ಕರಣೆ ಪೂರ್ವಭಾವಿಯಾಗಿ ಗ್ಯಾರಂಟಿ ಕಮಿಟಿ ಹಾಗೂ ಅಧಿಕಾರಿಗಳ ಜೊತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶುಕ್ರವಾರ ಸಭೆ ನಡೆಸಿದರು. ಗ್ಯಾರಂಟಿ ಯೋಜನೆಗೆ ಮರು ಅರ್ಜಿ




ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಗ್ಯಾರಂಟಿ ಪರಿಷ್ಕರಣೆ ಸಂಬಂಧ ಸಭೆ ನಡೆಸಿದರು.

ಸಲ್ಲಿಸುವಂತಿಲ್ಲ. ಹೊಸದಾಗಿ ಅರ್ಜಿ ಬದಲಾಗಿ ಮರು ಪರಿಶೀಲನೆ ಮಾಡಲು ಸಭೆಯಲ್ಲಿ ಸರ್ಕಾರ ತೀರ್ಮಾನಿಸಿದೆ.

ಈಗಿರುವ ಫಲಾನುಭವಿಗಳ ಮರು ಪರಿಶೀಲನೆ ನಡೆಸಲು ತೀರ್ಮಾನಿಸಲಾಗಿದೆ. ಮರು ಪರಿಶೀಲನೆ ಯಾರು ಮಾಡ ಬೇಕು, ಹೇಗೆ ಮಾಡಬೇಕು ಎಂಬುದನ್ನು ಮೂರು ದಿನದೊಳಗೆ ಅಂತಿಮಪಡಿಸಿ ತಿಳಿಸಲು ಸಿಎಂ ಸೂಚನೆ ನೀಡಿದ್ದಾರೆ. ಒಬ್ಬೇ ಒಬ್ಬ ಅರ್ಹ ಫಲಾನುಭವಿಗಳಿಗೆ ■6ನೇ ಪುಟಕ್ಕೆ

ಚಾಮುಂಡಿಬೆಟ್ಟದ ಆಷಾಢ ಪೂಜಾ ಮಹೋತ್ಸವ

ಲಲಿತಮಹಲ್ ಪ್ಯಾಲೆಸ್ ಬಳಿಯ ಮೈದಾನದಲ್ಲೇ ಭಕ್ತರ ವಾಹನ ನಿಲುಗಡೆ, ಉಚಿತ ಬಸ್ ಸೇವೆ



ಪ್ರಮೋದಾದೇವಿ



ಲಕ್ಷ್ಮಿಕಾಂತರೆಡ್ಡಿ




ಮೈಸೂರು, ಜೂ.19– ಚಾಮುಂಡಿ ಬೆಟ್ಟದಲ್ಲಿ ಜರುಗುವ ಆಷಾಢ ಮಾಸದ ಪೂಜಾ ಮಹೋತ್ಸವಕ್ಕೆ ತೆರಳುವ ಭಕ್ತರಿಗೆ ಈ ಬಾರಿಯೂ ಲಲಿತ ಮಹಲ್ ಪ್ಯಾಲೆಸ್ ಬಳಿಯ ಮೈದಾನದಲ್ಲೇ ಉಚಿತ ಬಸ್ ವ್ಯವಸ್ಥೆ, ಜೊತೆಗೆ ಅವರ ವಾಹನ ನಿಲುಗಡೆ ವ್ಯವಸ್ಥೆ ಮಾಡಲಾಗುತ್ತಿದೆ.

ಇಂದು ಅರಮನೆ ನಿವಾಸದಲ್ಲಿ ರಾಜ ವಂಶಸ್ಥರಾದ ಶ್ರೀಮತಿ ಪ್ರಮೋದಾದೇವಿ ಒಡೆಯರ್ ಅವರನ್ನು ಜಿಲ್ಲಾಧಿಕಾರಿ ಲಕ್ಷ್ಮಿ ಕಾಂತ ರೆಡ್ಡಿ ಅವರು ಭೇಟಿಯಾಗಿ, ಎಂದಿನಂತೆ ಚಾಮುಂಡಿಬೆಟ್ಟದಲ್ಲಿ ಜರುಗುವ ಆಷಾಢ ಮಾಸದ ಪೂಜಾ ಕಾರ್ಯಗಳಿಗೆ ತೆರಳುವ ಭಕ್ತರಿಗೆ ಮೂಲ ಸೌಕರ್ಯ ಕಲ್ಪಿಸುವ ಸಂಬಂಧ ಪ್ರಸ್ತಾಪಿಸಿದ್ದಾರೆ. ಅದಕ್ಕೆ ಮಹಾರಾಣಿಯವರು ಸಂತೋಷದಿಂದಲೇ ಸಮ್ಮತಿಸಿದ್ದಾರೆ.

ಆಷಾಢ ಮಾಸದಲ್ಲಿ ಚಾಮುಂಡಿಬೆಟ್ಟಕ್ಕೆ ಉಚಿತ ಬಸ್ ಸೇವೆ ಹಾಗೂ ಭಕ್ತರ ವಾಹನ ನಿಲುಗಡೆಗೆ ಲಲಿತಮಹಲ್ ಪ್ಯಾಲೇಸ್ ಬಳಿಯ ಮೈದಾನವನ್ನು ಬಳಸಿಕೊಳ್ಳಲು ಮಹಾರಾಣಿ ಪ್ರಮೋದಾದೇವಿ ಅವರು ಒಪ್ಪಿಗೆ ಸೂಚಿಸಿದ್ದಾರೆ. ಹಾಗಾಗಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಮೇಕೆದಾಟು ಯೋಜನೆ ವಿರೋಧಿಸಿ ತಮಿಳುನಾಡು ವಿಧಾನಸಭೆಯಲ್ಲಿ ಸರ್ವಾನುಮತದ ನಿರ್ಣಯ ಅಂಗೀಕಾರ



ಚೆನ್ನೈ: ಕರ್ನಾಟಕದ ಮೇಕೆದಾಟು ಅಣೆಕಟ್ಟು ಯೋಜನೆಗೆ ತಾಂತ್ರಿಕ ಮತ್ತು ಪರಿಸರ ಅನುಮತಿ (ಕ್ಲಿಯರೆನ್ಸ್) ಸೇರಿ ಯಾವುದೇ ಅನುಮೋದನೆ ನೀಡದಂತೆ ಕೇಂದ್ರ ಸರ್ಕಾರವನ್ನ ಒತ್ತಾಯಿಸುವ ನಿರ್ಣಯವನ್ನು ತಮಿಳುನಾಡು ವಿಧಾನಸಭೆ ಶುಕ್ರವಾರ ಸರ್ವಾನುಮತದಿಂದ ಅಂಗೀಕರಿಸಿತು. ಮುಖ್ಯಮಂತ್ರಿ ಸಿ ಜೋಸೆಫ್ ವಿಜಯ್ ನಿರ್ಣಯ ಮಂಡಿಸಿದರು.

ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಅಣೆಕಟ್ಟು ನಿರ್ಮಿಸುವ ಕರ್ನಾಟಕ ಸರ್ಕಾರದ ನಿರ್ಧಾರ ಏಕಪಕ್ಷೀಯ ಕ್ರಮವಾಗಿದೆ. ಮೇಕೆದಾಟು ಯೋಜನೆಗೆ ಸಂಬಂಧಿಸಿದ ಪ್ರಸ್ತಾವನೆಯು ಕಾವೇರಿ ಜಲ ವಿವಾದ ನ್ಯಾಯಮಂಡಳಿಯ 2007 ರ ಅಂತಿಮ ತೀರ್ಪು ಮತ್ತು ಸುಪ್ರೀಂ ಕೋರ್ಟ್‌ನ 2018 ರ ಆದೇಶವನ್ನ ■6ನೇ ಪುಟಕ್ಕೆ

ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನವನ್ನ ಗಂಭೀರವಾಗಿ ಪರಿಗಣಿಸಿದ ಬಿಜೆಪಿ ವರಿಷ್ಠರು

- ಸಿ.ಟಿ.ರವಿ ನೇತೃತ್ವದಲ್ಲಿ ಸತ್ಯಶೋಧನಾ ಸಮಿತಿ ರಚನೆ
- ಸಮಿತಿ ವರದಿಯೊಂದಿಗೆ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಪಕ್ಷ ನಾಯಕ ಆರ್. ಅಶೋಕ್‌ಗೆ ಜೂ. 27ಕ್ಕೆ ದೆಹಲಿಗೆ ಬುಲಾವ್

ಬೆಂಗಳೂರು, ಜೂನ್ 19(ಕೆಎಂಶಿ)– ರಾಜ್ಯ ವಿಧಾನಸಭೆಯಿಂದ ವಿಧಾನ ಪರಿಷತ್‌ನ 7 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಶಾಸಕರಿಂದ ಅಡ್ಡ ಮತದಾನ ಪ್ರಕರಣವನ್ನು ಪಕ್ಷದ ದೆಹಲಿ ವರಿಷ್ಠರು ಗಂಭೀರವಾಗಿ ಪರಿಗಣಿಸಿದ್ದಾರೆ.

ಅಡ್ಡ ಮತದಾನ ಕುರಿತಂತೆ ರಾಜ್ಯ ನಾಯಕರಿಂದ ವರದಿ ಕೇಳಿರುವ ವರಿಷ್ಠರು, ರಾಜ್ಯ ನಾಯಕತ್ವದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಡ್ಡ ಮತದಾನದ ಸತ್ಯಾಸತ್ಯತೆ ಮತ್ತು ವಾಸ್ತವಿಕತೆ ತಿಳಿಯಲು, ಪಕ್ಷದ ಮಾಜಿ ಪ್ರಧಾನ ಕಾರ್ಯದರ್ಶಿ ಹಾಗೂ ಹಾಲಿ ಶಾಸಕ ಸಿ.ಟಿ.ರವಿ ನೇತೃತ್ವದಲ್ಲಿ ಮೂವರು ಸದಸ್ಯರ ಸತ್ಯ ಶೋಧನಾ ಸಮಿತಿ ರಚಿಸಲಾಗಿದೆ.

ಮಾಜಿ ಸಚಿವ ಎನ್.ಮಹೇಶ್, ವಿಧಾನ ಸಭಾ ಸದಸ್ಯ ಮಹೇಶ್ ಟೆಂಗಿನಕಾಯಿ ಸಮಿತಿಯ ಇತರ ಸದಸ್ಯರಾಗಿದ್ದಾರೆ. ಘಟನೆ ಬಗ್ಗೆ ಪೂರ್ಣ ಮಾಹಿತಿ ಸಿದ್ಧಪಡಿಸಿ, ಜೂನ್ 27ರಂದು ದೆಹಲಿಗೆ ■6ನೇ ಪುಟಕ್ಕೆ

ರಾಜ್ಯ ಬಿಜೆಪಿಯಲ್ಲಿನ ಮೀರ್ ಸಾದಿಕ್‌ಗಳಿಗೆ ತಕ್ಕ ಪಾಠ

ಅಡ್ಡ ಮತದಾನ ಮಾಡಿದವರ ಮಾಹಿತಿ ಇದೆ



ಬೆಂಗಳೂರು, ಜೂನ್ 19(ಕೆಎಂಶಿ)– ರಾಜ್ಯ ಬಿಜೆಪಿಯಲ್ಲಿನ ಮೀರ್ ಸಾದಿಕ್‌ಗಳಿಗೆ ತಕ್ಕ ಪಾಠ ಕಲಿಸಲೇಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇಂದಿಲ್ಲಿ ಎಚ್ಚರಿಸಿದ್ದಾರೆ. ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ಬಿಜೆಪಿ ಶಾಸಕರ ಕುರಿತು ಪ್ರತಿಕ್ರಿಯಿಸಿದ ಅವರು, ಪಕ್ಷದ ಅಧಿಕೃತ ಅಭ್ಯರ್ಥಿಗಳ ವಿರುದ್ಧವೇ ಅಡ್ಡ ಮತದಾನ ■6ನೇ ಪುಟಕ್ಕೆ

ಬಿಡದಿ ಟೌನ್‌ಶಿಪ್‌ಗೆ ಭೂಮಿ ಕೊಟ್ಟ ರೈತರಿಗೆ ಚೆಕ್ ವಿತರಿಸಿದ ಸರ್ಕಾರ

ರಾಮನಗರ, ಜೂ.19– ಬಿಡದಿ ಟೌನ್‌ಶಿಪ್‌ಗೆ ಜಾಗ ಕೊಟ್ಟ ರೈತರಿಗೆ ರಾಜ್ಯ ಸರ್ಕಾರ ಪರಿಹಾರದ ಚೆಕ್ ವಿತರಣೆ ಮಾಡಿದೆ. ಸಾಂಕೇತಿಕವಾಗಿ 7 ಮಂದಿಗೆ ಶುಕ್ರವಾರ ಶಾಸಕ ಹೆಚ್.ಸಿ. ಬಾಲಕೃಷ್ಣ ಚೆಕ್ ವಿತರಣೆ ಮಾಡಿದರು. ಜಿಬಿಡಿಎ ಅಧ್ಯಕ್ಷ ಗಾಣಕಲ್ ನಟರಾಜು ನೇತೃತ್ವದಲ್ಲಿ ಚೆಕ್ ವಿತರಿಸಲಾಯಿತು.

ಇದಕ್ಕೂ ಮೊದಲು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಶಾಸಕ ಬಾಲಕೃಷ್ಣ, ಒಂದು ಎಕರೆಗೆ 2 ಕೋಟಿ 30 ಲಕ್ಷದ 7 ಸಾವಿರ ರೂ. ಪರಿಹಾರ ಹಣ ನೀಡಲಾಗುವುದು. ಜಮೀನಿನಲ್ಲಿ ಬೆಳೆದ ಬೆಳೆಗೂ ■6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ರೀ ನಾನ್ಯಾವಾಗ್ಲೂ ನಿಮ್ಮ ಹೃದಯದಲ್ಲೇ ಇರಬೇಕು?
ಗಂಡ : ಆಯ್ತು ಕಣೆ. ಆದ್ರೆ ಅಲ್ಲಿರುವ ಬೇರೆ ಹೆಂಗಸರೊಂದಿಗೆ ಜಗಳ ಆಡಬೇಡ.

ಮೈಸೂರು ಮಿತ್ರ
ಶನಿವಾರ, ಜೂನ್ 20, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಸುಮ್ಮೆ ತಮಾಷೆ ಮಾಡಿದೆ ಅನ್ನುವುದರ ಹಿಂದೆ ನಿಜ ಇರುತ್ತೆ. ಏನಾದರೂ ಮಾಡ್ಕೋ ಅನ್ನುವುದರ ಹಿಂದೆ ಕಾಳಜಿ ಇರುತ್ತೆ. ಇರ್ಲಿ ಪರವಾಗಿಲ್ಲ ಅನ್ನುವುದರ ಹಿಂದೆ ನೋವು ಇರುತ್ತೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಕಿಡಿ ಸಣ್ಣದಾದರೂ ಕಾಡೆಲ್ಲವನ್ನು ಸುಡುತ್ತದೆ.

ನಿಮ್ಮ ಪತ್ರಗಳು

ಒತ್ತಡ ಕಡಿಮೆ ಮಾಡಲು ಎಲ್ಲಾ ಜಿಲ್ಲೆಗಳಲ್ಲೂ ಜಯದೇವ ಆಸ್ಪತ್ರೆ ತೆರೆಯಲಿ

ಮಾನ್ಯರೆ,

ಮೈಸೂರಿನ ಪ್ರಸಿದ್ಧ ಜಯದೇವ ಆಸ್ಪತ್ರೆಯಲ್ಲಿ ಕಳೆದ 24 ಗಂಟೆಯ ಅವಧಿಯಲ್ಲಿ 11 ರೋಗಿಗಳು ಸಾವನ್ನಪ್ಪಿದ್ದಾರೆ ಎಂದು ಹೇಳಲಾಗುತ್ತಿದೆ. ಈ ಸಾವುಗಳ ಹಿಂದಿನ ವಾಸ್ತವಾಂಶ ಬಹಳಷ್ಟು ಸಾರ್ವಜನಿಕರಿಗೆ ತಿಳಿದಿರುವುದಿಲ್ಲ.

ಮೈಸೂರಿನ ಕೆಲವು ಖಾಸಗಿ ನರ್ಸಿಂಗ್ ಹೋಮ್‌ಗಳು ಮತ್ತು ಖಾಸಗಿ ಆಸ್ಪತ್ರೆಯಲ್ಲಿ ಹೃದ್ರೋಗ ಚಿಕಿತ್ಸೆಗೆ ಸಂಬಂಧಿಸಿದಂತೆ ದಾಖಲಾದರೆ, ಅಲ್ಲಿನ ವೈದ್ಯರು ರೋಗಿಗೆ ಚಿಕಿತ್ಸೆ ನೀಡಿ, ರೋಗಿಯ ಹೆಸರಿನಲ್ಲಿ ಆರೋಗ್ಯ ವಿಮೆ ಹಣ ಆಸ್ಪತ್ರೆಗೆ ಸಂದಾಯವಾಗುವ ತನಕವೂ ರೋಗಿಯನ್ನು ಆಸ್ಪತ್ರೆಯಲ್ಲಿ ಇಟ್ಟುಕೊಂಡು ಚಿಕಿತ್ಸೆ ಫಲಕಾರಿಯಾಗದೇ ಹೋಗುವ ಲಕ್ಷಣ ಕಂಡು ಬಂದಾಗ, ರೋಗಿ ಇನ್ನು ಬದುಕುಳಿಯುವ ಸಾಧ್ಯತೆಗಳು ಇಲ್ಲ ಎಂಬ ತೀರ್ಮಾನಕ್ಕೆ ಬಂದು (ಬ್ರಾಡ್‌ಡೆಡ್ ಎಂದು ಖಚಿತಪಡಿಸಿಕೊಂಡು) ಚಿಕಿತ್ಸೆ ನೀಡಿದ ವೈದ್ಯರು, ರೋಗಿಯ ಸಂಬಂಧಿಕರಿಗೆ ನಾವು ಶಕ್ತಿ ಮೀರಿ ರೋಗಿಯನ್ನು ಉಳಿಸಲು ಪ್ರಯತ್ನ ಮಾಡಿದ್ದೇವೆ. ರೋಗಿಯು ಚಿಕಿತ್ಸೆಗೆ ಸ್ಪಂದಿಸುತ್ತಿಲ್ಲ. ನೀವು ಈ ಕೂಡಲೇ ರೋಗಿಯನ್ನು ಡಿಸ್ಚಾರ್ಜ್ ಮಾಡಿಸಿಕೊಂಡು ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ಮೈಸೂರಿನ ಜಯದೇವ ಆಸ್ಪತ್ರೆಗೆ ದಾಖಲು ಮಾಡಿ ಎಂದು ರೋಗಿಯನ್ನು ಆ ಕೂಡಲೇ ಡಿಸ್ಚಾರ್ಜ್ ಮಾಡುತ್ತಾರೆ.

ರೋಗಿಯ ಸಂಬಂಧಿಕರಿಗೆ ದಿಕ್ಕು ತೋಚದೇ ರೋಗಿಯ ಉಳಿಯಬಹುದೆಂದು ಜಯದೇವ ಆಸ್ಪತ್ರೆಗೆ ದಾಖಲು ಮಾಡುತ್ತಾರೆ. ಅಲ್ಲಿನ ವೈದ್ಯರು ಚಿಕಿತ್ಸೆ ಪ್ರಾರಂಭಿಸುವ ಕೆಲವೇ ಗಂಟೆಗಳಲ್ಲಿ ರೋಗಿ ಸಾವನ್ನಪ್ಪುತ್ತಾರೆ. ಕಡೆಗೆ ಆ ರೋಗಿ ಜಯದೇವ ಆಸ್ಪತ್ರೆಯಲ್ಲಿ ಸಾವನ್ನಪ್ಪುತ್ತಾರೆ. ಏಕೆಂದರೆ ಇದು ನಮ್ಮ ದೂರದ ಸಂಬಂಧಿಕರಿಗೆ ಆದ ನೈಜ ಘಟನೆ. ಈ ಕಾರಣದಿಂದ ಜಯದೇವ ಆಸ್ಪತ್ರೆಯಲ್ಲಿ ಹೆಚ್ಚಿನ ಸಾವಿನ ಪ್ರಕರಣಗಳು ದಾಖಲಾಗುತ್ತಿವೆ. ಮೈಸೂರಿನ ಜಯದೇವ ಆಸ್ಪತ್ರೆಯಲ್ಲಿ ಪ್ರತಿ ದಿನ ಒಂದು ಸಾವಿರ ಹೊರ ರೋಗಿಗಳ ತಪಾಸಣೆ ನಡೆಯುತ್ತಿದೆ ಎಂದು ಹೇಳಲಾಗುತ್ತಿದೆ. ಈ ಒತ್ತಡ ಕಡಿಮೆ ಮಾಡಲು ರಾಜ್ಯ ಸರ್ಕಾರ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಜಯದೇವ ಆಸ್ಪತ್ರೆ ತೆರೆದು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು. ಇತ್ತೀಚೆಗೆ ಹೃದಯಕ್ಕೆ ಸಂಬಂಧಿಸಿದ ರೋಗಿಗಳ ಸಂಖ್ಯೆಯೂ ಗಣನೀಯವಾಗಿ ಪ್ರಮಾಣದಲ್ಲಿ ಹೆಚ್ಚಾಗುತ್ತಿದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಯಾವುದೇ ಪರೀಕ್ಷೆ ಆದರೂ ಮಕ್ಕಳಲ್ಲಿ ಆತ್ಮ ವಿಶ್ವಾಸ ತುಂಬಬೇಕು

ಮಾನ್ಯರೆ,

ನೀಟ್ ಪ್ರಶ್ನೆ ಪತ್ರಿಕೆಯ ಸೋರಿಕೆಯಿಂದ ಸಮಾಜದಲ್ಲಿ ಅನೇಕ ಅವಘಡಗಳು ಸಂಭವಿಸಿವೆ. ಇದು ಬೇಸರದ ವಿಷಯ. ಈ ಭಾನುವಾರ ಜೂನ್ 21ರಂದು ನಡೆಯುವ ಪರೀಕ್ಷೆಗೆ ಪೋಷಕರ ಪ್ರೋತ್ಸಾಹ ಬೇಕು. ಯಾವುದೇ ಹುದ್ದೆಯಾದರೂ ಪ್ರಾಮಾಣಿಕ ಪ್ರಯತ್ನ ಬೇಕು. ಡಾಕ್ಟರ್ ಹುದ್ದೆಯೊಂದೇ ಹುದ್ದೆಯಲ್ಲ. ಈ ಸಮಯದಲ್ಲಿ ಮಕ್ಕಳಿಗೆ ಪ್ರೀತಿ, ಧೈರ್ಯ, ಪ್ರೋತ್ಸಾಹ ನೀಡಿ ಕಳುಹಿಸಿದರೆ ಅವರಲ್ಲಿ ಆತ್ಮ ವಿಶ್ವಾಸ ಹೆಚ್ಚಾಗುತ್ತದೆ. ಇದರಿಂದ ಪರೀಕ್ಷೆ ಹಾಲ್‌ನಲ್ಲಿ ಮಕ್ಕಳಿಗೆ ಭಯ ನಿವಾರಣೆಯಾಗುತ್ತದೆ. ಉತ್ತರಗಳು ತಾನಾಗಿಯೇ ನೆನಪಿಗೆ ಬರುತ್ತದೆ. ಮಕ್ಕಳಿಗೆ ಪರೀಕ್ಷೆಯಾದರೂ ಪೋಷಕರ ಕರ್ತವ್ಯ ಹೆಚ್ಚಾಗಿರುತ್ತದೆ. ಪರೀಕ್ಷೆ ನಂತರವೂ ಅವರು ಯಾವ ರೀತಿ ಪರೀಕ್ಷೆ ಬರೆದಿದ್ದರೂ ಮಕ್ಕಳನ್ನು ಪ್ರೀತಿಯಿಂದ ಕಾಣಬೇಕು. ಸಮಾಜ ವಿಶಾಲವಾಗಿದೆ. ಬದುಕಲು ಹಲವಾರು ಯೋಗ್ಯ ಮಾರ್ಗಗಳಿವೆ. ನಿಮ್ಮ ಮಕ್ಕಳನ್ನು ಪ್ರೀತಿಯಿಂದ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೋಷಕರು ಎಚ್ಚರ ವಹಿಸಬೇಕು.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಮರಗಳ ಹನನ ನಾಚಿಕೆಗೇಡಿನ ಸಂಗತಿ

ಮಾನ್ಯರೆ,

ಮೈಸೂರಿನ ಕುಕ್ಕರಹಳ್ಳಿ ಕೆರೆ ಬಳಿ ಮೈಸೂರು ವಿಶ್ವವಿದ್ಯಾನಿಲಯದ ಹಿಂಭಾಗ ಮೈಸೂರು – ಚಾಮರಾಜನಗರ ರೈಲ್ವೆ ಹಳಿಯ ಪಕ್ಕದಲ್ಲಿದ್ದ 35 ಮರಗಳನ್ನು ಕಡಿದು ಉರುಳಿಸಿರುವುದು ನಾಚಿಕೆಗೇಡಿನ ಸಂಗತಿ. ರೈಲ್ವೆ ಇಲಾಖೆ ಸುರಕ್ಷತಾ ಸೃಷ್ಟಿಯಿಂದ ಓವರ್ ಹೆಡ್ ವಿದ್ಯುತ್ ಮಾರ್ಗಗಳಿಗೆ ಮರಗಳ ಕೊಂಬೆಗಳು ಮಳೆ – ಗಾಳಿಯ ಸಂದರ್ಭದಲ್ಲಿ ವಿದ್ಯುತ್ ತಂತಿಯ ಮೇಲೆ ಬೀಳುವ ಸಾಧ್ಯತೆ ಇರುವುದರಿಂದ ಮರಗಳನ್ನು ತೆರವು ಮಾಡಿರುವುದಾಗಿ ಹೇಳುತ್ತಾರೆ. ಆದರೆ ವಾಸ್ತವ ಸ್ಥಿತಿ ಏನೆಂದರೆ ವಿದ್ಯುತ್ ತಂತಿಗೆ ತಗಲುವ ಮರದ ಕೊಂಬೆಗಳನ್ನು ಕಡಿದಿದ್ದರೆ ಸಾಕಾಗಿತ್ತು.

ಹಲವಾರು ವರ್ಷಗಳಿಂದ ಬೆಳೆದಿದ್ದ 35 ಮರಗಳನ್ನು ಸಂಪೂರ್ಣವಾಗಿ ಕಡಿದಿರುವುದು ಯಾವ ನ್ಯಾಯ ಎಂಬುದು ಸಾರ್ವಜನಿಕರ ಅಭಿಪ್ರಾಯ. ಯಾಕೋ ಏನೋ ಇತ್ತೀಚೆಗೆ ಮೈಸೂರಿನಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ನೂರಾರು ವರ್ಷಗಳಿಂದ ಬೆಳೆದು ನಿಂತಿದ್ದ ಮರಗಳ ಮೇಲೆ ವಕ್ರದೃಷ್ಟಿ ಬಿದ್ದಿರುವುದಂತು ನಿಜ. ಇನ್ನೂ ಮುಂದಾದರೂ ಅಭಿವೃದ್ಧಿಯ ನೆಪದಲ್ಲಿ ನೂರಾರು ವರ್ಷಗಳಿಂದ ಬೆಳೆದು ನಿಂತಿರುವ ಮರಗಳನ್ನು ಏಕಾಏಕಿ ಧರೆಗೆ ಉರುಳಿಸದೆ ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಹಾಗೂ ಪರಿಸರದ ಮೇಲೆ ಪ್ರಭಾವ ಬೀರದಂತೆ ಅಧಿಕಾರಿಗಳು, ಜನಪ್ರತಿನಿಧಿಗಳು, ಪರಿಸರ ಪ್ರೇಮಿಗಳು ಒಟ್ಟಾಗಿ ಕುಳಿತು ಮಾತನಾಡಿ ಒಮ್ಮತದ ತೀರ್ಮಾನಕ್ಕೆ ಬಂದು ಮುಂದುವರೆಯುವುದು ಒಳ್ಳೆಯದು.


–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಎಥೆನಾಲ್ ಇಂಧನ: ಹಸಿರು ಕ್ರಾಂತಿಯೋ, ಗಿಮಿಕ್ಕೋ?

ಮಾನ್ಯರೆ,

ಜೂನ್ 14ರಂದು ಆರಂಭವಾದ ಎಥೆನಾಲ್ ಜಾಗೃತಿ ಕೇವಲ ಕಾರ್ಪೊರೇಟ್ ಪ್ರಚಾರದ ಗಿಮಿಕ್‌ನಂತೆ ಕಾಣುತ್ತಿದೆ. ಪೆಟ್ರೋಲ್‌ಗೆ ಶೇ.20 ಮಿಶ್ರಣದ ಗುರಿ ಮತ್ತು ಲೀಟರ್‌ಗೆ 23.56 ಕಿ.ಮೀ ಮೈಲೇಜ್ ಆಕರ್ಷಕವಾಗಿದ್ದರೂ, ಬರೋಬ್ಬರಿ ರೂ.7,23,900 ಬೆಲೆಯ ಫ್ಲೆಕ್ಸ್ ಕಾರುಗಳನ್ನು ಕೊಳ್ಳುವ ಶಕ್ತಿ ಸಾಮಾನ್ಯ ಜನರಿಗಿದೆಯೇ? ರಾಜ್ಯದಲ್ಲಿ ಎಥೆನಾಲ್ ಇಂಧನ ಕೇಂದ್ರಗಳೇ ಇಲ್ಲದಿರುವಾಗ ಇಂತಹ ವಾಹನಗಳನ್ನು ಮಾರುಕಟ್ಟೆಗೆ ತರುವುದು ಅತ್ಯಂತ ಹಾಸ್ಯಾಸ್ಪದ. ರೈತರ ಆದಾಯ ಹೆಚ್ಚಿಸುವ ಹೆಸರಿನಲ್ಲಿ ಆಡಳಿತಶಾಹಿ ಬೂಟಾಟಿಕೆ ಮಾಡುವುದನ್ನು ನಿಲ್ಲಿಸಬೇಕು. ಕಬ್ಬು, ಮೊಲಾಸಿಸ್, ಕೃಷಿ ತ್ಯಾಜ್ಯ, ಇಂಧನ ಕ್ರಾಂತಿ, ಆಮದು ವೆಚ್ಚ, ಫ್ಲೆಕ್ಸ್ ಫ್ಯುಯೆಲ್, ತಂತ್ರಜ್ಞಾನ, ಕಾರ್ಬನ್ ಹೊರಸೂಸುವಿಕೆ, ಮಾಲಿನ್ಯ ನಿಯಂತ್ರಣ, ಗ್ರಾಮೀಣ ಆರ್ಥಿಕತೆ, ಮೂಲಸೌಕರ್ಯ, ಪೂರೈಕೆ ಸರಪಳಿ, ಸ್ಥಿರ ಬೇಡಿಕೆ, ಪರ್ಯಾಯ ಇಂಧನ, ಮೌಲ್ಯವರ್ಧನೆ, ಸ್ವಾವಲಂಬನೆ, ತೆರಿಗೆ ವಿನಾಯಿತಿ, ಗ್ರಾಹಕ ಜಾಗೃತಿ, ಇಂಜಿನ್ ಕಾರ್ಯವೈಖರಿ ಹಾಗೂ ಪರಿಸರಸ್ನೇಹಿ ಉತ್ಪಾದನೆಯನ್ನು ಸರ್ಕಾರ ತಕ್ಷಣವೇ ಬಲಪಡಿಸದಿದ್ದರೆ, ಈ ಯೋಜನೆ ಕೇವಲ ಹಗಲುಗನಸಾಗಿ ಉಳಿಯಲಿದೆ.

–ಡಾ. ಹೆಚ್.ಕೆ.ವಿಜಯಕುಮಾರ್, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಸಾಲದ ಭಾರಕ್ಕಿಂತ ಉಪಕಾರದ ಭಾರವೇ ಹೆಚ್ಚು...!

ನಮ್ಮ ಜೀವನದ ಸುಗಮ ನಿರ್ವಹಣೆಗೆ ನಾವು ನಮ್ಮದೇ ಆದ ಹಲವು ರೀತಿ–ನೀತಿಗಳನ್ನು ರೂಪಿಸಿಕೊಂಡಿರುತ್ತೇವೆ. ಅಂತಹದು ಸರಿ ಎನ್ನಿಸಿದಾಗ ಅದನ್ನು ನಾವು ಅನುಸರಿಸುತ್ತೇವೆ. ಅದು ತಪ್ಪು ಎಂದು ಯಾವಾಗ ಕಂಡುಬರುವುದೋ ಆಗ ಅದನ್ನು ಕೈಬಿಟ್ಟು ಮತ್ತೊಂದು ಮಾರ್ಗ ಅನುಸರಿಸುವುದು ಬುದ್ಧಿವಂತಿಕೆ ಎನ್ನಿಸಿಕೊಳ್ಳುತ್ತದೆ. ನಮ್ಮ ಜೀವನವು ಸಾಮಾನ್ಯವಾಗಿ ಪರಸ್ಪರ ಅವಲಂಬನೆಯ ಆಧಾರದ ಮೇಲೆ ನಿಂತಿರುವಂತಹುದು.

ಈ ಸಮಾಜದಲ್ಲಿ ನಾವು ಬದುಕಿರುವವರೆಗೂ ಹಲವರಿಂದ ಹಲವು ರೀತಿಯ ಸಹಾಯವನ್ನು ಪಡೆಯಬೇಕಾಗುತ್ತದೆ. ಇಂತಹ ಸಹಾಯ ಎರಡು ರೀತಿಯದು. ಒಂದು ಹಣಕಾಸಿನ ನೆರವಾದರೆ ಮತ್ತೊಂದು ಮನಃಪೂರ್ವಕವಾಗಿ ಪಡೆಯು ವಂತಹ ಉಪಕಾರ. ನಮ್ಮ ಹಿರಿಯರು ಹೇಳುತ್ತಿದ್ದ ಮಾತೆಂದರೆ 'ಸಾಲದ ಭಾರಕ್ಕಿಂತ ಉಪಕಾರದ ಭಾರವೇ ಜಾಸ್ತಿ' ಎಂದು.

ಕೆಲವೊಮ್ಮೆ ನಾವು ನಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಕೆಲವು ಅಪಮಾರ್ಗಗಳನ್ನು ಅನುಸರಿಸಿ ಬಿಡುತ್ತೇವೆ. ಅಂತಹುದರಲ್ಲಿ ಒಂದು ಕುಡಿತ. ಆರಂಭದಲ್ಲಿ ನಾವು ಯಾವುದೇ ಕಾರಣಕ್ಕೂ ಕುಡಿಯುವುದಿಲ್ಲ ಎಂದು ನಿರ್ಧರಿಸಿರುತ್ತೇವೆ. ಏಕೆಂದರೆ ಅದರ ದುಷ್ಪರಿಣಾಮಗಳ ಅರಿವು ನಮಗಿರುತ್ತದೆ. ಆದರೆ ನಾವು ಸ್ವಲ್ಪ ಮಾನಸಿಕವಾಗಿ ದುರ್ಬಲರಾಗಿರುವಾಗ ನಮ್ಮ ಸ್ನೇಹಿತರು, ಕೆಲವೊಮ್ಮೆ ನೆಂಟರು ಅಥವಾ ಸಹೋದ್ಯೋಗಿಗಳ ಒತ್ತಾಯಕ್ಕೆ ಕಟ್ಟುಬಿದ್ದು ನಮ್ಮ ನಿರ್ಧಾರದಿಂದ ಹೊರಬಂದು ಬಿಡುತ್ತೇವೆ.

ನಾವು ಕುಡಿಯದಿದ್ದರೆ ನಾಗರಿಕರಂತೆ ಕಂಡುಬರುವುದಿಲ್ಲ ಎಂದು ಕೆಲವರು ನಮ್ಮ ಪ್ರಚೋದಿಸುತ್ತಾರೆ. ಈ ಹಿಂದೆ ಒಮ್ಮೆ ಬೇರೊಂದು ದೂರದ ತಾಲೂಕಿನ ಪರಿಶೀಲನೆಗೆ ಹೋಗಬೇಕಾಯಿತು. ನನ್ನೊಡನೆ ಒಬ್ಬ ಸಹೋದ್ಯೋಗಿ ಇದ್ದರು. ಅವರು ಈ ಕುಡಿತದ ಅಭ್ಯಾಸ ಹೊಂದಿದ್ದವರು. ಅವರು ನಿತ್ಯ ಕುಡಿಯುವ ಹವ್ಯಾಸದವರೇನೂ ಅಲ್ಲ. ಆದರೆ ಸ್ನೇಹಿತರು ಸಿಕ್ಕಿ ಒತ್ತಾಯ ಮಾಡಿದಾಗ ಕುಡಿಯುವುದು ಅವರ ಅಭ್ಯಾಸ. ಆ ಸಲದ ಪರಿಶೀಲನೆ ಸಮಯದಲ್ಲಿ ಅವರು ಅಲ್ಲಿ ಬೇಗ ಒಂದಷ್ಟು ಜನರನ್ನು ಪರಿಚಯ ಮಾಡಿಕೊಂಡರು. ಸಂಜೆಯಾದಾಗ ಅವರು ಸೇರುವುದು, ಕುಡಿಯುವುದು ನಡೆಯುತ್ತಿತ್ತು.

ನಾವು ಮೇಲಿನ ಕಚೇರಿಯವರಾದ್ದರಿಂದ ಅಲ್ಲಿನವರು ನಮಗೆ ವಿಶೇಷ ಗೌರವ ನೀಡುತ್ತಿದ್ದರು. ಇದನ್ನು ನನ್ನ ಸಹೋದ್ಯೋಗಿ ಉಪಯೋಗಿಸಿಕೊಂಡರು. ನಂತರ ನೀವು ಮಾಡಿದ್ದು ಸರಿಯಲ್ಲ ಅಲ್ಲವೇ? ಎಂದಾಗ ಅವರು ಹೇಳಿದ್ದು, ನಾವು ಕುಡಿಯುವ ಅಭ್ಯಾಸ ಹೊಂದದಿದ್ದರೆ ಇಷ್ಟೊಂದು ಸ್ನೇಹಿತರ ಸಂಗ ನಮಗೆ ಸಿಗುವುದಿಲ್ಲ. ಅವರಿಗೆ ಅಭ್ಯಾಸವಿದೆ. ನಾನು ಅವರೊಡನೆ ಸೇರುತ್ತಿದ್ದೇನೆ ಅಷ್ಟೇ. ಇದು ತಪ್ಪಲ್ಲ ಎಂಬುದು ಅವರ ವಾದ. ನಮಗೆ ಇಂತಹುದಕ್ಕೆ ಸಾಕಷ್ಟು ಕಾರಣಗಳು ಸಿಗುತ್ತದೆ. ಅಂತಹ ದುರ್ಬಲ ಮನಸ್ಸಿನವರಾದರೆ ನಾವು ಬಹಳ ವರ್ಷಗಳಿಂದ ಆಚರಿಸಿಕೊಂಡು ಬಂದಿದ್ದಂತಹ ನಮ್ಮ ನಡವಳಿಕೆಯನ್ನು ಬದಲಿಸಿಕೊಂಡುಬಿಡುತ್ತೇವೆ.

ಇದು ನಮ್ಮ ದಾರಿಯನ್ನೇ ಬದಲಿಸಿಬಿಡುತ್ತದೆ. ಆರಂಭದಲ್ಲಿ ಒತ್ತಾಯಕ್ಕೆ ಕಟ್ಟುಬಿದ್ದೋ, ಅಥವಾ ಅದಕ್ಕೆ ನಾನೇನು ಖರ್ಚು ಮಾಡಬೇಕಾಗಿಲ್ಲವಲ್ಲ ಎಂದೋ ಒಪ್ಪಿಕೊಂಡರೆ ನಾವು ಆ ಸ್ನೇಹಿತರಿಗಿಂತಲೂ ದೊಡ್ಡ ಕುಡುಕರಾಗಿಬಿಡುತ್ತೇವೆ. ಈ ಬಗ್ಗೆ ಎಚ್ಚರ ಇರಬೇಕು.

ಅದೇ ರೀತಿಯ ಮತ್ತೊಂದು ಹವ್ಯಾಸ ಸಾಲ ಮಾಡುವುದು. ಇದೂ ಒಂದು ರೀತಿ ಅಂಟು ಜಾಡ್ಯದಂತೆ. ಕೆಲವೊಮ್ಮೆ ಸಾಲ ಮಾಡುವುದು ಅನಿವಾರ್ಯವಾದರೂ ಅದನ್ನೇ ಅಭ್ಯಾಸ ಮಾಡಿಕೊಂಡವರು ಅದನ್ನು ಒಂದು ರೀತಿ ಚಾಳಿಯಂತೆ ಬೆಳೆಸಿ ಕೊಂಡುಬಿಡುತ್ತಾರೆ. ಯಾರೋ ಒಬ್ಬ ಕೊಟ್ಟ ಸಾಲವನ್ನು ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಕೇಳದಿರಬಹುದು. ಅದನ್ನೇ ಮನಸ್ಸಿನಲ್ಲಿಟ್ಟುಕೊಂಡು ಮತ್ತಷ್ಟು ಜನರ ಹತ್ತಿರ ಸಾಲ ಕೇಳುವುದು ಕೆಟ್ಟ ಅಭ್ಯಾಸವಾಗಿ ಮುಂದುವರೆಯುತ್ತದೆ.

ಕೊನೆಗೆ ಅದು ಒಂದು ಪಿಡುಗಾಗುತ್ತದೆ. ನಾನು, ಒಬ್ಬ ವ್ಯಕ್ತಿ ಈ ಸಾಲದ ಸುಳಿಯಲ್ಲೇ ಜೀವನ ಕಳೆದುಕೊಂಡಿದ್ದನ್ನು ಕಂಡಿದ್ದೇನೆ. ತನ್ನ ಮನೆ ಬಹಳ ವಿಶೇಷವಾಗಿ ಕಂಡುಬರಬೇಕು ಎಂಬ ಕಾರಣಕ್ಕೆ ಅಗತ್ಯವಿಲ್ಲದ ಹಲವು ವಸ್ತುಗಳನ್ನು ಕೊಳ್ಳುತ್ತಿದ್ದರು. ದುಡ್ಡೆಲ್ಲಿ ಬರುತ್ತದೆ ಎಂದರೆ ಇದಕ್ಕೆ ದುಡ್ಡು ಬೇಕಾಗಿಲ್ಲ. ಅದು ಮಾಸಿಕ ಕಂತಿನ ರೂಪದಲ್ಲಿ ದೊರೆಯುತ್ತದೆ. ತಿಂಗಳಿಗೆ ಇಪ್ಪತ್ತು ಸಾವಿರ ಅಷ್ಟೇ ಎಂಬ ನಿಲುವು ಅವರದ್ದು. ಸರಿ, ಅವರ ವೇತನಕ್ಕೆ ಆ ಹಣ ದೊಡ್ಡದಲ್ಲ. ಬುದ್ಧಿವಂತಿಕೆ ಇದ್ದರೆ ಅದು ಅಷ್ಟಕ್ಕೇ ನಿಲ್ಲಬೇಕಾಗಿತ್ತು. ಅದಾಗಲಿಲ್ಲ, ಮತ್ತೊಂದು ಮಗದೊಂದು ಎಂದು ಕಾರು ಇತ್ಯಾದಿಗಳನ್ನು ಖರೀದಿಸುತ್ತಿದ್ದರು.

ಕೊನೆಗೆ ಅವರ ವೇತನಕ್ಕಿಂತ ಈ ಮಾಸಿಕ ಕಂತಿನ ಹಣದ ಮೊತ್ತ ಜಾಸ್ತಿಯಾಯಿತು. ಸಾಲ ಕೊಟ್ಟವರು ಒತ್ತಾಯಿಸಿದಾಗ ಹಾಗೆ ಕೊಂಡ ಒಂದೊಂದೇ ವಸ್ತುವನ್ನು ಮಾರಿದರು. ನಮಗೆ ಗೊತ್ತಿದೆ, ನಾವಾಗೇ ಮಾರಲು ಹೊರಟಾಗ ಯಾವ ವಸ್ತುವಿಗೂ ಸರಿಯಾದ ಬೆಲೆ ಸಿಗುವುದಿಲ್ಲ. ಒತ್ತಡ ಜಾಸ್ತಿಯಾದಾಗ ಅವರು ತಾವು ತಂದ ಪದಾರ್ಥಗಳನ್ನು ಸಿಕ್ಕಿದ ಬೆಲೆಗೆ ಮಾರಿದರು. ಇದರಿಂದ ಒತ್ತಡ ಕಡಿಮೆ ಯಾಗಲಿಲ್ಲ. ಇನ್ನೂ ಜಾಸ್ತಿಯಾಯಿತು. ಪರಿಣಾಮ ಅವರಿಗಿದ್ದ ಸಣ್ಣ ಖಾಯಿಲೆಗಳು ಉಲ್ಬಣಿಸಿತು. ಕೊನೆಗೆ ಅದರಿಂದಲೇ ಅವರು ಮೃತರಾದರು. ಸಾಲದ ಪರಿಣಾಮ ಹೀಗೂ ಆಗಬಹುದು. ಈ ಬಗ್ಗೆ ಎಚ್ಚರ ಅವಶ್ಯಕ.

ಸಾಲ ಮಾಡುವುದು ಅನಿವಾರ್ಯವಾದಾಗ ಸಾಲ ಮಾಡುವುದು ತಪ್ಪಲ್ಲ. ಆದರೆ, ಅದನ್ನು ತೀರಿಸುವ ಮನೋಭಾವ ಮಾರ್ಗೋಪಾಯಗಳು ಗೊತ್ತಿದ್ದರೆ ಸರಿ. ಸಾಲ ವನ್ನು ಹೊರೆ ಎಂದು, ಭಾರ ಎಂದೂ ಕರೆಯಲಾಗುತ್ತದೆ ಒಬ್ಬ ನಿಸ್ಪೃಹ ವ್ಯಕ್ತಿಗೆ ಸಾಲ ಮಾಡಿದ ನಂತರ ಅದರಿಂದ ಆದಷ್ಟೂ ಬೇಗ ಮುಕ್ತನಾಗಬೇಕು ಎಂದು ಅನ್ನಿಸುತ್ತದೆ. ಸಾಲವನ್ನು ನಿಗಧಿತ ಅವಧಿಯಲ್ಲಿ ಮರುಪಾವತಿ ಮಾಡಲಾಗದಿದ್ದರೆ ಸಂಬಂಧಿಸಿದ ಸಾಲ ನೀಡಿದ ವ್ಯಕ್ತಿಯೊಡನೆ ಮಾತನಾಡಿ, ಪರಿಸ್ಥಿತಿ ವಿವರಿಸಿ ಸಾಲದ ಅವಧಿ ವಿಸ್ತರಿಸಿಕೊಳ್ಳಬಹುದು ಅಥವಾ ಮತ್ತಷ್ಟು ಹೆಚ್ಚುವರಿ ಬಡ್ಡಿ ನೀಡುವು ದಾಗಿ ಒಂದು ಒಪ್ಪಂದಕ್ಕೆ ಬರಬಹುದು. ಆದರೆ, ಸಾಲದ ಭಾರ ಅದನ್ನು ತೀರಿಸುವವರೆಗೂ ನಮ್ಮನ್ನು ಬಾಧಿಸುತ್ತದೆ. ಒಂದೊಮ್ಮೆ ಆ ಹಣವನ್ನು ಪೂರ್ಣವಾಗಿ ಹಿಂದಿರುಗಿಸಿದ ನಂತರ ನಾವು ಒಂದು ರೀತಿ ಋಣ ಮುಕ್ತರಾದಂತೆ, ಭಾರವನ್ನು ಕಡಿಮೆ ಮಾಡಿಕೊಂಡಂತೆ ಭಾಸವಾಗುತ್ತದೆ.

ಆದರೆ, ನಮಗೆ ಮತ್ತೊಂದು ಭಾರದ ವಿಷಯ ಅಷ್ಟಾಗಿ ಗಮನಕ್ಕೆ ಬಂದಿರುವುದಿಲ್ಲ. ಅದು ಉಪಕಾರದ ಭಾರ. ಸಾಲದ ಭಾರಕ್ಕೂ ಉಪಕಾರದ ಭಾರಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಸಾಲಕ್ಕೆ ಒಂದು ನಿರ್ದಿಷ್ಟ ಮೌಲ್ಯವಿರುತ್ತದೆ. ಅದನ್ನು ನಗದು ರೂಪದಲ್ಲೋ, ಒಡವೆ–ವಸ್ತುವಿನ ರೂಪದಲ್ಲೋ ಮರು ಪಾವತಿ ಮಾಡಿಬಿಡಬಹುದು. ಆದರೆ ಉಪಕಾರದ ಭಾರ ಎನ್ನುವುದು ಮೌಲ್ಯ ಕಟ್ಟಲಾಗದ ಅಮೂಲ್ಯವಾದುದು. ಈ ಭಾರವನ್ನು ಇಳಿಸಿಕೊಳ್ಳುವುದು ಅಷ್ಟು ಸುಲಭವಲ್ಲ, ಕೆಲವೊಮ್ಮೆ ಸಾಧ್ಯವೂ ಆಗುವುದಿಲ್ಲ.

ನಾವು ಮದುವೆ ಮುಂಜಿ, ಗೃಹಪ್ರವೇಶದಂತಹ ಸಮಾರಂಭಗಳಿಗೆ ಹೋದಾಗ, ಅವರಿಗೆ ನಮ್ಮ ಕಡೆಯಿಂದ ಒಂದು ಕಾಣಿಕೆ ನೀಡುವುದು ವಾಡಿಕೆ. ಇದು ಏಕೆ ಆರಂಭವಾಯಿತೋ ತಿಳಿಯದು. ಬಹುಶಃ ಮದುವೆ, ಮನೆ ಕಟ್ಟುವುದು ಮುಂತಾದವನ್ನು ಮಾಡುವಾಗ ಅವರಿಗೆ ಆರ್ಥಿಕ ಹೊರೆ ಬಿದ್ದಿರುತ್ತದೆ. ಅದನ್ನು ನಾವು ನೀಡುವ ಅಲ್ಪ ಕಾಣಿಕೆಯಿಂದ ಸರಿ ಹೊಂದಿಸಿಕೊಳ್ಳಲಿ ಎಂಬ ಉದ್ದೇಶ ಇರಬಹುದು. ಆದರೆ ಅದನ್ನು ಪಡೆದವನ ಮೇಲೆ ಒಂದು ರೀತಿಯ ಒತ್ತಡ ಆರಂಭವಾಗುತ್ತದೆ. ಸುಮ್ಮನೆ ಯಾರಿಂದಲೂ ಹಾಗೆ ಸಹಾಯ ಪಡೆಯಲು ಮನಸ್ಸು ಸಾಮಾನ್ಯ ವಾಗಿ ಒಪ್ಪುವುದಿಲ್ಲ. ಈ ಹಿಂದೆ ಹಾಗೂ ಈಗಲೂ ಕೆಲ ಗ್ರಾಮೀಣ ಭಾಗದಲ್ಲಿ ಮದುವೆಯಂತಹ ಸಮಾರಂಭಗಳಲ್ಲಿ ಕಾಣಿಕೆಯನ್ನು ನಗದು ರೂಪದಲ್ಲಿ ನೀಡಿದಾಗ, ಅದನ್ನು ಧ್ವನಿವರ್ಧಕದಲ್ಲಿ ಹೇಳಲಾಗುತ್ತದೆ. ಇಂತಹವರು ಇಷ್ಟು ಹಣ ನೀಡಿದ್ದಾರೆ ಎಂದು ದಾಖಲಿಸುವ ವಿಧಾನ ಇದು.

ಇದರ ಅರ್ಥ ಅವರು ನಮ್ಮ ಮನೆಯ ಕಾರ್ಯಕ್ರಮದಲ್ಲಿ ಇಷ್ಟು ಹಣವನ್ನು ಕಾಣಿಕೆಯಾಗಿ ನೀಡಿದ್ದಾರೆ. ಮುಂದೆ ಈ ರೀತಿ ಕಾಣಿಕೆ ನೀಡಿದವರ ಮನೆಯಲ್ಲಿ ಇಂತಹ ಸಮಾರಂಭ ನಡೆದರೆ ನಾವು ಕನಿಷ್ಠ ಅವರು ಕೊಟ್ಟಷ್ಟು ಹಣವನ್ನು ಅಥವಾ ಅದಕ್ಕೆ ಸರಿದೂಗುವ ವಸ್ತುವನ್ನು ನೀಡಬೇಕಾಗುತ್ತದೆ. ಅದಕ್ಕಾಗಿ ನಮ್ಮ ಮನೆ ಸಮಾರಂಭದಲ್ಲಿ ಹಣ, ವಸ್ತು ನೀಡಿದವರ ಪಟ್ಟಿಯನ್ನು ನಾವು ರಕ್ಷಿಸಿ ಇಟ್ಟುಕೊಳ್ಳಬೇಕು. ಅವರ ಮನೆಯ ಸಮಾರಂಭದಲ್ಲಿ ಅಷ್ಟು ಅಥವಾ ಅದಕ್ಕಿಂತ ಹೆಚ್ಚು ನೀಡಿದಾಗ ನಮಗೆ ನಿರಾಳವಾಗುತ್ತದೆ. ಇದು ಎಲ್ಲೆಡೆ ಕಂಡುಬರುವ ರೀತಿ. ಹಾಗೆ ನಮಗೆ ಶಕ್ತಿ ಇದ್ದೂ ಹಣ ನೀಡದಿದ್ದರೆ ನಾವು ಕೃತಘ್ನರಂತೆ ಕಂಡುಬರುತ್ತೇವೆ.

ಇದು ಹಣಕ್ಕೆ ಸಂಬಂಧಿಸಿದ್ದಾದರೆ ಹಣವನ್ನು ಕೊಟ್ಟು ನಾವು ಋಣಭಾರವನ್ನು ಕಡಿಮೆ ಮಾಡಿಕೊಳ್ಳಬಹುದು. ಆದರೆ ಕೆಲವು ಉಪಕಾರಕ್ಕೆ ಪ್ರತಿಯಾಗಿ ಏನನ್ನು ಕೊಟ್ಟರೂ ನಾವು ಋಣ ಮುಕ್ತರಾಗಲು ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಸಮಯದ ಬೆಲೆ. ನಾವು ಸಂಕಟದಲ್ಲಿದ್ದಾಗ, ಪ್ರಾಣಾಪಾಯದಲ್ಲಿ ಇದ್ದಾಗ ಅಥವಾ ಮರ್ಯಾದೆ ಹೋಗುವಂತಹ ಸಮಯದಲ್ಲಿ ಯಾರೋ ಮಾಡಿದ ಸಹಾಯವನ್ನು ನಾವು ತೀರಿಸಲು ಸಾಧ್ಯವೇ ಆಗುವುದಿಲ್ಲ. ಇಂತಹ ಉಪಕಾರಕ್ಕೆ ಯಾವುದೇ ಬೆಲೆ ಕಟ್ಟಲು ಸಾಧ್ಯವಾಗುವುದಿಲ್ಲ. ಇಲ್ಲಿ ಬಡ್ಡಿ–ಚಕ್ರಬಡ್ಡಿಯ ಮಾತೇ ಅನ್ವಯವಾಗುವುದಿಲ್ಲ. ನಮಗೆ ಯಾವುದೋ ಖಾಯಿಲೆಯಿಂದ ಅಥವಾ ಅಪಘಾತವಾದಾಗ ರಕ್ತ ಬೇಕಾಗುತ್ತದೆ. ಅದನ್ನು ನಮ್ಮ ಸ್ನೇಹಿತರು ಅಥವಾ ನೆಂಟರು ನೀಡಿದರೆ ಅದನ್ನು ಪ್ರತಿಯಾಗಿ ಹೇಗೆ ತೀರಿಸಲು ಸಾಧ್ಯ?

ನಾವು ವಾಹನಗಳಲ್ಲಿ ಹೋಗುವಾಗ ಏನಾದರೂ ಅಪಘಾತಕ್ಕೀಡಾಗಿ ರಸ್ತೆಯಲ್ಲಿ ನಿಶ್ಶಕ್ತಿಯಿಂದ ಮಲಗಬೇಕಾಗುತ್ತದೆ. ಆಗ ಯಾರೋ ದಾರಿಹೋಕರು ನಮಗೆ ನೀರು ನೀಡಿ, ಸಮಾಧಾನ ಪಡಿಸಿ ಆಸ್ಪತ್ರೆಗೆ ದಾಖಲಿಸುತ್ತಾರೆ. ಇದಾಗದಿದ್ದರೆ ಅನೇಕರ ಪ್ರಾಣ ರಸ್ತೆಯಲ್ಲಿಯೇ ಹೊರಟುಹೋಗುತ್ತದೆ. ಇದು ಒಂದು ರೀತಿಯ ಮಹದುಪಕಾರ.

ಇದನ್ನು ಹೇಗೆ ತೀರಿಸಲಾಗುತ್ತದೆ? ಆಸ್ಪತ್ರೆಯ ಬಿಲ್ಲನ್ನು ಹೀಗೆ ಯಾರೋ ಕೊಟ್ಟಿದ್ದಾರೆ ಎಂದರೆ ಅದನ್ನು ಮುಂದೆ ನಾವು ದುಡಿದು ತೀರಿಸಬಹುದು. ಆದರೆ ಪ್ರಾಣ ಉಳಿಸಿದ ಉಪಕಾರಕ್ಕೆ ಯಾವ ಮೌಲ್ಯವೂ ಸರಿಸಮನಾಗುವುದಿಲ್ಲ. ಅದು ಹಣಕಾಸನ್ನು ಮೀರಿದಂತಹುದು. ನಮ್ಮ ಮನೆಗೆ ಬೆಂಕಿ ಬಿದ್ದಾಗ ಯಾರೋ ಅಗ್ನಿಶಾಮಕದಳಕ್ಕೆ ಕರೆ ಮಾಡುತ್ತಾರೆ. ಅವರು ಬಂದು ಬೆಂಕಿ ನಂದಿಸುತ್ತಾರೆ. ಇದನ್ನು ಪ್ರತಿಯಾಗಿ ತೀರಿಸಲು ಸಾಧ್ಯವಾಗುವುದಿಲ್ಲ.

ನಮ್ಮಲ್ಲಿ ಸಾಮಾನ್ಯವಾಗಿ ಹೇಳುವುದು ವಿದ್ಯಾದಾನವೇ ಶ್ರೇಷ್ಠ ದಾನ ಎಂದು. ನಮಗೆ ಪ್ರಾಥಮಿಕ ಶಾಲೆಯ ಹಂತದಲ್ಲಿ ಬೋಧಿಸಿದ, ಜೀವನದ ದಾರಿ ತೋರಿಸಿದ ಶಿಕ್ಷಕರ ಉಪಕಾರವನ್ನು ನಾವು ಹೇಗೆ ತೀರಿಸಲು ಸಾಧ್ಯ. ಅಂತಹ ಶಿಕ್ಷಕರನ್ನು ನಾವು ದೊಡ್ಡವರಾದಾಗ ಅಕಸ್ಮಾತ್ ಭೇಟಿ ಮಾಡಿ ನಾನು ನಿಮಗೆ ಏನು ಕೊಡಲಿ ಎಂದರೆ ಅವರು ಸಾಮಾನ್ಯವಾಗಿ ಹೇಳುವುದು, 'ನೀನು ಉತ್ತಮ ವ್ಯಕ್ತಿಯಾಗಿ ಬಾಳು, ಅದೇ ನೀನು ನನಗೆ ಹಾಗೂ ಸಮಾಜಕ್ಕೆ ನೀಡುವ ಉಪಕಾರ' ಎಂದೇ ಹೇಳುತ್ತಾರೆ. ಇಂತಹ ವ್ಯಕ್ತಿಯ ಉಪಕಾರಕ್ಕೆ ನಾವು ಹೇಗೆ ಮೌಲ್ಯವನ್ನು ಕಟ್ಟುವುದು? ಒಬ್ಬ ಬಡ ವಿದ್ಯಾರ್ಥಿಗೆ ಅವನ ಪ್ರತಿಭೆ ಗುರುತಿಸಿ ಅವನಿಗೆ ಉಚಿತವಾಗಿ ಪಾಠ ಹೇಳಿದ ಶಿಕ್ಷಕರ ಉಪಕಾರ ತೀರಿಸುವುದಾದರೂ ಹೇಗೆ?

ನಾವು ಮಾಡಿದ ಸಾಲವನ್ನು ಹೇಗಾದರೂ ತೀರಿಸಬಹುದು. ಅದಕ್ಕೆ ಬಡ್ಡಿಯೋ, ಚಕ್ರ ಬಡ್ಡಿಯೋ ಕೊಟ್ಟಲ್ಲಿ ಅದು ತೀರುತ್ತದೆ. ಆದರೆ ಉಪಕಾರ ಹಾಗಲ್ಲ. ಅನೇಕ ವೇಳೆ ಅದನ್ನು ಮತ್ತೆ ಯಾವುದೇ ರೀತಿಯಲ್ಲಿ ತೀರಿಸಲಾಗದು. ಹಾಗೆ ಉಪಕಾರ ಮಾಡಿದವರು ನಮ್ಮ ಕಣ್ಣ ಮುಂದೆ ಕಂಡಾಗಲೆಲ್ಲಾ ನಮ್ಮ ಮನಸ್ಸಿನಲ್ಲಿ ಗೌರವ. ಕೃತಜ್ಞತೆ ಮೂಡುತ್ತದೆ. ಅದು ಉಪಕಾರದ ಶಕ್ತಿ. ನಾವು ಉಪಕಾರ ಮಾಡಿದವರ ಬಗ್ಗೆ ಕೃತಜ್ಞತೆ ಮಾತ್ರವೇ ಸಲ್ಲಿಸಬಹುದು. ಆದ್ದರಿಂದ ಉಪಕಾರದ ಭಾರದಿಂದ ಋಣ ಮುಕ್ತನಾಗುವುದು ಕಷ್ಟದ ಕೆಲಸ ಎನ್ನಿಸುತ್ತದೆ. ಉಪಕಾರ ಮಾಡಿದ ವ್ಯಕ್ತಿಗೆ ನಾವು ಅದೆಷ್ಟೋ ಬಾರಿ ಪ್ರತ್ಯುಪಕಾರ ಮಾಡಲಾಗುವುದಿಲ್ಲ. ಆದರೆ ಅಂತಹ ಸ್ಮರಣ ಸ್ವಭಾವ ಬೆಳೆಸಿಕೊಂಡಾಗ ಸ್ವಲ್ಪ ನಿರಾಳತೆ ಕಂಡುಕೊಳ್ಳಬಹುದು ಅಷ್ಟೇ.



> ನಾವು ಮಾಡಿದ ಸಾಲವನ್ನು ಹೇಗಾದರೂ ತೀರಿಸಬಹುದು. ಅದಕ್ಕೆ ಬಡ್ಡಿಯೋ, ಚಕ್ರ ಬಡ್ಡಿಯೋ ಕೊಟ್ಟಲ್ಲಿ ಅದು ತೀರುತ್ತದೆ. ಆದರೆ ಉಪಕಾರ ಹಾಗಲ್ಲ. ಅನೇಕ ವೇಳೆ ಅದನ್ನು ಯಾವುದೇ ರೀತಿಯಲ್ಲಿ ತೀರಿಸಲಾಗದು. ಹಾಗೆ ಉಪಕಾರ ಮಾಡಿದವರು ನಮ್ಮ ಕಣ್ಣ ಮುಂದೆ ಕಂಡಾ ಗಲೆಲ್ಲಾ ನಮ್ಮ ಮನಸ್ಸಿನಲ್ಲಿ ಗೌರವ. ಕೃತಜ್ಞತೆ ಮೂಡುತ್ತದೆ. ಅದನ್ನು ತೀರಿಸಲು ಸಾಧ್ಯವಾಗುವುದಿಲ್ಲ. ಅದು ಉಪಕಾರದ ಶಕ್ತಿ. ನಾವು ಉಪಕಾರ ಮಾಡಿದವರ ಬಗ್ಗೆ ಕೃತಜ್ಞತೆ ಮಾತ್ರವೇ ಸಲ್ಲಿಸಬಹುದು. ಆದ್ದರಿಂದ ಉಪಕಾರದ ಭಾರದಿಂದ ಋಣಮುಕ್ತ ನಾಗುವುದು ಕಷ್ಟದ ಕೆಲಸ ಎನಿಸುತ್ತದೆ. ಉಪಕಾರ ಮಾಡಿದ ವ್ಯಕ್ತಿಗೆ ನಾವು ಅದೆಷ್ಟೋ ಸಲ ಪ್ರತ್ಯುಪಕಾರ ಮಾಡಲಾಗುವುದಿಲ್ಲ. ಆದರೆ, ಅಂತಹ ಸ್ಮರಣಾ ಸ್ವಭಾವ ಬೆಳೆಸಿಕೊಂಡಾಗ ಸ್ವಲ್ಪ ನಿರಾಳತೆ ಕಂಡುಕೊಳ್ಳಬಹುದು ಅಷ್ಟೇ.

ನಾಳೆ ಪ್ರೊ.ಬಿ. ಸೋಮಶೇಖರ್ ಸ್ಮರಣೆ ಸಂಗೀತ ಕಾರ್ಯಕ್ರಮ

ಮೈಸೂರು, ಜೂ.19– ಕಲಾವಿದ ರಮೇಶ್ ಕುಮಾರ್ ಕೋಲ್ಕುಂದ ಅಭಿಮಾನಿ ಬಳಗದಿಂದ ಮೈಸೂರಿನ ರಾಮಕೃಷ್ಣನಗರದ ನೃಪತುಂಗ ಕನ್ನಡ ಶಾಲೆಯ ರಮಾ ಗೋವಿಂದ ರಂಗಮಂದಿರದಲ್ಲಿ ಜೂ.21 ರಂದು ನಡೆಯಲಿರುವ ಸಪ್ತಸ್ವರ ಬಳಗದ ಸ್ಥಾಪಕ ಅಧ್ಯಕ್ಷರಾಗಿದ್ದ ಪ್ರೊ.ಬಿ ಸೋಮಶೇಖರ್ ಸ್ಮರಣೆಯ ಸಂಗೀತ ಕಾರ್ಯಕ್ರಮದಲ್ಲಿ ಕೋಲ್ಕುಂದ ಅವರ ಗಾಯನಕ್ಕೆ ಮೈಸೂರಿನ ಪಂ.ವೀರಭದ್ರಯ್ಯ ಹಿರೇಮಠ್ ಹಾರ್ಮೋನಿಯಂನಲ್ಲಿ, ಪಂ.ರಮೇಶ್ ಧನೂರ್ ತಬಲದಲ್ಲಿ ಸಾಥ್ ನೀಡಲಿದ್ದಾರೆ.

ಪ್ರೊ.ಬಿ.ಸೋಮಶೇಖರ್ ಮೈಸೂರಿನ ಸಪ್ತಸ್ವರ ಬಳಗ ಸಂಸ್ಥೆಯ ಸ್ಥಾಪಕ ಅಧ್ಯಕ್ಷರು, ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆಯಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದವರು. ಸಂಗೀತಜ್ಞ, ಹಲವು ಕೃತಿಗಳ ಲೇಖಕ, ಹಾರ್ಮೋನಿಯಂ, ವಾದಕರು, ಗಾಯಕರು, ನಟ, ನಿರ್ದೇಶಕ ರಂಗಭೂಮಿ ಸಂಘಟಕ, ಕನ್ನಡಪರ ಹೋರಾಟಗಾರ, ಜೆಪಿ ಚಳುವಳಿ, ಗೋಕಾಕ್ ಚಳುವಳಿಯಲ್ಲಿ ಸಕ್ರಿಯರಾಗಿದ್ದರು. ಮೈ.ವಿ.ವಿಯಲ್ಲಿ ಸೆನೆಟ್ ಸದಸ್ಯರಾಗಿದ್ದರು. ಮೈಸೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಪ್ರಾಧ್ಯಾಪಕ, ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತಿಯ ಅಂಚಿನಲ್ಲಿ ಮತ್ತು ನಂತರ ಕೃಷಿಯಲ್ಲಿ ತೊಡಗಿಸಿಕೊಂಡು ರೈತಪರ ಹೋರಾಟದಲ್ಲಿ ಆಸಕ್ತಿ ಹೊಂದಿದ್ದರು.

ಮಂತ್ರ ಮಾಂಗಲ್ಯದಲ್ಲಿ ದಾಂಪತ್ಯಕ್ಕೆ ಕಾಲಿಟ್ಟ ಜೋಡಿ

ಪೋಷಕರ ಸಮ್ಮುಖದಲ್ಲೇ ಬಾಲ್ಯದ ಸಹಪಾಠಿಗಳಾದ ಸುಬ್ರಮಣಿ-ಸೌಮ್ಯ ವಿವಾಹ

ಮೈಸೂರು, ಜೂ.19– ಮೈಸೂರಿನಲ್ಲಿರುವ ಜಾತ್ಯಾತೀತ ಒಲವಿನ ವಿವಾಹ ವೇದಿಕೆ 'ಮಾನವ ಮಂಟಪ'ದಲ್ಲಿ ಅಂತರ್ಜಾತಿಯ ಯುವಕ–ಯುವತಿ, ರಾಷ್ಟ್ರಕವಿ ಕುವೆಂಪು ಆಶಯದ ಮಂತ್ರಮಾಂಗಲ್ಯದ ಮೂಲಕ ಸತಿ–ಪತಿಗಳಾದರು.

ಕಳೆದ ನಾಲ್ಕು ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದ ಬಾಲ್ಯದ ಸಹಪಾಠಿಗಳಾದ ಸವಿತಾ ಸಮಾಜದ ಜಿ.ಸುಬ್ರಮಣಿ ಹಾಗೂ ಉಪ್ಪಾರ ಸಮುದಾಯದ ಎಂ.ಸೌಮ್ಯ, ಪೋಷಕರು ಹಾಗೂ ಹಿತೈಷಿಗಳ ಸಮ್ಮುಖದಲ್ಲಿ ಶುಕ್ರವಾರ ದಾಂಪತ್ಯಕ್ಕೆ ಕಾಲಿಟ್ಟರು.

ಶ್ರೀರಂಗಪಟ್ಟಣ ತಾಲೂಕಿನ ದರಸಗುಪ್ಪೆ ಗ್ರಾಮದ ಲೇಟ್ ಗಣೇಶ್–ಶೋಭಾ ದಂಪತಿ ಪುತ್ರ ಸುಬ್ರಮಣಿ ಮತ್ತು ಚಾಲಕ ಮಹದೇವು–ವಸಂತಿ ದಂಪತಿ ಪುತ್ರಿ ಸೌಮ್ಯ, ಒಂದನೇ ತರಗತಿಯಿಂದ 10ನೇ ತರಗತಿ ವರೆಗೂ ಸಹಪಾಠಿಗಳಾಗಿದ್ದರು. ಎಸ್‌ಎಸ್‌ಎಲ್‌ಸಿ ಬಳಿಕ ಮೈಸೂರಿನ ಬೋಗಾದಿಯಲ್ಲಿ ಕ್ಷೌರಿಕ ವೃತ್ತಿ ಆರಂಭಿಸಿದ ಸುಬ್ರಮಣಿ, ನಂತರ ಪ್ರೊಫೆಷನಲ್ ಕೋರ್ಸ್ ಇನ್ ಗ್ರೂಮಿಂಗ್ ಪಡೆದು ಉತ್ತಮ ವೃತ್ತಿ ಜೀವನ ನಡೆಸುತ್ತಿದ್ದಾರೆ. ಇತ್ತ ಓದು ಮುಂದುವರೆಸಿದ ಸೌಮ್ಯ, ಎಂ.ಕಾಂ ನಂತರ ಎಂಬಿಎ ಪದವೀಧರೆಯಾಗಿದ್ದಾರೆ.

ಈ ಬಾಲ್ಯದ ಸಹಪಾಠಿಗಳ ನಡುವೆ ನಾಲ್ಕು ವರ್ಷಗಳ ಹಿಂದೆ ಜಾತಿ ಮೀರಿದ ಪ್ರೀತಿ ಚಿಗುರೊಡೆದಿದೆ. ಪರಸ್ಪರ ಪ್ರೀತಿಸುತ್ತಿರುವುದನ್ನು ತಿಳಿದ ಇಬ್ಬರ ಪೋಷಕರೂ ವಿವಾಹಕ್ಕೆ ಒಪ್ಪಿದ್ದಾರೆ. ಈ ಹಿನ್ನೆಲೆಯಲ್ಲಿ ಯಾವುದೇ ಆಡಂಬರವಿಲ್ಲದೆ, ಮಾನವ ಮಂಟಪದಲ್ಲಿ ಪೋಷಕರ ಸಮ್ಮುಖದಲ್ಲಿ ಸರಳವಾಗಿ ಮದುವೆಯಾಗಿದ್ದಾರೆ. ಮಂಟಪದ ಬಳಗದವರು ಮುಂದೆ ನಿಂತು, ಜೋಡಿಯ ಹೊಸ ಜೀವನಕ್ಕೆ ಹರಸಿದ್ದಾರೆ. ಆಪ್ತಬಂಧುಗಳು, ಸ್ನೇಹಿತರೂ ವಿವಾಹಕ್ಕೆ ಸಾಕ್ಷಿಯಾಗಿದ್ದಾರೆ.


ಈ ಸಂದರ್ಭದಲ್ಲಿ ಮಾತನಾಡಿದ ಮಾನವ ಮಂಟಪದ ಸಂಚಾಲಕ ಧನಂಜಯ್ ಎಲಿಯೂರು ಮಂತ್ರ ಮಾಂಗಲ್ಯದ ಮಹತ್ವ ಎತ್ತಿ ಹಿಡಿದರು. ಮಂಟಪದ ಇನ್ನೋರ್ವ ಸಂಚಾಲಕ ಪ್ರೊ.ಕಾಳಚನ್ನೇಗೌಡ ಅವರು ಮಂತ್ರ ಮಾಂಗಲ್ಯದ ಪ್ರಮಾಣ ವಚನ ಬೋಧಿಸಿದರು. ಮತ್ತೋರ್ವ ಸಂಚಾಲಕ ಉಗ್ರನರಸಿಂಹೇಗೌಡ ಅವರು ವಿವಾಹ ಸಂಹಿತೆಯನ್ನು ಬೋಧಿಸಿದರು.

ರಂಗಕರ್ಮಿ ದೀಪಕ್ ಮೈಸೂರು, ಸುಬ್ರಮಣಿ ಸಹಪಾಠಿ ಮಂಜುನಾಥ್ ಮಾತನಾಡಿ, ದಂಪತಿಗೆ ಹರಸಿದರು.



ಮೈಸೂರಿನ ಮಾನವ ಮಂಟಪದಲ್ಲಿ ಸುಬ್ರಮಣಿ ಹಾಗೂ ಸೌಮ್ಯ ಅವರು ಕುವೆಂಪು ಮಂತ್ರ ಮಾಂಗಲ್ಯದ ಮೂಲಕ ಸತಿ–ಪತಿಗಳಾದರು. ಈ ವೇಳೆ ಪೋಷಕರು, ಸ್ನೇಹಿತರು, ಮಂಟಪದ ಸಂಚಾಲಕರು ಉಪಸ್ಥಿತರಿದ್ದರು.

ವ್ಯಕ್ತಿ ನಾಪತ್ತೆ



ಮೈಸೂರು,ಜೂ.19–ಮೈಸೂರಿನ ರಾಜೇಂದ್ರನಗರದ ಲಿಂಗಾಯತರ ಬೀದಿಯಲ್ಲಿ ಇಸ್ತ್ರೀ ಅಂಗಡಿ ನಡೆಸುತ್ತಿದ್ದ ಮೊಹಮ್ಮದ್ ಎಜಾಸ್ ಮೇ 2 ರಂದು ಬೆಳಗ್ಗೆ ಅಂಗಡಿಗೆಂದು ಮನೆಯಿಂದ ಹೊರ ಹೋದವರು ನಾಪತ್ತೆಯಾಗಿದ್ದಾರೆ.

ನಾಪತ್ತೆಯಾದ ಮೊಹಮ್ಮದ್ ಎಜಾಸ್ ವಯಸ್ಸು 54 ವರ್ಷ, ಎತ್ತರ 5.4 ಅಡಿ, ದುಂಡು ಮುಖ, ಗೋಧಿ ಮೈಬಣ್ಣ, ಸಾಧಾರಣ ಮೈ ಕಟ್ಟು, ಕಪ್ಪು–ಬಿಳಿ ಮಿಶ್ರಿತ ತಲೆಗೂದಲು ಉಳ್ಳವರಾಗಿದ್ದು, ಕನ್ನಡ, ಹಿಂದಿ, ಉರ್ದು ಮಾತನಾಡುತ್ತಾರೆ. ಕಾಣೆಯಾದ ವೇಳೆ ಗ್ರೇ ಕಲರ್ ಶರ್ಟ್, ಕ್ರೀಂ ಕಲರ್ ಪ್ಯಾಂಟ್ ಧರಿಸಿರುತ್ತಾರೆ. ಇವರ ಬಗ್ಗೆ ಯಾರಿಗಾದರೂ ಸುಳಿವು ಸಿಕ್ಕಲ್ಲಿ ನರಸಿಂಹರಾಜ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 0821–2418312, 2418100 ಮೂಲಕ ಮಾಹಿತಿ ನೀಡುವಂತೆ ಪ್ರಕಟಣೆ ಕೋರಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ನಮ್ಮ ಪಕ್ಷದ ಟಿಕೆಟ್ ನಿರ್ಧರಿಸುವವನು ನಾನೇ...!

●ಮೈಸೂರಿನಲ್ಲಿ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸ್ಪಷ್ಟನೆ ●ಶಾಸಕ ಜಿ.ಟಿ.ದೇವೇಗೌಡರ ವಿಚಾರದಲ್ಲಿ ನನ್ನ ನಿಲುವು ಸ್ಪಷ್ಟ ●ಹೆಚ್.ಡಿ.ದೇವೇಗೌಡರು ಹೇಳಿದರೂ ನಿಲುವು ಬದಲಿಸುವುದಿಲ್ಲ ●ಅಡ್ಡ ಮತದಾನ ಮಾಡಿದ ಈ ಜಿಲ್ಲೆ ವ್ಯಕ್ತಿ ಕಥೆ ಮುಗಿದ ಅಧ್ಯಾಯ ●ಮೂರು ಬಾರಿ ಅವರಿಂದ ನನಗೆ ಕಹಿ ಅನುಭವವಾಗಿದೆ ●ಜಿಟಿಡಿ ಬಗ್ಗೆ ಹೆಚ್.ಡಿ.ದೇವೇಗೌಡರಿಗೆ ಪ್ರೀತಿ, ವ್ಯಾಮೋಹವಿದೆ

ಮೈಸೂರು, ಜೂ.19(ಬಿಎಲ್‌ಯು)– ಶಾಸಕ ಜಿ.ಟಿ.ದೇವೇಗೌಡರ ವಿಚಾರದಲ್ಲಿ ನನ್ನ ಸ್ಟ್ಯಾಂಡ್ ಬಹಳ ಕ್ಲಿಯರ್ ಆಗಿದ್ದು, ಈ ವಿಷಯದಲ್ಲಿ ಪಕ್ಷದ ವರಿಷ್ಠರಾದ ಹೆಚ್.ಡಿ.ದೇವೇಗೌಡರು ಹೇಳಿದರೂ ನನ್ನ ನಿಲುವು ಬದಲಾಯಿಸುವುದಿಲ್ಲ ಎಂದು ಕೇಂದ್ರದ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಈ ಮೂಲಕ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜಿ.ಟಿ.ದೇವೇಗೌಡರಿಗೆ ಜೆಡಿಎಸ್ ಟಿಕೆಟ್ ನೀಡುವುದಿಲ್ಲ ಎಂದು ಪರೋಕ್ಷವಾಗಿ ಪ್ರಕಟಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಗುರುವಾರ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿರುವ ಈ ಜಿಲ್ಲೆಯ ವ್ಯಕ್ತಿಯ ಕಥೆ ಮುಗಿದ ಅಧ್ಯಾಯ ಎಂದು ಜಿ.ಟಿ.ದೇವೇಗೌಡರ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು.



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಪತ್ರಕರ್ತರೊಂದಿಗೆ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿದರು.

ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಸೋಲುಂಡ ಬೆಳವಣಿಗೆ ಬಗ್ಗೆ ಮಾತನಾಡುತ್ತಿದ್ದ ಸಂದರ್ಭದಲ್ಲಿ ಜಿ.ಟಿ.ದೇವೇಗೌಡರ ಹೆಸರು ಪ್ರಸ್ತಾಪಿಸುತ್ತಿದ್ದಂತೆ, 'ನನ್ನ ಮುಂದೆ ಅವರ ಹೆಸರು ಎತ್ತಬೇಡಿ, ಅದೆಲ್ಲಾ ಮುಗಿದು ಹೋದ ಕಥೆ' ಎಂದು ಆಕ್ರೋಶಭರಿತರಾಗಿ ನುಡಿದರು.

ಕಳೆದ ಒಂದೂವರೆ ವರ್ಷದಿಂದಲೂ ಅವರ ಬಗ್ಗೆ ನಾನು ಚಕಾರ ಎತ್ತುತ್ತಿಲ್ಲ. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಇತ್ತೀಚಿಗೆ ನಡೆದ ಸಮಾವೇಶದಲ್ಲಿ ಕೂಡ ನಾನು ಅವರ ಹೆಸರು ಪ್ರಸ್ತಾಪಿಸಿಲ್ಲ ಎಂದು ತಿಳಿಸಿದರು.

ನಮ್ಮ ಪಕ್ಷದ ಕೆಲವರು ಆ ವ್ಯಕ್ತಿಯನ್ನು ಸರಿಪಡಿಸುವ ಪ್ರಯತ್ನ ಮಾಡಿದರು. ಅದು ಅವರ ವೈಯಕ್ತಿಕ ವಿಚಾರ. ಆದರೆ ಇದೇನೆ ಬೆಳವಣಿಗೆ ಇರಲಿ ಪಕ್ಷಕ್ಕೆ ಸಂಬಂಧಿಸಿದ ಅಂತಿಮ ತೀರ್ಮಾನ ಕೈಗೊಳ್ಳುವುದು ನಾನೇ. ಈ ಬಗ್ಗೆ ನಾನೇ ಅಂತಿಮ ನಿರ್ಧಾರ ಕೈಗೊಳ್ಳುತ್ತೇನೆ. ಈ ವಿಚಾರವಾಗಿ ದೊಡ್ಡ ಗೌಡರು (ಹೆಚ್.ಡಿ. ದೇವೇಗೌಡ) ಹೇಳಿದರೂ ಕೂಡ ಪಕ್ಷದ ಹಿತದೃಷ್ಟಿಯಿಂದ ನನ್ನ ತೀರ್ಮಾನ ಬದಲಿಸುವುದಿಲ್ಲ.

ಈ ವ್ಯಕ್ತಿ ಏನೆಲ್ಲಾ ಮಾಡಿದ್ದಾರೆ ಎಂಬುದು ನನಗೆ ಗೊತ್ತು. ಮೂರು ಬಾರಿ ನನಗೆ ಅವರಿಂದ ಕಹಿ ಅನುಭವ ಆಗಿದೆ. ಯಾರು ಎಷ್ಟೆ ಒತ್ತಡ ಹಾಕಿದರೂ ನನ್ನ ನಿರ್ಧಾರವನ್ನು ನಾನು ಕಠಿಣವಾಗಿ ತೆಗೆದುಕೊಳ್ಳುತ್ತೇನೆ. ಈ ವಿಷಯದಲ್ಲಿ ನನ್ನ ವೈಯಕ್ತಿಕ ವಿಚಾರ ಮುಖ್ಯವಲ್ಲ, ಪಕ್ಷವನ್ನು ಉಳಿಸಲು ಕೆಲವು ಕಠಿಣ ನಿರ್ಧಾರವನ್ನು ಮಾಡಲೇಬೇಕಾಗಿದೆ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಜೆನ್ ಜಿಗೆ ಅವಕಾಶ; ಹೊಸ ಮುಖಗಳಿಗೆ ಆದ್ಯತೆ

ಮುಂದಿನ ದಿನಗಳಲ್ಲಿ ಜೆನ್ ಜಿ (Gen Z) ತಲೆಮಾರಿನ ಯುವ ಜನರಿಗೆ ಹೆಚ್ಚಿನ ಅವಕಾಶ ನೀಡಲಿದ್ದು, ಹೊಸ ಮುಖಗಳಿಗೆ ಆದ್ಯತೆ ನೀಡುವ ಬಗ್ಗೆ ನಿರ್ಧಾರ ಮಾಡಿದ್ದೇನೆ ಎಂದು ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದಂತೆ ವಂಚನೆ ಹಾಗೂ ಮೋಸ ಮಾಡಿರುವುದು ನಮ್ಮ ಪಕ್ಷಕ್ಕೆ ಹೊಸದೇನಲ್ಲ. ಎಷ್ಟೋ ಸಲ ಅದನ್ನೆಲ್ಲಾ ಎದುರಿಸಿ ಆಚೆ ಬಂದಿದ್ದೇವೆ ಎಂದು ತಿಳಿಸಿದರು.

ಅತಿಯಾದ ನಂಬಿಕೆ, ವಿಶ್ವಾಸವೇ ನಮ್ಮ ಸೋಲಿಗೆ ಕಾರಣವಾಗಿದೆ. ಇದರಿಂದ ಹೊರ ಬಂದು ಪಕ್ಷ ಕಟ್ಟುವ ಶಕ್ತಿ ನಮಗಿದೆ. ಈ ನಿಟ್ಟಿನಲ್ಲಿ ಜೆನ್ ಜಿ ತಲೆಮಾರಿಗೆ ಅವಕಾಶ ನೀಡುತ್ತೇನೆ. ಹೊಸ ನಾಯಕತ್ವ ಬೆಳೆಸುತ್ತೇನೆ ಎಂದು ಹೇಳಿದರು.

ಹೆಚ್.ಡಿ.ದೇವೇಗೌಡರು ಕಳೆದ 60 ವರ್ಷಗಳಿಂದ ರಾಜಕಾರಣ ಮಾಡಿಕೊಂಡು ಬಂದಿದ್ದಾರೆ. ಆದರೆ ಕೆಲವರು ಮಾಡಿದ ದ್ರೋಹದಿಂದ ಅವರು ಅಧಿಕಾರದಲ್ಲಿ ಇದ್ದಿದ್ದು ಕೇವಲ ಅತ್ಯಲ್ಪ ಅವಧಿ ಮಾತ್ರ. ಅವರ ಬಳವಳಿ ನನಗೂ ಬಂದಿದೆ ಎಂದು ಕುಮಾರಸ್ವಾಮಿ ಬೇಸರದಿಂದ ಹೇಳಿದರು.

ಶಾಸಕರಿಗೆ ಹಣ ಮಾಡಿಕೊಡಲು ದೇಣಿಗೆ ಪಡೆದು ಟಿಕೆಟ್ ನೀಡಿದ್ದೇನೆ

ನಮ್ಮ ಪಕ್ಷದ ಶಾಸಕರಿಗೆ ಹಣ ಮಾಡಿಕೊಡಲು ಈ ಹಿಂದೆ ಕೆಲವರಿಗೆ ವಿಧಾನ ಪರಿಷತ್ ಹಾಗೂ ವಿಧಾನಸಭಾ ಚುನಾವಣೆಗೆ ಟಿಕೆಟ್ ಕೊಟ್ಟಿದ್ದೇನೆ. ಟಿಕೆಟ್ ಕೊಟ್ಟವರಿಂದ ಪಕ್ಷಕ್ಕೆ ದೇಣಿಗೆ ಕೂಡ ಪಡೆದುಕೊಂಡಿದ್ದೇನೆ ಎಂದು ಹೆಚ್.ಡಿ.ಕುಮಾರಸ್ವಾಮಿ ಸ್ಪಷ್ಟನೆ ನೀಡಿದರು.

ವೈಯಕ್ತಿಕ ಲಾಭಕ್ಕಾಗಿ ನಾನು ಎಂದೂ ಟಿಕೆಟ್ ಮಾರಾಟ ಮಾಡಿ ಕೊಂಡಿಲ್ಲ ನಾನು ಸಿಎಂ ಆಗಿದ್ದಾಗ ಎಂದೂ ನನ್ನ ಸಹಿಯನ್ನು ಮಾರಾಟಕ್ಕೆ ಇಟ್ಟಿರಲಿಲ್ಲ. ಈಗ ಕೇಂದ್ರ ಸಚಿವನಾಗಿ ಕೂಡ ನನ್ನ ಸಹಿಯನ್ನು ಮಾರಾಟ ಮಾಡುತ್ತಿಲ್ಲ ಎಂದರು. ನನ್ನ ಹಳೆಯ ಸ್ನೇಹಿತರು ಏನೇನೊ ಮಾತನಾಡುತ್ತಿದ್ದಾರೆ. ಅವರೆಲ್ಲಾ ಮಾತನಾಡಲಿ ಬಿಡಿ. ಇದಕ್ಕೆಲ್ಲಾ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ ಎಂದು ತಿರುಗೇಟು ನೀಡಿದರು.

ಪ್ಲೇ ವಿನ್ ಲಾಟರಿ ನಿಷೇಧದ ವೇಳೆ ನನಗೆ ಕೋಟ್ಯಾಂತರ ರೂಪಾಯಿ ಆಫರ್ ನೀಡಿದ್ದರು. ಹೋಟೆಲ್‌ನಲ್ಲೇ ಹಣ ತಂದಿಟ್ಟುಕೊಂಡಿದ್ದರು. ಆದರೆ, ಜನರ ಹಿತವನ್ನು ಪರಿಗಣಿಸಿ ಅವರ ಹಣವನ್ನು ಧಿಕ್ಕರಿಸಿದವನು ನಾನು. ಆದ ಕಾರಣ ಅವರ ಆರೋಪಕ್ಕೆಲ್ಲಾ ನಾನು ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಕುಮಾರಸ್ವಾಮಿ ಹೇಳಿದರು.

ಈ ಜಿಲ್ಲೆ ಶಾಸಕರು ಒಂದು ಕಾಲಲ್ಲ, ಎರಡು ಕಾಲನ್ನು ಹೊರಗೆ ಇಟ್ಟಿದ್ದಾರೆ. ಅವರ ಬಗ್ಗೆ ನಾನು ಈ ಹಿಂದೆ ಏನು ಹೇಳಿದ್ದೇನೊ ಅದೇ ಅಂತಿಮ ನಿರ್ಧಾರವಾಗಿದೆ. ಅವರ ವಿಚಾರದಲ್ಲಿ ನನ್ನ ನಿಲುವು ಸ್ಪಷ್ಟವಾಗಿದೆ. ಈ ಬಾರಿಯ ವಿಧಾನಸಭಾ ಚುನಾವಣೆಯ ಟಿಕೆಟ್ ಅಂತಿಮಗೊಳಿಸುವ ನಿರ್ಧಾರ ನನ್ನದೆ ಆಗಿರುತ್ತದೆ ಎಂದು ಹೇಳಿದರು.

ಈ ವ್ಯಕ್ತಿ ಯಾವ್ಯಾವಾಗ ಯಾವ ರೀತಿಯ ಆಟ ಕಟ್ಟಿದ್ದಾರೆ ಎಂಬುದು ನನಗೆ ಗೊತ್ತಿದೆ. ಇದರಿಂದ ಈ ಬಾರಿ ಕಠಿಣ ನಿರ್ಧಾರಕ್ಕೆ ಬಂದಿದ್ದೇನೆ. ಅವರ ಎಲ್ಲಾ ಪೂರ್ವಾಪರ ನನಗೆ ಗೊತ್ತಿದೆ ಎಂದರು.

ಹೆಚ್.ಡಿ.ದೇವೇಗೌಡರಿಗೆ ಜಿ.ಟಿ.ದೇವೇಗೌಡರ ಬಗ್ಗೆ ಪ್ರೀತಿ, ವ್ಯಾಮೋಹ ಇರುವುದು ಕಟು ಸತ್ಯ. ಆದರೆ ಅವರ ವ್ಯಾಮೋಹವನ್ನೆ ಜಿ.ಟಿ. ದೇವೇಗೌಡರು ದುರುಪಯೋಗ ಮಾಡಿಕೊಂಡಿದ್ದಾರೆ. ಆದರೆ, ಮುಂದೆ ನಾನು ಇದಕ್ಕೆ ಅವಕಾಶ ನೀಡುವುದಿಲ್ಲ ಎಂದು ಕುಮಾರಸ್ವಾಮಿ ತಿಳಿಸಿದರು.

ಕಾರ್ಯಕರ್ತರು ಹಗಲಿರುಳು ಕಷ್ಟಪಟ್ಟು ಗೆಲ್ಲಿಸಿ ಶಾಸಕರನ್ನಾಗಿ ಮಾಡಿದ್ದಾರೆ. ಆದರೆ ಇವರು ತಮ್ಮ ಸ್ವಾರ್ಥ ನೋಡಿಕೊಂಡಿದ್ದಾರೆ. ಜಿ.ಟಿ.ದೇವೇಗೌಡರ ಬಗ್ಗೆ ನನ್ನ ಬಳಿ ಚರ್ಚೆ ಮಾಡಬೇಡಿ ಹಾಗೂ ಅವರ ವಿಚಾರವಾಗಿ ಯಾವುದೇ ಪ್ರಶ್ನೆ ಕೇಳಬೇಡಿ ಎಂದು ಪತ್ರಕರ್ತರಿಗೆ ಸಲಹೆ ನೀಡಿದರು.

ನಾನು ಕೇಂದ್ರದಲ್ಲಿರುವುದು ಟೆಂಪರವರಿ

ನಾನು ರಾಷ್ಟ್ರ ರಾಜಕಾರಣದಲ್ಲಿ ಇರುವುದು ಟೆಂಪರವರಿಯಷ್ಟೆ. ನನಗೆ ರಾಜ್ಯವೇ ಪರ್ಮನೆಂಟ್. ರಾಜ್ಯ ರಾಜಕಾರಣಕ್ಕೆ ನಾನು ಹೊಸದಾಗಿ ಬರಬೇಕಾಗಿಲ್ಲ. ನಮ್ಮ ಪಕ್ಷಕ್ಕೆ ನಾನೇ ಅಧ್ಯಕ್ಷ ಅಲ್ಲವೆ ಎಂದ ಕುಮಾರಸ್ವಾಮಿ, ಈ ಮೂಲಕ ರಾಜ್ಯ ರಾಜಕಾರಣಕ್ಕೆ ವಾಪಸು ಬರುವುದನ್ನು ಮತ್ತೊಮ್ಮೆ ಖಚಿತಪಡಿಸಿದರು.

ರಬ್ಬಿಸ್ ಹೇಳಿಕೆಗೆ ಕಿಡಿ: ಮುಖ್ಯಮಂತ್ರಿಯಾದರೂ ಬ್ಲೂ ಫಿಲಂ ಮಾಡುವುದ ಬಿಟ್ಟಿಲ್ಲ ಎಂಬ ತಮ್ಮ ಹೇಳಿಕೆ ಬಗ್ಗೆ ರಬ್ಬಿಶ್ ಎಂಬ ಸಿಎಂ ಡಿ.ಕೆ.ಶಿವಕುಮಾರ್ ಲೇವಡಿ ಬಗ್ಗೆ ಕುಮಾರಸ್ವಾಮಿ ಕಿಡಿಕಾರಿದರು. ಡಿ.ಕೆ.ಶಿವಕುಮಾರ್ ಅವರ ಭ್ರಷ್ಟಾಚಾರದ ಬಗ್ಗೆ ನಾನು ಹೇಳುತ್ತಿರುವುದನ್ನು ಜನರೇ ಬಹಿರಂಗಪಡಿಸುತ್ತಿದ್ದಾರೆ. ಇದರಲ್ಲಿ ನಾನೇನು ತಪ್ಪು ಹೇಳಿದ್ದೇನೆ. ಇದ್ದಿದ್ದನ್ನು ಇದ್ದ ಹಾಗೆ ಹೇಳಿದ್ದೇನೆ ಅಲ್ಲವೆ ಎಂದು ಪ್ರಶ್ನಿಸಿದರು.

ರೆಡ್ ಝೋನ್‌ನಿಂದ ಭೂಮಿ ಸೇಫ್: ಬಿಡದಿಯಲ್ಲಿ ನಾನು ರೆಡ್ ಝೋನ್ ತೆಗೆದು ಹಾಕದಿದ್ದರೆ ಇವತ್ತು ಒಂದು ಚೂರು ಭೂಮಿ ರೈತರ ಬಳಿ ಇರುತ್ತಿರಲಿಲ್ಲ ಎಂದು ಡಿ.ಕೆ. ಶಿವಕುಮಾರ್‌ಗೆ ಕುಮಾರಸ್ವಾಮಿ ತಿರುಗೇಟು ನೀಡಿದರು.

ನಾನೇನಾದರೂ ರಿಯಲ್ ಎಸ್ಟೇಟ್ ಮಾಫಿಯಾ ಪರ ಇದ್ದಿದ್ದರೆ ಇಷ್ಟೊತ್ತಿಗೆ ಬಿಡದಿ ಭೂಮಿ ರೈತರ ಕೈತಪ್ಪುತ್ತಿತ್ತು. ಬಿಡದಿ ಟೌನ್ ಶಿಪ್ ಯೋಜನೆಗೆ ಡಿಎಲ್‌ಎಫ್ ಹಣ ಕಟ್ಟಿರಲಿಲ್ಲ. ರಾಜ್ಯಪಾಲರ ಅವಧಿಯಲ್ಲಿ ಹಣ ಕಟ್ಟಿ ನಂತರ ವಾಪಾಸು ಪಡೆದಿದ್ದರು ಎಂದು ಸ್ಪಷ್ಟನೆ ನೀಡಿದರು.

2007, ಜುಲೈ 31 ರಂದು ಬಿಡದಿ ಟೌನ್ ಶಿಪ್ ಬಗ್ಗೆ ಇದೇ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಪುಟಗಟ್ಟಲೆ ಏನೇನು ಮಾತನಾಡಿದ್ದಾರೆ, ಮಲ್ಲಿಕಾರ್ಜುನ ಖರ್ಗೆ ಅವರು ಏನು ಹೇಳಿದ್ದಾರೆ. ಇದನ್ನೆಲ್ಲಾ ಬಹಿರಂಗ ಮಾಡುತ್ತೇನೆ ಎಂದು ಸವಾಲು ಹಾಕಿದರು.

ನಾನು ಸಿಎಂ ಆಗಿದ್ದಾಗ ಟೌನ್ ಶಿಪ್ ಮಾಡಲು ನಿರ್ಧಾರ ಮಾಡಿದ್ದು ನಿಜ. ಆದರೆ ರೈತರ ಸಭೆ ಕರೆದು ಜನರ ಭಾವನೆಗೆ ಬೆಲೆ ಕೊಟ್ಟು ಅಂದು ಈ ಯೋಜನೆ ಕೈಬಿಟ್ಟಿದ್ದೆ. ರೈತರ ಭೂಮಿ ರಿಯಲ್ ಎಸ್ಟೇಟ್ ಕುಳಗಳ ಕೈ ಸೇರಬಾರದೆಂದು ಅಂದು ಆ ಯೋಜನೆ ಕೈಬಿಟ್ಟಿದ್ದೆ ಎಂದು ಸ್ಪಷ್ಟಪಡಿಸಿದರು.

ಬಿಡದಿ ಟೌನ್‌ಶಿಪ್ ಹೆಸರಿನಲ್ಲಿ ರೈತರ ಭೂಮಿ ಲೂಟಿ ಮಾಡಲು ನಾನು ಬಿಡುವುದಿಲ್ಲ. ಮುಂದಿನ ಸದನದಲ್ಲಿ ಅದರ ಎಲ್ಲಾ ದಾಖಲೆಗಳನ್ನು ಬಿಡುಗಡೆ ಮಾಡುತ್ತೇನೆ ಎಂದು ಎಚ್ಚರಿಸಿದರು. ಬಿಡದಿ ಟೌನ್‌ಶಿಪ್ ಕುಮಾರಸ್ವಾಮಿ ಕೂಸು, ನೈಸ್ ರಸ್ತೆ ಹೆಚ್.ಡಿ.ದೇವೇಗೌಡರ ಕೂಸು ಎನ್ನುತ್ತಿದ್ದಾರೆ. ಆದರೆ ಇದರಲ್ಲಿ ಲಾಭ ಮಾಡಿಕೊಂಡಿದ್ದು ಯಾರೋ ಎಂದು ಕುಮಾರಸ್ವಾಮಿ ಹೇಳಿದರು.

ನಮ್ಮ ಹಿತ ಶತ್ರುಗಳು ಯಾರೆಂದು ಪತ್ತೆಯಾಗಿದೆ!

ನಮ್ಮ ಶಾಸಕರ ಪಕ್ಷನಿಷ್ಠೆ ಪರೀಕ್ಷೆಗಾಗಿಯೇ ನಾನು ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದೆ. ಇದರಿಂದ ಪಕ್ಷದಲ್ಲಿರುವ ಹಿತ ಶತ್ರುಗಳು ಯಾರೆಂದು ಪತ್ತೆಯಾಗಿದೆ ಎಂದು ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ಯಾರ ಯಾರ ಆತ್ಮಸಾಕ್ಷಿ ಹೇಗೆಲ್ಲಾ ವರ್ತಿಸುತ್ತದೆ ಎಂದು ತಿಳಿಯಲೆಂದೇ ನಾನು ಅಭ್ಯರ್ಥಿಯನ್ನು ಸ್ಪರ್ಧೆಗಿಳಿಸಿದ್ದೆ. ಎಲ್ಲವೂ ನಾನು ಅಂದುಕೊಂಡಂತೆ ಆಗಿದೆ. ಮುಂದಿನ ದಿನಗಳಲ್ಲಿ ಪಕ್ಷವನ್ನು ಹೇಗೆ ಕಟ್ಟಬೇಕು ಎಂಬುದು ನನಗೆ ತಿಳಿದಿದೆ ಎಂದು ವಿರೋಧಿಗಳಿಗೆ ಟಾಂಗ್ ನೀಡಿದರು.

ಈ ಬೆಳವಣಿಗೆಯನ್ನು ನಾನು ಮೊದಲೇ ನಿರೀಕ್ಷೆ ಮಾಡಿದ್ದೆ. ಆದರೆ ಯಾರನ್ನು ಅತಿಯಾಗಿ ನಂಬಬಾರದು ಎಂಬ ಪಾಠವನ್ನು ಈ ಚುನಾವಣೆ ಕಲಿಸಿದೆ. ಇದರಿಂದ ಚುನಾವಣೆಯಲ್ಲಿ ಅಡ್ಡ ಮತದಾನ ಆಗಿರುವುದು ನನಗೆ ಆಘಾತವನ್ನೇನು ಉಂಟು ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು.

ಯಾರ್‍ಯಾರು ಅಡ್ಡ ಮತದಾನ ಮಾಡಿದ್ದಾರೆ ಎಂಬ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ಯಾವ ಯಾವ ಕಾರಣಕ್ಕೆ ಅವರು ಅಡ್ಡ ಮತದಾನ ಮಾಡಿದ್ದಾರೆ ಎಂಬುದೂ ನನಗೆ ಗೊತ್ತಿದೆ. ಪಕ್ಷ ಬಿಡುವ ಚರ್ಚೆಯ ಹಂತಕ್ಕೂ ಅವರೆಲ್ಲಾ ಹೋಗಿ ಅಡ್ಡ ಮತದಾನ ಮಾಡಿದ್ದಾರೆ. ಹೋಗುವವರೆಲ್ಲಾ ಹೋಗಲಿ ಬಿಡಿ ಎಂದು ಹೇಳಿದರು.

ನಮ್ಮ ಪಕ್ಷದ ನಾಲ್ವರು ಅಡ್ಡ ಮತದಾನ ಮಾಡಿದ್ದಾರೆ. ಇದರಿಂದ ನಾನೇನು ವಿಚಲಿತನಾಗಿಲ್ಲ. ಕ್ರಾಸ್ ಓಟ್ ಮಾಡಿದವರ ವಿರುದ್ಧ ಸಮಯ ನೋಡಿಕೊಂಡು ಕ್ರಮ ಕೈಗೊಳ್ಳುತ್ತೇನೆ ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಇತರೆ ತಂತ್ರಜ್ಞಾನದಂತೆ ಎಐಗೂ ಬಹಳಷ್ಟು ಸವಾಲುಗಳಿವೆ

ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಭಿಪ್ರಾಯ



ಮೈಸೂರಿನ ಮಾನಸ ಗಂಗೋತ್ರಿಯ ಸ್ಕೂಲ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಶುಕ್ರವಾರ ವಿಜ್ಞಾನ– ತಂತ್ರಜ್ಞಾನ ಕನ್ನಡೋತ್ಸವ ಸಮಾರಂಭದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಜೂ.19(ಬಿಎಲ್‌ಯು)– ಪ್ರತಿಯೊಂದು ತಂತ್ರಜ್ಞಾನಕ್ಕೆ ಇರುವಂತೆ ಕೃತಕ ಬುದ್ಧಿಮತ್ತೆ (ಎಐ) ಗೂ ಬಹಳಷ್ಟು ಸವಾಲುಗಳಿದ್ದು, ಡೇಟಾ ಗೌಪ್ಯತೆ ದೊಡ್ಡ ಸಮಸ್ಯೆಯಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಸ್ಕೂಲ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಇಂದು ವಿಜ್ಞಾನ– ತಂತ್ರಜ್ಞಾನ ಕನ್ನಡೋತ್ಸವ ಹಾಗೂ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ಮಾತನಾಡಿದ ಅವರು, ಇತರೆ ತಂತ್ರಜ್ಞಾನಗಳಂತೆ ಎಐ ಕೂಡ ಈ ಎಲ್ಲಾ ಸವಾಲುಗಳನ್ನು ಮೆಟ್ಟಿ ನಿಲ್ಲಬೇಕಾಗಿದೆ ಎಂದರು.

ಇಂತಹ ಯಾವುದೇ ಸವಾಲುಗಳಿರಲಿ ಇಂದಿನ ಡಿಜಿಟಲ್ ಯುಗದಲ್ಲಿ ಎಐ ಕೇವಲ ತಂತ್ರಜ್ಞಾನವಲ್ಲ, ಬದಲಿಗೆ ಪ್ರತಿಯೊಂದು ಕ್ಷೇತ್ರವನ್ನು ರೂಪಾಂತರಿಸುತ್ತಿರುವ ಕ್ರಾಂತಿಕಾರಿ ಶಕ್ತಿ ಎಂದು ಪ್ರೊ.ಲೋಕನಾಥ್ ಹೇಳಿದರು.

ಮಾನವನ ಬುದ್ಧಿ ಶಕ್ತಿಯನ್ನು ಕಂಪ್ಯೂಟರ್ ಮತ್ತು ಯಂತ್ರಗಳಲ್ಲಿ ಅನ್ವಯಿಸುವ ವಿಜ್ಞಾನ ಎಐ ಆಗಿದೆ. ಎಐಯನ್ನು ಸರಿಯಾದ ರೀತಿ ಬಳಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ನೀತಿ ನಿಯಮ ರೂಪಿಸುವುದು ಅತ್ಯಗತ್ಯ ಎಂದು ತಿಳಿಸಿದರು.

ಸಂಶೋಧಕರು ನೈತಿಕ ಮಾರ್ಗ ಅನುಸರಿಸಬೇಕು. ಜೊತೆಗೆ ಜನರು ಕೂಡ ಜಾಗೃತರಾಗಿರಬೇಕು. ಎಐ ಮನುಷ್ಯನ ಶತ್ರುವಲ್ಲ, ಆದರೆ ಅದನ್ನು ಸರಿಯಾದ ರೀತಿ ಬಳಸಿಕೊಂಡರೆ ಸಮಾಜದ ಅಭಿವೃದ್ಧಿಗೆ ದೊಡ್ಡ ಕೊಡುಗೆ ನೀಡಬಹುದು ಎಂದು ಪ್ರೊ.ಲೋಕನಾಥ್ ಹೇಳಿದರು.

ವಿಶ್ರಾಂತ ಕುಲಪತಿ ಡಾ.ಕೆ. ಚಿದಾನಂದಗೌಡ ಅವರು ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಿದರು.

ಸ್ಕೂಲ್ ಆಫ್ ಇಂಜಿನಿಯರಿಂಗ್ ನ ನಿರ್ದೇಶಕ ಡಾ.ಎಂ.ಎಸ್. ಗೋವಿಂದೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಭ್ರಮಾಚರಣೆ



ರಘು ಕೌಟಿಲ್ಯ ಅವರು ವಿಧಾನ ಪರಿಷತ್ ಚುನಾವಣೆಯಲ್ಲಿ ಆಯ್ಕೆಯಾದ ಹಿನ್ನೆಲೆಯಲ್ಲಿ ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು.

ಅಭಿನಂದನೆ



ವಿಧಾನಪರಿಷತ್ ಸದಸ್ಯರಾಗಿ ಆಯ್ಕೆಯಾದ ಆರ್.ರಘು ಕೌಟಿಲ್ಯ ಅವರನ್ನು ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಜೆ.ಎಸ್.ಜಗದೀಶ್ ಅಭಿನಂದಿಸಿದರು. ಈ ವೇಳೆ ಲೋಹಿತ್ ಶರ್ಮ, ಯಶಸ್ ಮಾವತ್ತೂರ್ ಇದ್ದರು.

ಸಮಗ್ರ ಭಾರತೀಯರ ಆರ್ಥಿಕ ಸಬಲೀಕರಣವೇ ಪ್ರಧಾನಮಂತ್ರಿ ವಿಕ್ಸಿತ್ ಭಾರತ್ ರೋಜ್ಗಾರ್ ಯೋಜನೆ ಉದ್ದೇಶ

●ಸಂಸದ ಯದುವೀರ್ ಅಭಿಮತ ●ವಿಕ್ಸಿತ್ ಭಾರತ್ ಪ್ರಧಾನಿಗಳ ಮಹಾ ಗುರಿ

ಮೈಸೂರು, ಜೂ.19(ವಿವಿಹೆಚ್)–ಸಮಗ್ರ ಭಾರತೀಯರ ಆರ್ಥಿಕ ಸಬಲೀಕರಣವೇ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿ ಚಿಂತನೆಯಾದ ಪ್ರಧಾನ ಮಂತ್ರಿ ವಿಕ್ಸಿತ್ ಭಾರತ್ ರೋಜ್ಗಾರ್ ಯೋಜನೆ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ನಗರದ ಗೋಕುಲಂನ ವಿದ್ಯಾವರ್ಧಕ ಕಾಲೇಜಿನ ಸಾಹುಕಾರ್ ಚೆನ್ನಯ್ಯ ಸಭಾಂಗಣದಲ್ಲಿ ಪ್ರಾದೇಶಿಕ ಕಚೇರಿಯ ನೌಕರರ ಭವಿಷ್ಯನಿಧಿ ಸಂಸ್ಥೆಯ ವತಿಯಿಂದ ಶುಕ್ರವಾರ ಆಯೋಜಿಸಲಾಗಿದ್ದ ಪ್ರಧಾನಮಂತ್ರಿ ವಿಕ್ಸಿತ್ ಭಾರತ್ ರೋಜ್ಗಾರ್ ಯೋಜನೆಯ ಪ್ರೋತ್ಸಾಹ ಧನ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಧಾನಮಂತ್ರಿಯವರು ವಿಕ್ಸಿತ್ ಭಾರತಕ್ಕಾಗಿ ದೊಡ್ಡ ಗುರಿಯನ್ನು ಇಟ್ಟುಕೊಂಡಿದ್ದಾರೆ. ಅಂತ್ಯೋದಯದ ಸದ್ಕಲ್ಪನೆಯ ಮೂಲಕ ಸಮಾಜದ ಕೊನೆಯ ವ್ಯಕ್ತಿಗೂ ಗುಣಮಟ್ಟದ ಬದುಕನ್ನು ಒದಗಿಸುವುದು ಮತ್ತು ಎಲ್ಲರಿಗೂ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು ಈ ಯೋಜನೆಯ ಆಶಯವಾಗಿದೆ ಎಂದು ಹೇಳಿದರು.

ದೇಶದ ಆರ್ಥಿಕ ವ್ಯವಸ್ಥೆ ಬಲಗೊಳ್ಳಬೇಕಾದರೆ ಔಪಚಾರಿಕ ವಲಯದ ವ್ಯಾಪ್ತಿ ಹೆಚ್ಚಾಗಬೇಕು. ಈ ನಿಟ್ಟಿನಲ್ಲಿ ಸಾಮಾಜಿಕ ಭದ್ರತೆಯ ಜಾಲವನ್ನು ವಿಸ್ತರಿಸುವುದು ಅತ್ಯಂತ ಪ್ರಮುಖವಾಗಿದೆ. ಆರೋಗ್ಯದ ದೃಷ್ಟಿಯಿಂದ ಅಥವಾ ಯಾವುದೇ ತುರ್ತು ಸಂದರ್ಭದಲ್ಲಿ ನೆರವಾಗಲು ಈ ಸಾಮಾಜಿಕ ಭದ್ರತೆ ಪ್ರತಿಯೊಬ್ಬರಿಗೂ ಸಹಕಾರಿಯಾಗಲಿದೆ. ಈ ನಿಟ್ಟಿನಲ್ಲಿ ಪಿಎಂ ರೋಜ್ಗಾರ್ ಯೋಜನೆ ಪ್ರಮುಖ ಪಾತ್ರ ವಹಿಸಲಿದೆ ಎಂದರು.

ಭಾರತದ ಸಮಗ್ರ ಮತ್ತು ಸಂಪೂರ್ಣ ಆರ್ಥಿಕ ಅಭಿವೃದ್ಧಿಗಾಗಿ ಪ್ರತಿಯೊಬ್ಬರಿಗೂ ಉದ್ಯೋಗಾವಕಾಶಗಳು ಸಿಗಬೇಕು ಹಾಗೂ ದೇಶದ ಬಹುಪಾಲು ಜನರನ್ನು ಅನೌಪಚಾರಿಕ ವಲಯದಿಂದ ಔಪಚಾರಿಕ ವಲಯಕ್ಕೆ ಫಾರ್ಮಲ್ ಸೆಕ್ಟರ್ ತರುವುದು ಇಂದಿನ ಅಗತ್ಯವಾಗಿದೆ ಎಂದು ಅವರು ಹೇಳಿದರು.

ಈ ಮಹತ್ವಾಕಾಂಕ್ಷಿ ಯೋಜನೆಗಾಗಿ ನರೇಂದ್ರ ಮೋದಿ ಶ್ರಮಿಸಿದ್ದು, ಅದರ ಅಂಗವಾಗಿ ಕೇಂದ್ರ ಸರ್ಕಾರ ಸುಮಾರು 1 ಲಕ್ಷ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ. ಇಂದು ಮೊದಲ ಕಂತಿನಲ್ಲಿ 2400 ಕೋಟಿಗೂ ಅಧಿಕ ಮೊತ್ತದ ವಿತರಣೆ ಪ್ರಕ್ರಿಯೆ ನಡೆದಿದೆ. ಅರ್ಹ ಫಲಾನುಭವಿಗಳಿಗೆ ಹಂತಹಂತವಾಗಿ ಒಟ್ಟು 15,000 ವರೆಗೆ ಪ್ರೋತ್ಸಾಹ ಧನ ಮತ್ತು ತರಬೇತಿಯ ನೆರವು ಸಿಗಲಿದೆ. ಇದರೊಂದಿಗೆ ಉದ್ಯೋಗದಾತರಿಗೂ ಕೂಡ ಪ್ರತಿ ಉದ್ಯೋಗ ಸೃಷ್ಟಿಗೆ 3,000 ರೂ.ಗಳ ಪ್ರೋತ್ಸಾಹಕ ಸೌಲಭ್ಯ ಸಿಗಲಿದೆ ಎಂದರು.



ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು

ಭಾರತದ ಆರ್ಥಿಕ ವರ್ಗದಲ್ಲಿ ಪ್ರತಿಯೊಬ್ಬರೂ ಗುಣಮಟ್ಟದ ಬದುಕನ್ನು ಕಟ್ಟಿಕೊಳ್ಳಲು ಈ ಯೋಜನೆ ಸಹಕಾರಿಯಾಗಲಿದೆ. ಪ್ರೋತ್ಸಾಹ ಧನದ ಜೊತೆಗೆ, ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಕೆಲಸ ಇಲ್ಲಿ ನಡೆಸಲಾಗುತ್ತಿದೆ. ಇದರಿಂದಾಗಿ ಖಾಸಗಿ ಸಂಸ್ಥೆಗಳು ಆರ್ಥಿಕ ಸಬಲೀಕರಣಕ್ಕೆ ಬೆಂಬಲ ನೀಡುವಂತಾಗುತ್ತದೆ ಎಂದರು.

ಸಾರ್ವಜನಿಕರ ಪ್ರಗತಿಗಾಗಿ ಕೇಂದ್ರ ಸರ್ಕಾರದ ಎಷ್ಟೋ ಯೋಜನೆಗಳು ಜಾರಿಯಾಗುತ್ತಲೇ ಇರುತ್ತವೆ. ಆದರೆ ನಮ್ಮ ಭಾಗಗಳಲ್ಲಿ ಪ್ರಚಾರದ ಕೊರತೆಯಿಂದಾಗಿ ಜನರ ಬಳಿಗೆ ತಲುಪುತ್ತಿಲ್ಲ. ಯೋಜನೆಗಳ ಫಲಾನುಭವಿಗಳೂ ಸೇರಿದಂತೆ ಉದ್ಯಮಿಗಳು ಮತ್ತು ಸಾರ್ವಜನಿಕರು ಇದರ ಬಗ್ಗೆ ಹೆಚ್ಚಿನ ಪ್ರಚಾರ ನಡೆಸಿ, ಅರ್ಹ ಫಲಾನುಭವಿಗಳಿಗೆ ಈ ಯೋಜನೆ ತಲುಪುವಂತೆ ಮಾಡಬೇಕು ಎಂದು ಮನವಿ ಮಾಡಿದರು.

ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಪ್ರೊ.ಬಿ.ಸದಾಶಿವೇಗೌಡ, ಮಾತನಾಡಿ ನಮ್ಮ ದೇಶದಲ್ಲಿ ಸಾಮಾಜಿಕ ಭದ್ರತೆಯನ್ನು ಹೆಚ್ಚಿಸುವ ಉದ್ದೇಶದಿಂದ ಜಾರಿಗೆ ತರಲಾಗುತ್ತಿರುವ ವಿವಿಧ ಯೋಜನೆಗಳು ಇಂದು ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿರುವುದು ದೇಶದ ಭವಿಷ್ಯವನ್ನೇ ಬದಲಾಯಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದರು.

2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡಬೇಕೆಂಬ ಗುರಿಯನ್ನು ತಲುಪಲು ನಾವೆಲ್ಲರೂ ಕೈಜೋಡಿಸಬೇಕಾಗಿದೆ. ಉದ್ಯೋಗದಾತರು, ಉದ್ಯೋಗಿಗಳು ಮತ್ತು ಶಿಕ್ಷಣ ಸಂಸ್ಥೆಗಳು ಇದಕ್ಕೆ ಸಹಕಾರ ನೀಡಬೇಕು ಎಂದು ತಿಳಿಸಿದರು.

ಈ ವೇಳೆ ಪ್ರಾದೇಶಿಕ ಕಚೇರಿಯ ನೌಕರರ ಭವಿಷ್ಯನಿಧಿ ಸಂಸ್ಥೆಯ ವತಿಯಿಂದ 400 ಅರ್ಹ ಫಲಾನುಭವಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ರಾಜಕೀಯ ತಜ್ಞ ಗಿರೀಶ್ ಲಿಂಗಣ್ಣ, ಕ್ಷೇತ್ರೀಯ ಆಯುಕ್ತ (ಗ್ರೇಡ್–2) ಮುರಳೀಧರ್, ಡಾ.ಟಿ.ಸಿ. ಪೂರ್ಣಿಮಾ, ಸಹಾಯಕ ಭವಿಷ್ಯ ನಿಧಿ ಆಯುಕ್ತ ಪವನ್ ಕುಮಾರ್, ಇಓ ಕೆ.ಪಿ.ಪ್ರಕಾಶ್ ಉಪಸ್ಥಿತರಿದ್ದರು.


ಇಂದು ಮೈಸೂರಲ್ಲಿ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಸೀಸನ್ 5ಕ್ಕೆ ಚಾಲನೆ

●ಉದ್ಘಾಟನಾ ಸಮಾರಂಭದಲ್ಲಿ ವಿಜಯ್ ಪ್ರಕಾಶ್ ಸಂಗೀತ ಮೋಡಿ ●ಸೀಸನ್ 5ರ ಐತಿಹಾಸಿಕ ಟ್ರೋಫಿ ಅನಾವರಣಗೊಳಿಸಲಿರುವ ರೋಜರ್ ಬಿನ್ನಿ ●ಮೊದಲ ದಿನವೇ ಡಬಲ್ ಡೆಕ್ಕರ್ ಪಂದ್ಯ ●ಮೊದಲ ಪಂದ್ಯದಲ್ಲಿ ಬೆಂಗಳೂರು ಮತ್ತು ಗುಲ್ಬರ್ಗಾ, ಎರಡನೇ ಪಂದ್ಯದಲ್ಲಿ ಶಿವಮೊಗ್ಗ ಮತ್ತು ಮೈಸೂರು ನಡುವೆ ಫೈಟ್

ಮೈಸೂರು, ಜೂ.19(ವಿವಿಹೆಚ್)– ಕೆಎಸ್‌ಸಿಎ ಆಯೋಜನೆ ಮಾಡಿರುವ ಮಹಾರಾಜ ಟ್ರೋಫಿ ಟಿ20 ಟೂರ್ನಿಯ ಐದನೇ ಚುಟುಕು ಆವೃತ್ತಿಗೆ ಶನಿವಾರ ಮೈಸೂರಿನ ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಭರ್ಜರಿ ಚಾಲನೆ ದೊರೆಯಲಿದೆ. ಆರಂಭದ ದಿನವೇ ಕ್ರಿಕೆಟ್ ಅಭಿಮಾನಿಗಳಿಗೆ ಡಬಲ್ ಹೆಡರ್ ಪಂದ್ಯಗಳ ರಸದೌತಣ ಸಿಗಲಿದೆ.

ಮೊದಲ ಪಂದ್ಯದಲ್ಲಿ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಗುಲ್ಬರ್ಗಾ ಮಿಸ್ಟಿಕ್ಸ್ ತಂಡವನ್ನು ಎದುರಿಸಲಿದೆ. ನಂತರ ಸಂಜೆ ನಡೆಯುವ ಪಂದ್ಯದಲ್ಲಿ ಶಿವಮೊಗ್ಗ ಯೋಧಾಸ್ ತಂಡವು ಹಾಲಿ ಚಾಂಪಿಯನ್ ಮೈಸೂರು ವಾರಿಯರ್ಸ್ ವಿರುದ್ಧ ಸೆಣಸಲಿದೆ.

ಎರಡು ಪಂದ್ಯಗಳ ನಡುವೆ ಸಂಜೆ 5:30ಕ್ಕೆ ಅದ್ದೂರಿ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿದೆ. ಖ್ಯಾತ ಕನ್ನಡ ಗಾಯಕ ಹಾಗೂ ಸಂಗೀತ ನಿರ್ದೇಶಕ ವಿಜಯ್ ಪ್ರಕಾಶ್ ಅವರ ವಿಶೇಷ ಸಂಗೀತ ಕಾರ್ಯಕ್ರಮ ನಡೆಯಲಿದ್ದು, ಕ್ರಿಕೆಟ್ ದಿಗ್ಗಜ, ಬಿಸಿಸಿಐ ಮಾಜಿ ಅಧ್ಯಕ್ಷ ರೋಜರ್ ಬಿನ್ನಿ 5ನೇ ಆವೃತ್ತಿಯ ಟ್ರೋಫಿ ಅನಾವರಣಗೊಳಿಸಲಿದ್ದಾರೆ.



ಈ ಸಂದರ್ಭದಲ್ಲಿ ಫ್ರಾಂಚೈಸಿಗಳು, ತಂಡಗಳ ನಾಯಕರು ಹಾಗೂ ಗಣ್ಯರನ್ನು ಸನ್ಮಾನಿಸಲಾಗುತ್ತದೆ. ಬಳಿಕ ಟೂರ್ನಿಯ ಆರಂಭಕ್ಕೂ ಮುನ್ನ ತಂಡದ ನಾಯಕರು ಕ್ರಿಕೆಟ್‌ನ ಸ್ಫೂರ್ತಿಯನ್ನು ಕಾಪಾಡುವ ಪ್ರತಿಜ್ಞೆಗೆ ಸಹಿ ಹಾಕಲಿದ್ದಾರೆ.

ಮಧ್ಯಾಹ್ನ 2 ಗಂಟೆಗೆ ನಡೆಯಲಿರುವ ಉದ್ಘಾಟನಾ ಪಂದ್ಯದಲ್ಲಿ ಶುಭಾಂಗ್ ಹೆಗ್ಡೆ ನಾಯಕತ್ವದ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಮನೀಷ್ ಪಾಂಡೆ ನೇತೃತ್ವದ ಗುಲ್ಬರ್ಗಾ ಮಿಸ್ಟಿಕ್ಸ್ ತಂಡವನ್ನು ಎದುರಿಸಲಿದೆ. ಸಂಜೆ 7:30ಕ್ಕೆ ನಡೆಯುವ ಎರಡನೇ ಪಂದ್ಯದಲ್ಲಿ ಟೂರ್ನಿಗೆ ಹೊಸದಾಗಿ ಸೇರ್ಪಡೆಯಾಗಿರುವ ಶಿವಮೊಗ್ಗ ಯೋಧಾಸ್ ತಂಡವು ಮೈಸೂರು ವಾರಿಯರ್ಸ್ ವಿರುದ್ಧ ಕಣಕ್ಕಿಳಿಯಲಿದೆ. ಸ್ಮರಣ್ ಆರ್ ನಾಯಕತ್ವದ ಯೋಧಾಸ್ ತಂಡವು ಮೊದಲ ಆವೃತ್ತಿಯಲ್ಲೇ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದೆ. ತಂಡದಲ್ಲಿ ಲುವ್ನಿತ್ ಸಿಸೋಡಿಯಾ, ಅಭಿಲಾಷ್ ಶೆಟ್ಟಿ, ಯಶ್ ರಾಜ್ ಪುಂಜಾ, ಹರ್ಷಿಲ್ ಧರ್ಮಾನಿ ಹಾಗೂ ಅನೀಶ್ ಕೆ.ವಿ. ಪ್ರಮುಖ ಆಟಗಾರರಾಗಿದ್ದಾರೆ.

ಇತ್ತ ಹಾಲಿ ಚಾಂಪಿಯನ್ ಮೈಸೂರು ವಾರಿಯರ್ಸ್ ತಂಡವನ್ನು ಕರ್ನಾಟಕದ ವೇಗಿ ವೈಶಾಕ್ ವಿಜಯಕುಮಾರ್ ಮುನ್ನಡೆಸಲಿದ್ದಾರೆ. ಚೇತನ್ ಎಲ್.ಆರ್., ಮನೋಜ್ ಭಾಂಡಗೆ, ಕಾರ್ತಿಕೇಯ ಕೆ.ಪಿ., ಮಾಧವ್ ಪ್ರಕಾಶ್ ಬಜಾಜ್, ಕಾರ್ತಿಕ್ ಎಸ್.ಯು. ಹಾಗೂ ಲವಿಶ್ ಕೌಶಲ್ ತಂಡದ ಪ್ರಮುಖ ಆಟಗಾರರಾಗಿದ್ದಾರೆ.

ಮಹಾರಾಜ ಟ್ರೋಫಿ ಟಿ20 ಸೀಸನ್ 5ರ ಎಲ್ಲಾ ಪಂದ್ಯಗಳು ಸೋನಿ ಸ್ಪೋರ್ಟ್ಸ್ TEN 5 ಹಾಗೂ ಸೋನಿ ಸ್ಪೋರ್ಟ್ಸ್ TEN 4 ಕನ್ನಡ ವಾಹಿನಿಗಳಲ್ಲಿ ನೇರ ಪ್ರಸಾರವಾಗಲಿವೆ. ಅಭಿಮಾನಿಗಳು ಫ್ಯಾನ್ ಕೋಡ್ ಮೂಲಕವೂ ಪಂದ್ಯಗಳನ್ನು ಲೈವ್ ಸ್ಟ್ರೀಮಿಂಗ್‌ನಲ್ಲಿ ವೀಕ್ಷಿಸಬಹುದಾಗಿದೆ.

ಮತದಾರರ ಸಮಗ್ರ ಪರಿಷ್ಕರಣೆಯಲ್ಲಿ ಯಾರ ಹೆಸರು ಕೈಬಿಡುವುದಿಲ್ಲ



ಸುದ್ದಿಗೋಷ್ಠಿಯಲ್ಲಿ ವಿವರ ನೀಡುತ್ತಿರುವ ಜಿಲ್ಲಾಧಿಕಾರಿ ಡಾ.ಕುಮಾರ.

ಮಂಡ್ಯ, ಜೂ.19– ಭಾರತ ಚುನಾವಣಾ ಆಯೋಗದ ಆದೇಶದಂತೆ ಜಿಲ್ಲೆಯಾದ್ಯಂತ ಜೂ.30ರಿಂದ ಆರಂಭವಾಗಲಿರುವ 'ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ'(ಎಸ್ಐಆರ್) ಬಗ್ಗೆ ಜಿಲ್ಲೆಯ ಮತದಾರರು, ಸಾರ್ವಜನಿಕರು, ರಾಜಕೀಯ ಪಕ್ಷಗಳ ಮುಖಂಡರು, ವಿವಿಧ ಸಂಘಟನೆಗಳ ಮುಖಂಡರು ಗೊಂದಲ, ಆತಂಕದ ಅಗತ್ಯವಿಲ್ಲ. ಯಾವ ಮತದಾರರ ಹೆಸರನ್ನೂ ಕೈಬಿಡುವುದಿಲ್ಲ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಸ್ಪಷ್ಟಪಡಿಸಿದರು.

ಹಿಂದೆ 1952ರಿಂದ 2003ರವರೆಗೂ ವಿಶೇಷ ಸಮಗ್ರ ಪರಿಷ್ಕರಣೆ ನಡೆದಿದೆ. ಅದರಂತೆ ಈ ವರ್ಷವೂ ಮತದಾರರ ಪರಿಷ್ಕರಣೆ ನಡೆಯಲಿದೆ. 2002ರ ಮತದಾರರ ಅಂತಿಮ ಪಟ್ಟಿಯಲ್ಲಿರುವಂತೆ ಪರಿಷ್ಕರಣೆ ನಡೆಯಲಿದೆ. ಇದರಲ್ಲಿ ಯಾರ ಹೆಸರನ್ನೂ ತೆಗೆದು ಹಾಕುವುದಿಲ್ಲ. ಹೊಸದಾಗಿ ಸೇರ್ಪಡೆ ಮಾಡಲು ಅವಕಾಶವಿದೆ ಆದ್ದರಿಂದ ಯಾರೂ ಗೊಂದಲಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ ಎಂದು ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

2500 ಮಂದಿ ಅಧಿಕಾರಿ, ಸಿಬ್ಬಂದಿಗಳ ನೇಮಕ: ಎಸ್ಐಆರ್‌ಗೆ ಜಿಲ್ಲೆಯಾದ್ಯಂತ 2500 ಮಂದಿ ಅಧಿಕಾರಿ, ಸಿಬ್ಬಂದಿಗಳ ನೇಮಕ ಮಾಡಲಾಗಿದೆ. 1823 ಮತಗಟ್ಟೆಗಳಿದ್ದು, ಎಲ್ಲ ಮತಗಟ್ಟೆಗಳಿಗೂ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಪ್ರತಿ 10ರಿಂದ 12 ಮತಗಟ್ಟೆ ಅಧಿಕಾರಿಗಳ ಮೇಲ್ವಿಚಾರಣೆಗಾಗಿ ಮತಗಟ್ಟೆ ಮೇಲ್ವಿಚಾರಕ ನೇಮಿಸಲಾಗಿದೆ. ಪ್ರತಿ ಗ್ರಾಪಂ ಆಡಳಿತಾಧಿಕಾರಿಗಳನ್ನು ಆ ಗ್ರಾಪಂ ವ್ಯಾಪ್ತಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯದ ಮೇಲುಸ್ತುವಾರಿಗಾಗಿ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ ಎಂದು ತಿಳಿಸಿದರು.

ಮ್ಯಾಪಿಂಗ್‌ನಲ್ಲಿ ಜಿಲ್ಲೆ 3ನೇ ಸ್ಥಾನ: ಜಿಲ್ಲೆಯಾದ್ಯಂತ ಒಟ್ಟು 15,75,849 ಮತದಾರರಿದ್ದು, ಈಗಾಗಲೇ 15,35,806 ಮತದಾರರ ಮ್ಯಾಪಿಂಗ್ ಮಾಡುವ ಮೂಲಕ ಜಿಲ್ಲೆ ರಾಜ್ಯದಲ್ಲಿಯೇ 3ನೇ ಸ್ಥಾನ ಪಡೆದಿದೆ. ಇದುವರೆಗೂ ಶೇ.98ರಷ್ಟು ಮ್ಯಾಪಿಂಗ್ ಕಾರ್ಯ ಪೂರ್ಣಗೊಂಡಿದೆ. ಇನ್ನು ಕೆಲವೇ ದಿನಗಳಲ್ಲಿ ಶೇ.100ರಷ್ಟು ಗುರಿ ಸಾಧಿಸಲಾಗುವುದು ಎಂದು ಹೇಳಿದರು.

ಇಂದಿನಿಂದ ಸಿದ್ಧತೆಗಳು ಆರಂಭ: ಜೂ.20ರಿಂದ 29ರವರೆಗೆ ಪೂರ್ವ ಸಿದ್ಧತೆ ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ ಹಾಗೂ ಗಣತಿ ನಮೂನೆ ಮುದ್ರಣ ನಡೆಯಲಿದೆ. ಜೂ.30ರಿಂದ ಜು.29ರವರೆಗೆ ಮನೆ ಮನೆ ಸಮೀಕ್ಷೆ ನಡೆಸಿ ಗಣತಿ ನಮೂನೆಗಳನ್ನು ಮತದಾರರಿಗೆ ಹಂಚಿಕೆ ಮಾಡಿ ಸಂಗ್ರಹಿಸಲಿದ್ದಾರೆ.

ಹೊರಗೆ ಹೋಗಿದ್ದರೆ ಅಥವಾ 3 ತಿಂಗಳಿನಿಂದ ಮನೆಯ ಬಾಗಿಲು ಹಾಕಿದ್ದರೆ ಅಂಥ ಮನೆಗಳಿಗೆ ಮೂರು ಬಾರಿ ಅವಕಾಶ ನೀಡಲಾಗುವುದು. ಕಳೆದ 6 ತಿಂಗಳಿನಿಂದ ಮನೆ ಬಾಗಿಲು ಹಾಕಿದ್ದರೆ ಅಂಥ ಮನೆಗಳನ್ನು ಮೊಬೈಲ್ ಆ್ಯಪ್‌ನಲ್ಲಿ ಡೋರ್ ಲಾಕ್ ಎಂದು ನಮೂದಿಸಿ ಮೂರು ಬಾರಿ ಭೇಟಿ ನೀಡಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಜಿಪಂ ಸಿಇಒ ಕೆ.ಆರ್.ನಂದಿನಿ ಹಾಗೂ ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಇದ್ದರು.

ಮತದಾರರ ನೋಂದಣಾಧಿಕಾರಿಗಳ ನೇಮಕ

ಮಂಡ್ಯ ಜಿಲ್ಲೆಯಾದ್ಯಂತ 7 ತಾಲೂಕುಗಳಿಗೆ ಒಬ್ಬ ಮತದಾರರ ನೋಂದಣಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿ ನೇಮಕ ಮಾಡಲಾಗಿದೆ. ಮಳವಳ್ಳಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಜಂಟಿ ನಿರ್ದೇಶಕ ಪ್ರತೀಕ್ ಜಿ.ಹೆಗ್ಗಡೆ, ತಹಶೀಲ್ದಾರ್ ಡಾ.ಲೋಕೇಶ್.ಎಸ್.ವಿ, ಮದ್ದೂರಿಗೆ ಮುಡಾ ಆಯುಕ್ತ ಎಂ.ಪಿ.ಕೃಷ್ಣಕುಮಾರ್, ತಹಶೀಲ್ದಾರ್ ವಿಶ್ವನಾಥ್, ಮೇಲುಕೋಟೆಗೆ ಉಪವಿಭಾಗಾಧಿಕಾರಿ ಕೆ.ಆರ್.ಶ್ರೀನಿವಾಸ್, ಪ್ರಭಾ, ಮಂಡ್ಯಕ್ಕೆ ಉಪವಿಭಾಗಾಧಿಕಾರಿ ಎಂ.ಶಿವಮೂರ್ತಿ, ತಹಶೀಲ್ದಾರ್ ವಿಶ್ವನಾಥ್, ಶ್ರೀರಂಗಪಟ್ಟಣಕ್ಕೆ ಮಂಡ್ಯ ವಿವಿ ಕುಲಸಚಿವ ಎಂ.ಪಿ.ಕಷ್ಣಕುಮಾರ್, ತಹಶೀಲ್ದಾರ್ ಚೇತನಾಯಾದವ್, ನಾಗಮಂಗಲಕ್ಕೆ ಜಿಪಂ ಉಪಕಾರ್ಯದರ್ಶಿ (ಆಡಳಿತ) ಡಾ.ಶಿವಲಿಂಗಯ್ಯ, ತಹಶೀಲ್ದಾರ್ ಆದರ್ಶ್, ಕೆ.ಆರ್.ಪೇಟೆಗೆ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಟಿ.ಎನ್.ನರಸಿಂಹಮೂರ್ತಿ, ತಹಸೀಲ್ದಾರ್ ಡಾ.ಎಸ್.ಯು.ಅಶೋಕ್ ಅವರನ್ನು ನೇಮಕ ಮಾಡಲಾಗಿದೆ.

ಮಂಡ್ಯ ಜಿಲ್ಲೆಯ ವಿವಿಧ ಠಾಣೆಗಳಲ್ಲಿ ಕೊಲೆ, ದರೋಡೆ ಪ್ರಕರಣ

ಐವರ ಬಂಧನ, 68 ಲಕ್ಷ ಮೌಲ್ಯದ ವಸ್ತುಗಳ ವಶ



ಸುದ್ದಿಗೋಷ್ಠಿಯಲ್ಲಿ ಎಸ್ಪಿ ಶೋಭಾರಾಣಿ ಮಾತನಾಡುತ್ತಿರುವುದು.

ಮಂಡ್ಯ: ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ವರದಿಯಾಗಿ ಪತ್ತೆಯಾಗದಿರುವ ಕೊಲೆ, ಡಕಾಯಿತಿ, ರಾಬರಿ, ಕನ್ನಕಳವು, ಸಾಧಾರಣ ಕಳವು ಹಾಗೂ ಸುಲಿಗೆ ಪ್ರಕರಣಗಳ ಪತ್ತೆಗಾಗಿ ರಚಿಸಲಾಗಿದ್ದ ಅಪರಾಧ ಪತ್ತೆ ತಂಡವು 5 ಮಂದಿ ಆರೋಪಿಗಳನ್ನು ಬಂಧಿಸಿ ಒಟ್ಟು 68 ಲಕ್ಷರೂ. ಮೌಲ್ಯದ ಚಿನ್ನಾಭರಣ, ವಾಹನ, ನಗದು ವಶಪಡಿಸಿಕೊಂಡಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ.ಶೋಭಾರಾಣಿ ತಿಳಿಸಿದರು.

ಮೈಸೂರು ತಾಲೂಕಿನ ಹಾರೋಹಳ್ಳಿ ಗ್ರಾಮದ ಪಿ.ಗಣೇಶ, ರಮ್ಮನಹಳ್ಳಿಯ ಸಾಗರ, ದರ್ಶನ್ ಹಾಗೂ ಟಿ.ನರಸೀಪುರ ತಾಲೂಕಿನ ಚಾಮನಹಳ್ಳಿ ಗ್ರಾಮದ ಮಂಜುನಾಥ.ಸಿ.ಎನ್ ಅಲಿಯಾಸ್ ಮಂಜ ಹಾಗೂ ಬೆಂಗಳೂರು ಸುಂಕದಕಟ್ಟೆಯ ಚಂದನ ಬಡಾವಣೆಯ ಕಾಂತರಾಜು ಅಲಿಯಾಸ್ ಮೋರಿ ಕಾಂತ ಎಂಬುವವರನ್ನು ಬಂಧಿಸಲಾಗಿದೆ.

ಈ ಎಲ್ಲ ಆರೋಪಿಗಳ 21 ಪ್ರಕರಣಗಳಲ್ಲಿ 553 ಗ್ರಾಂ ಚಿನ್ನಾಭರಣ, 1.3 ಕೆಜಿ ಬೆಳ್ಳಿ ಸಾಮಗ್ರಿಗಳು, ಒಂದು ಪ್ಯಾಸೆಂಜರ್ ಆಟೋ, 1 ಬೈಕ್, 20 ಸಾವಿರ ರೂ. ನಗದು ವಶಪಡಿಸಿಕೊಳ್ಳಲಾಗಿದೆ ಎಂದು ನಗರದ ಎಸ್ಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಪ್ರಕರಣಗಳ ಪತ್ತೆ ಮಾಡುವಂತೆ ಶ್ರೀರಂಗಪಟ್ಟಣ ಉಪವಿಭಾಗದ ಡಿವೈಎಸ್ಪಿ ಯು.ಡಿ.ಕೃಷ್ಣಕುಮಾರ್ ಅವರ ನೇತೃತ್ವದಲ್ಲಿ ಪಿಐ ಶರತ್‌ಕುಮಾರ್, ಪಿಎಸ್ಐ ಉಮೇಶ್, ಸಿಎಚ್‌ಸಿಗಳಾದ ಶ್ರೀಧರ, ಶಂಕರ್ ರಾಥೋಡ್, ದಿನೇಶ, ವೆಂಕಟೇಶ್, ಫಾರೂಕ್, ಕಿರಣ್, ಲೋಕೇಶ್, ಸಿಪಿಸಿಗಳಾದ ಶರತ್‌ಕುಮಾರ್, ತೋಷಿಫ್, ನಂದಗೋಪಿ, ಲಕ್ಷ್ಮೀಪುತ್ರ, ಸಂತೋಷ, ಪ್ರತಾಪ, ವರದರಾಜು, ಕಿರಣ್‌ಕುಮಾರ್ ಅವರನ್ನೊಳಗೊಂಡ ಅಪರಾಧ ಪತ್ತೆ ತಂಡ ರಚಿಸಲಾಗಿತ್ತು ಎಂದು ಹೇಳಿದರು.

ವಿವಿಧೆಡೆ ಕಳೆದುಕೊಂಡಿದ್ದ ಮೊಬೈಲ್‌ಗಳ ಪತ್ತೆ: ಜಿಲ್ಲೆಯಾದ್ಯಂತ ಕಳೆದ ನಾಲ್ಕು ತಿಂಗಳ ಅವಧಿಯಲ್ಲಿ ಕಳ್ಳತನ ಹಾಗೂ ಕಾಣೆಯಾಗಿದ್ದ 23.32 ಲಕ್ಷ ರೂ. ಮೌಲ್ಯದ ವಿವಿಧ ಮಾದರಿಯ ಮೊಬೈಲ್‌ಗಳ ಪತ್ತೆ ಮಾಡಲಾಗಿದೆ ಎಂದು ಎಸ್ಪಿ ಡಾ.ವಿ.ಜೆ.ಶೋಭಾರಾಣಿ ತಿಳಿಸಿದರು.

ಮಂಡ್ಯ ಜಿಲ್ಲಾ ಸೈಬರ್ ಅಪರಾಧ ಪೊಲೀಸ್ ಠಾಣೆಯ ಡಿಎಸ್ಪಿ ಜಿ.ಆರ್.ಶಿವಮೂರ್ತಿ, ಪಿಐ ಆರ್.ಸಿದ್ದರಾಜು ನೇತೃತ್ವದಲ್ಲಿ ಪಿಎಸ್ಐ ರಾಘವೇಂದ್ರ ಎಂ.ಕಠಾರಿ, ಸಿಬ್ಬಂದಿ ಗಿರೀಶ್, ಮೋಹನ್ ಅವರ ತಂಡ ರಚಿಸಲಾಗಿತ್ತು. ಅದರಂತೆ ಸಿಇಐಆರ್ ತಂತ್ರಾಂಶದ ಸಹಾಯದಿಂದ ಮೊಬೈಲ್‌ಗಳ ಪತ್ತೆ ಮಾಡಲಾಗಿದೆ ಎಂದು ವಿವರಿಸಿದರು.

ಬೆಂಗಳೂರಿನಿಂದ 10, ಶಿವಮೊಗ್ಗ 2, ಮೈಸೂರು 13, ಹಾಸನ 5, ಕೇರಳದ 8, ಆಂಧ್ರ ಮತ್ತು ತಮಿಳುನಾಡು ರಾಜ್ಯಗಳಿಂದ ತಲಾ 3 ಹಾಗೂ ಮಂಡ್ಯ ಜಿಲ್ಲೆಯಾದ್ಯಂತ 59 ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಎಲ್ಲ ಮೊಬೈಲ್‌ಗಳನ್ನು ಕಳೆದುಕೊಂಡ ವಾರಸುದಾರರಿಗೆ ಹಸ್ತಾಂತರ ಮಾಡಲಾಗುತ್ತಿದೆ ಎಂದರು.

ಗೋಷ್ಠಿಯಲ್ಲಿ ಎಎಸ್ಪಿ ಸಿ. ಈ.ತಿಮ್ಮಯ್ಯ, ಡಿವೈಎಸ್ಪಿ ಯು.ಡಿ. ಕೃಷ್ಣಕುಮಾರ್, ಶಿವಮೂರ್ತಿ ಸೇರಿದಂತೆ ಅಧಿಕಾರಿ, ಸಿಬ್ಬಂದಿಗಳಿದ್ದರು.

ಆರ್ಥಿಕ ನೆರವು



ಮಂಡ್ಯ ತಾಲೂಕಿನ ಭೂತನ ಹೊಸೂರು ಗ್ರಾಮದ ರೇವಣ್ಣ ಮತ್ತು ಶ್ರೀಮತಿ ಯಶೋಧ ಅವರ ಮನೆ ಆಕಸ್ಮಿಕ ಬೆಂಕಿಗೆ ತುತ್ತಾಗಿದ್ದು, ಬಿಜೆಪಿ ಮುಖಂಡರಾದ ಎಸ್.ಸಚ್ಚಿದಾನಂದ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿ, ಆರ್ಥಿಕ ನೆರವು ನೀಡಿದರು.

ಜೆಡಿಎಸ್ ಪಕ್ಷ ಸಂಘಟಿಸಿ, ನಿಮ್ಮ ಜೊತೆ ನಾನಿದ್ದೇನೆ

ಜೆಡಿಎಸ್ ಕಾರ್ಯಕರ್ತರು, ಮುಖಂಡರಿಗೆ ಸಿಎಸ್‌ಪಿ ಕರೆ



ಕಾರ್ಯಾಗಾರದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿದರು.

ಪಾಂಡವಪುರ: ಜೆಡಿಎಸ್ ಪಕ್ಷದ ಕಾರ್ಯಕರ್ತರು ಶಿಸ್ತಿನ ಸಿಪಾಯಿಗಳಂತೆ ಪಕ್ಷ ಸಂಘಟನೆ ಮಾಡಿ, ನಿಮ್ಮ ಜತೆ ಇದ್ದು ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತೇನೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಿಳಿಸಿದರು.

ತಾಲೂಕಿನ ಮೇಲುಕೋಟೆಯ ಶ್ರೀ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಪಕ್ಷದ ವತಿಯಿಂದ ನಡೆದ ಎಸ್ಐಆರ್ ವಿಶೇಷ ಸಮಗ್ರ ಪರಿಷ್ಕರಣೆ ಬಿಎಲ್‌ಎ–2ಗಳ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದರು ಸಹ ಕಳೆದ ಚುನಾವಣೆಯಲ್ಲಿ ಸೋತ ಬಳಿಕ ಮನಸ್ಸಿಗೆ ನೋವುಂಟಾಗಿತ್ತು. ರಾಜಕೀಯವೇ ಬೇಡ ಎಂಬ ಆಲೋಚನೆಯನ್ನು ಸಹ ಮಾಡಿದ್ದೆ. ಆದರೆ, ಆ ನಂತರದ ಲೋಕಸಭಾ ಚುನಾವಣೆಯಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ನನ್ನ ಕ್ಷೇತ್ರದ ಜನತೆ 51 ಸಾವಿರಕ್ಕೂ ಅಧಿಕ ಮತಗಳ ಮುನ್ನಡೆಯನ್ನು ಕೊಟ್ಟು ಆ ನೋವು ಮರೆಸಿದರು. ಮುಂದಿನ ದಿನಗಳಲ್ಲಿ ಪಕ್ಷದ ಕಾರ್ಯಕರ್ತರ ಅಭ್ಯುದಯಕ್ಕಾಗಿ ಶ್ರಮಿಸುತ್ತೇನೆ ಎಂದರು.

ಪಕ್ಷದ ಕಾರ್ಯಕರ್ತರು ಸಂಘಟಿತರಾಗಬೇಕು, ನಮ್ಮೊಳಗೆ ಕಾಲು ಎಳೆದುಕೊಳ್ಳುವ ಕೆಲಸ ಮಾಡಬೇಡಿ, ನಮ್ಮವರ ಕಾಲುಗಳನ್ನು ನಾವೇ ಎಳೆಯುವ ಕೆಲಸ ಮಾಡಿದರೆ ಎದುರಾಳಿಗಳಿಗೆ ನಾವೇ ಸಹಾಯ ಮಾಡಿದಂತಾಗುತ್ತದೆ. ಕ್ಷೇತ್ರದಲ್ಲಿ ನಮ್ಮ ಪಕ್ಷದ ಕಾರ್ಯಕರ್ತರು, ಬಡವರಿಗೆ ಎಲ್ಲೇ ಅನ್ಯಾಯವಾದರು ಎಲ್ಲರು ಅವರ ಬೆಂಬಲಕ್ಕೆ ನಿಲ್ಲಬೇಕು, ಕ್ಷೇತ್ರದಲ್ಲಿ ನಮ್ಮ ಪಕ್ಷದ ಕಾರ್ಯಕರ್ತರ ಮೇಲೆ ದಬ್ಬಾಳಿಕೆ, ದೌರ್ಜನ್ಯಗಳು ನಡೆಯುತ್ತಿವೆ ಅಂತಹ ಘಟನೆಗಳು ಎದುರಾದ ಸಂದರ್ಭದಲ್ಲಿ ಎಲ್ಲರು ಅವರ ಬೆಂಬಲಕ್ಕೆ ನಿಲ್ಲಬೇಕು ಎಂದರು.

ಪಕ್ಷವನ್ನು ನಂಬಿದ ಕಾರ್ಯಕರ್ತರನ್ನು ರಕ್ಷಿಸುವುದು, ಅವರಿಗೆ ಸ್ಪಂದಿಸುವ ಕೆಲಸ ಮಾಡಬೇಕಾಗಿದೆ, ಅದಕ್ಕಾಗಿ ಮುಂದಿನ ದಿನದಲ್ಲಿ ಕ್ಷೇತ್ರದ ಎರಡು ಗ್ರಾಪಂಗಳಿಗೆ ಭೇಟಿಕೊಟ್ಟು ಅಲ್ಲಿಯೇ ಕಾರ್ಯಕರ್ತರೊಂದಿಗೆ ಕುಳಿತು ಚರ್ಚಿಸಲಾಗುವುದು, ನಿಮ್ಮಗಳ ಯಾವುದೇ ಕಷ್ಟಕಾರ್ಪಣ್ಯಗಳು, ಸಮಸ್ಯೆಗಳು ಇದ್ದರೂ ಅಲ್ಲಿಯೇ ಕುಳಿತು ಚರ್ಚಿಸಿ ಸಮಸ್ಯೆ ಬಗೆಹರಿಸುವ ಕೆಲಸ ಮಾಡಲಾಗುವುದು ಎಂದು ಕಾರ್ಯಕರ್ತರಿಗೆ ಧೈರ್ಯ ತುಂಬಿದರು.

ಪಕ್ಷದ ಹಿರಿಯ ನಾಯಕರಾದ ದೇವೇಗೌಡರು 92ರ ಇಳಿವಯಸ್ಸಿನಲ್ಲೂ ಹೋರಾಟ ಮಾಡುತ್ತಿದ್ದಾರೆ. ಜೆಡಿಎಸ್ ಪಕ್ಷ ನಾಯಕರನ್ನು ಸೃಷ್ಟಿ ಮಾಡುವ ಕಾರ್ಖಾನೆ ಇದ್ದಂತೆ, ಪಕ್ಷ ಬಿಟ್ಟುಹೋಗುವ ನಾಯಕರು, ಮುಖಂಡರ ಬಗ್ಗೆ ತಲೆಕೆಡಿಸಿಕೊಳ್ಳುವುದು ಬೇಡ, ನಾಯಕರು, ಮುಖಂಡರನ್ನು ಹುಟ್ಟುಹಾಕುವ ಶಕ್ತಿ ನಮ್ಮ ಪಕ್ಷದ ಕಾರ್ಯಕರ್ತರಿಗಿದೆ, ಪಕ್ಷಾಂತರಿಗಳಿಗೆ ತಕ್ಕಪಾಠ ಕಲಿಸಲಿದ್ದಾರೆ ಎಂದರು.

ರಾಜ್ಯ ಜೆಡಿಎಸ್ ವಕ್ತಾರ ದೇವರಾಜು ಮಾತನಾಡಿ, ಎಸ್ಐಆರ್ ವಿರೋಧಿಸುತ್ತಿರುವ ಕಾಂಗ್ರೆಸ್ ಹಾಗೂ ಅವರ ಮಿತ್ರ ಪಕ್ಷಗಳ ಆರೋಪದಲ್ಲಿ ಹುರುಳಿಲ್ಲ. ಚುನಾವಣಾ ಆಯೋಗವು ಸಂವಿಧಾನ ಬದ್ಧವಾದ ಸಂಸ್ಥೆಯಾಗಿದೆ. ದೇಶದಲ್ಲಿ ಈವರೆಗೆ 8 ಬಾರಿ ಎಸ್ಐಆರ್ ಆಗಿದೆ ಅದರಲ್ಲಿ ಕಾಂಗ್ರೆಸ್ ಅಧಿಕಾರಾವಧಿಯಲ್ಲಿಯೇ 6 ಬಾರಿ ಎಸ್ಐಆರ್ ಆಗಿದೆ ಆಗ ಅಧಿಕಾರ ದುರ್ಬಳಕೆ ಆಗಿಲ್ಲವೆ ಎಂದು ಕಿಡಿ ಕಾರಿದರು.

ದೇಶದಲ್ಲಿ ಈಗಾಗಲೇ ದೇಶದ 12 ರಾಜ್ಯಗಳಲ್ಲಿ ಹಾಗೂ ಕೆಲವು ಕೇಂದ್ರಾಡಳಿತ ರಾಜ್ಯಗಳಲ್ಲಿ ಎಸ್ಐಆರ್ ಪೂರ್ಣಗೊಂಡಿದೆ ನಮ್ಮ ರಾಜ್ಯದಲ್ಲಿ ಜೂ.30ರಿಂದ ಜು.29ರವರೆಗೆ ಎಸ್ಐಆರ್ ನಡೆಸಲಿದೆ, ಪಕ್ಷ ಸಂಘಟನೆಗಳು ಇದೊಂದು ಉತ್ತಮವಾದ ಅವಕಾಶವಾಗಲಿದೆ ಎಂದರು.

ಜೆಡಿಎಸ್ ಅಧ್ಯಕ್ಷ ಎಸ್.ಎ. ಮಲ್ಲೇಶ್, ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಜಿಪಂ ಸದಸ್ಯರಾದ ಸಿ.ಅಶೋಕ್, ಎಚ್.ಮಂಜುನಾಥ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಹೊಸಕೋಟೆ ಪುಟ್ಟಣ್ಣ, ಮಹಿಳಾ ಅಧ್ಯಕ್ಷೆ ಅನುಪಮ ಮೊದಲಾದವರು ಇದ್ದರು.

ಮೂರನೇ ಪುಟದಿಂದ

ಗಂಭೀರವಾಗಿ ಪರಿಗಣಿಸಿದ ಬಿಜೆಪಿ ವರಿಷ್ಠರು

ಬರುವಂತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ವಿಧಾನಸಭೆಯ ಪ್ರತಿ ಪಕ್ಷ ನಾಯಕ ಆರ್.ಅಶೋಕ್ ಅವರಿಗೆ ಸೂಚಿಸಿದ್ದಾರೆ. ಚುನಾವಣೆ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ವಾಸ್ತವ್ಯ ಹೂಡಿದ್ದ ಬಿಜೆಪಿ ರಾಜ್ಯ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರ್ವಾಲ್, ತಮ್ಮ ಪಕ್ಷದ ಶಾಸಕರ ಅಡ್ಡ ಮತದಾನ ರಾಜ್ಯ ನಾಯಕತ್ವದ ವೈಫಲ್ಯ ಎಂದಿದ್ದಾರೆ. ಅಲ್ಲದೆ, ಈ ಕುರಿತಂತೆ ಹೈಕಮಾಂಡ್‌ಗೆ ವರದಿ ನೀಡಿದ್ದಾರೆ ಎಂದು ಹೇಳಲಾಗಿದೆ.

ತಮ್ಮ ಪಕ್ಷದ ಶಾಸಕರನ್ನು ವಿಶ್ವಾಸಕ್ಕೆ ತೆಗೆದು ಕೊಂಡು ಎಲ್ಲರನ್ನೂ ಹಿಡಿದಿಟ್ಟುಕೊಳ್ಳುವಲ್ಲಿ ರಾಜ್ಯ ನಾಯಕರು ವಿಫಲರಾಗಿದ್ದಾರೆ. ಪಕ್ಷದ ಅಧ್ಯಕ್ಷರು ಮತ್ತು ವಿಧಾನಸಭೆಯ ಪ್ರತಿಪಕ್ಷ ನಾಯಕರು ಪರಸ್ಪರ ಸಮನ್ವಯತೆಯಿಂದ ಕೆಲಸ ಮಾಡುತ್ತಿಲ್ಲ.

ಶಾಸಕರು ಬಣಗಳಾಗಿ ವಿಭಜನೆಯಾಗಿದ್ದಾರೆ. ಹೀಗಾಗಿ ಪಕ್ಷದ ಶಿಸ್ತು ಇಲ್ಲಿ ಕೆಲಸ ಮಾಡುತ್ತಿಲ್ಲ. ಶಾಸಕರ ಅಡ್ಡ ಮತದಾನಕ್ಕೆ ನಾಯಕತ್ವದ ವೈಫಲ್ಯವೇ ಕಾರಣ ಎಂದು ತಮ್ಮ ವರದಿಯಲ್ಲಿ ತಿಳಿಸಿರುವುದಾಗಿ ಗೊತ್ತಾಗಿದೆ. ರಾಧಾ ಮೋಹನ್ ದಾಸ್ ಅಗರ್ವಾಲ್ ಮಾಹಿತಿ ಬೆನ್ನಲ್ಲೇ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಗುರುವಾರ ರಾತ್ರಿಯೇ ವಿಜಯೇಂದ್ರ ಅವರನ್ನು ಸಂಪರ್ಕಿಸಿ ಅಡ್ಡ ಮತದಾನಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮಾಹಿತಿ ಪಡೆದರು. ನಂತರ ಸತ್ಯಾಸತ್ಯತೆ ಅರಿಯಲು ಶೋಧನಾ ಸಮಿತಿ ರಚಿಸುತ್ತೇವೆ, ವರದಿ ಸಿದ್ಧಗೊಳ್ಳುತ್ತಿದ್ದಂತೆ ದೆಹಲಿಗೆ ಬನ್ನಿ ಎಂದು ಸೂಚಿಸಿದರು. ತ್ರಿಸದಸ್ಯ ಸಮಿತಿ ಪಕ್ಷದ ಎಲ್ಲಾ ಶಾಸಕರು ಮತ್ತು ಚುನಾವಣೆಗೆ ಸ್ಪರ್ಧಿಸಿದ್ದ ಅಭ್ಯರ್ಥಿಗಳ ಜೊತೆ

ಮಾತುಕತೆ ನಡೆಸಿ ವರದಿ ಸಿದ್ಧಪಡಿಸಬೇಕು. ಈ ಸಮಯದಲ್ಲಿ ಅಡ್ಡ ಮತದಾನಕ್ಕೆ ಕಾರಣವಾದ ಅಂಶಗಳ ಬಗ್ಗೆಯೂ ಅಧ್ಯಯನ ನಡೆಸಲು ಸೂಚನೆ ನೀಡಿದ್ದು, ಈ ತಿಂಗಳ 25ರೊಳಗೆ ವರದಿ ನೀಡಲು ಸೂಚನೆ ನೀಡಲಾಗಿದೆ. ರಾಧಾಮೋಹನ್ ದಾಸ್ ಸಲಹೆ ಮೇರೆಗೆ ಅಶೋಕ್ ಗುರುವಾರ ರಾತ್ರಿಯೇ ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಸಂಪರ್ಕಿಸಿ ಮೈತ್ರಿಕೂಟದ ಶಾಸಕರಿಂದ ಅಡ್ಡ ಮತದಾನಕ್ಕೆ ಸಂಬಂಧಿಸಿದಂತೆ ಚರ್ಚೆ ಮಾಡಿದ್ದಾರೆ.

ಮೀರ್ ಸಾದಿಕ್‌ಗಳಿಗೆ ತಕ್ಕ ಪಾಠ

ನಡೆಸುವವರು ಹೆತ್ತ ತಾಯಿಗೆ ದ್ರೋಹ ಬಗೆದಂತೆ, ಯಾವುದೇ ಕಾರಣಕ್ಕೂ ಇಂಥವರನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ ಎಂದರು. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಅವರಿಗೆ ರಾಜ್ಯದಲ್ಲಿನ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಮಾಹಿತಿ ನೀಡಿದ್ದೇನೆ. ಅವರು ಭೇಟಿಗೆ ಸಮಯಾವಕಾಶ ನೀಡಿದ ತಕ್ಷಣ ದೆಹಲಿಗೆ ತೆರಳುತ್ತೇನೆ.

ಬೆನ್ನಿಗೆ ಚೂರಿ: ಪಕ್ಷದಲ್ಲಿಯೇ ಇದ್ದು ಬೆನ್ನಿಗೆ ಚೂರಿ ಹಾಕಿರುವವರನ್ನು ಯಾವ ಭಾಷೆಯಲ್ಲಿ, ಏನೆಂದು ಕರೆಯಬೇಕೆಂಬುದೇ ಗೊತ್ತಾಗುತ್ತಿಲ್ಲ. ಇಂಥವರ ವಿರುದ್ಧ ಕ್ರಮ ಖಚಿತ. ಯಾರ್ಯಾರು ಅಡ್ಡ ಮತದಾನ ನಡೆಸಿದ್ದಾರೆ ಎಂಬ ಕುರಿತು ಈಗಾಗಲೇ ನಮ್ಮದೇ ಮೂಲಗಳಿಂದ ಮಾಹಿತಿ ಪಡೆದಿದ್ದೇವೆ. ಇದೆಲ್ಲವನ್ನೂ ವರಿಷ್ಠರ ಗಮನಕ್ಕೆ ತರಲಾಗಿದೆ, ದೆಹಲಿಗೆ ಭೇಟಿ ನೀಡಿ ಪೂರ್ಣ ವಿವರಗಳನ್ನು ನೀಡುತ್ತೇನೆ.

ಅಡ್ಡ ಮತದಾನ ನಡೆದಿರುವುದು ನಿಜಕ್ಕೂ ನಮಗೆ ಬೇಸರ ತಂದಿದೆ, ಇಂತಹ ಘಟನೆ ನಡೆಯುತ್ತದೆ ಎಂಬುದಾಗಿ ಕನಸು ಮನಸ್ಸಿನಲ್ಲೂ ಊಹೆ ಮಾಡಿರಲಿಲ್ಲ, ದುರದೃಷ್ಟವಶಾತ್ ಆಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಿ ಅಂತಹ ಶಾಸಕರಿಗೆ ಸರಿಯಾದ ಪಾಠ ಕಲಿಸುತ್ತೇವೆ. ಅಡ್ಡ ಮತದಾನದಿಂದ ಜೆಡಿಎಸ್ ನಾಯಕ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೂ ಬೇಸರ ತಂದಿದೆ.

ಖಂಡಿತ ಕ್ರಮ: ಬಿಜೆಪಿಯಂತೆ ಜೆಡಿಎಸ್‌ನಲ್ಲೂ ಅಡ್ಡ ಮತದಾನ ಆಗಿದೆ. ಈ ಘಟನೆ ಉಭಯ ಪಕ್ಷಗಳಿಗೆ ಮುಜುಗರ ಉಂಟು ಮಾಡಿರುವುದು ನಿಜ, ನಮಗೆ ಪೂರ್ಣ ಚಿತ್ರ ಸಿಕ್ಕ ನಂತರ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕೋ ಖಂಡಿತವಾಗಿಯೂ ತೆಗೆದುಕೊಳ್ಳುತ್ತೇವೆ.

ನಮಗೆ ಅಪಮಾನವಾಗಿದೆ, ಜೆಡಿಎಸ್ ನಾಯಕರಿಗೂ ನೋವಾಗುವುದು ಸಹಜ, ನಮಗೆ ನಮ್ಮದೇ ಶಾಸಕರು ಮಾಡಿದ ಮೋಸ ತಾಯಿಗೆ ಮಾಡಿದ ಮೋಸ, ಜೆಡಿಎಸ್‌ಗೆ ಮಾಡಿದ ಮೋಸವೂ ಅದೇ ಆಗಿದೆ.

ಈ ಘಟನೆಯಿಂದ ಕಾರ್ಯಕರ್ತರಿಗೂ, ಪಕ್ಷದ ರಾಜ್ಯಾಧ್ಯಕ್ಷನಾಗಿ ನನಗೂ ತುಂಬಾ ನೋವಾಗಿದೆ, ನಾನು ಕೇವಲ ಪಕ್ಷದ ರಾಜ್ಯಾಧ್ಯಕ್ಷನಲ್ಲ, ಅದಕ್ಕೂ ಮೊದಲು ಒಬ್ಬ ಸಾಮಾನ್ಯ ಕಾರ್ಯಕರ್ತ.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕೆಲವು ದಿನಗಳ ಹಿಂದೆ ಮೂರನೇ ಅಭ್ಯರ್ಥಿ ನಿಲ್ಲಿಸುವ ಕುರಿತು ದೂರವಾಣಿಯಲ್ಲಿ ಚರ್ಚೆ ಮಾಡಿದ್ದರು. ಆಗ ಜೆಡಿಎಸ್ ಅಭ್ಯರ್ಥಿಗೆ ಬೆಂಬಲ ನೀಡಿದ್ದೆವು. ಫಲಿತಾಂಶ ಈ ರೀತಿ ಬರುತ್ತದೆ ಎಂಬುದಾಗಿ ಊಹಿಸಿರಲಿಲ್ಲ.

ನಮ್ಮ ಹಣೆಯಲ್ಲಿ ಬರೆದಿದ್ದನ್ನು ತಪ್ಪಿಸಲು ಯಾರಿಂದಲೂ ಆಗುವುದಿಲ್ಲ. ಅಡ್ಡ ಮತದಾನ ಮಾಡಿದವರ ಹಣೆಯಲ್ಲಿ ಬರೆದಿರುವುದನ್ನೂ ತಪ್ಪಿಸಲಾಗದು. ಆಟ ಇಷ್ಟಕ್ಕೆ ಮುಗಿದಿಲ್ಲ. ನಾನು ಯಡಿಯೂರಪ್ಪ ಅವರ ಮಗ, ಎಲ್ಲಿಗೂ ಓಡಿಹೋಗುವುದಿಲ್ಲ. ಎಂತೆಂಥ ಚಾಣಾಕ್ಷರನ್ನೇ ಜನ ಮನೆಗೆ ಕಳುಹಿಸಿದ್ದಾರೆ. ಕಾಲ ಬಂದಾಗ ಎಲ್ಲಾ ಚಾಣಕ್ಯರನ್ನು ಜನ ನೋಡಿಕೊಳ್ಳುತ್ತಾರೆ ಎಂದರು.

ಸರ್ವಾನುಮತದ ನಿರ್ಣಯ ಅಂಗೀಕಾರ

ನಿರ್ಲಕ್ಷಿಸಿದೆ. ಅಲ್ಲದೇ ಜಲಾನಯನ ರಾಜ್ಯಗಳ ಒಪ್ಪಿಗೆ ಅಥವಾ ಕೇಂದ್ರ ಸರ್ಕಾರದ ಅನುಮೋದನೆಯಿಲ್ಲದೇ ಇದನ್ನ ಅನುಸರಿಸಲಾಗಿದೆ. ಇಂತಹ ಕ್ರಮವು ಸ್ವೀಕಾರಾರ್ಹವಲ್ಲ ಎಂದು ವಿಜಯ್ ಮಂಡಿಸಿದ ನಿರ್ಣಯದಲ್ಲಿ ತಿಳಿಸಿದರು.

ಕಾವೇರಿ ಜಲಾನಯನ ಪ್ರದೇಶವು ನೀರಿನ ಕೊರತೆ ಇರುವ ಪ್ರದೇಶವಾಗಿದೆ. ಲಭ್ಯವಿರುವ ನೀರನ್ನ ಈಗಾಗಲೇ ರಾಜ್ಯಗಳ ನಡುವೆ ಹಂಚಿಕೆ ಮಾಡಲಾಗಿದೆ ಎಂದು ನ್ಯಾಯಮಂಡಳಿ ಮತ್ತು ಸುಪ್ರೀಂ ಕೋರ್ಟ್ ಎರಡೂ ಗಮನಿಸಿವೆ. ಜಲಾನಯನ ಪ್ರದೇಶದಲ್ಲಿ ಯಾವುದೇ ಹೊಸ ಯೋಜನೆ ಕೈಗೊಳ್ಳಬಾರದು ಹಾಗೂ ಜೊತೆಗೆ ಹೆಚ್ಚುವರಿ ಪ್ರಮಾಣದ ನೀರನ್ನ ಬಳಸಿಕೊಳ್ಳಲು ಅವಕಾಶ ನೀಡಬಾರದು ಎಂದು ನಿರ್ಣಯವು ಒತ್ತಿಹೇಳಿದೆ.

ಕಾವೇರಿ ನೀರಿನ ಸಮಸ್ಯೆ ತಮಿಳುನಾಡು ಮತ್ತು ಕರ್ನಾಟಕದ ನಡುವಿನ ಅತ್ಯಂತ ಸೂಕ್ಷ್ಮ ವಿಷಯವಾಗಿದೆ ಆದ್ದರಿಂದ ಕಾವೇರಿ ಜಲಾನಯನ ಪ್ರದೇಶದ ಯಾವುದೇ ಸ್ಥಳದಲ್ಲಿ ಇತರ ಜಲಾನಯನ ರಾಜ್ಯಗಳ ಒಪ್ಪಿಗೆಯಿಲ್ಲದೇ ಹಾಗೂ ಕೇಂದ್ರ ಸರ್ಕಾರದ ಅನುಮೋದನೆಯಿಲ್ಲದೇ ಅಣೆಕಟ್ಟು ಅಥವಾ ಹೊಸ ನೀರು ಸಂಗ್ರಹಣಾ ಯೋಜನೆ ಕೈಗೊಳ್ಳಬಾರದು. ಈ ರೀತಿ ಕರ್ನಾಟಕ ಸರ್ಕಾರ ಸಲಹೆ ನೀಡುವಂತೆ ಸದನವು ಒತ್ತಾಯಿಸುತ್ತದೆ ಎಂದು ನಿರ್ಣಯದಲ್ಲಿ ತಿಳಿಸಿದೆ.

ತಮಿಳುನಾಡು ಸರ್ಕಾರವು ಕೇಂದ್ರ ಜಲ ಆಯೋಗ ಮಧ್ಯಪ್ರವೇಶಿಸುವಂತೆ ಮನವಿ ಮಾಡಿದ್ದು, ರಾಜ್ಯದ ರೈತರ ಹಿತಾಸಕ್ತಿಯನ್ನ ರಕ್ಷಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ ಸಲ್ಲಿಸಿರುವ ವಿವರವಾದ ಯೋಜನಾ ವರದಿಯನ್ನು ಪರಿಶೀಲಿಸಬಾರದು, ಪ್ರಕ್ರಿಯೆಗೊಳಿಸಬಾರದು ಹಾಗೂ ಅನುಮೋದಿಸಬಾರದು ಎಂದು ಆಗ್ರಹಿಸಿದೆ.

ಮುಖ್ಯಮಂತ್ರಿ ಸಿ ಜೋಸೆಫ್ ವಿಜಯ್ ಮಂಡಿಸಿದ ನಿರ್ಣಯವನ್ನು ತಮಿಳುನಾಡು ವಿಧಾನಸಭೆಯ ಎಲ್ಲಾ ಪಕ್ಷಗಳ ಸದಸ್ಯರು ಸರ್ವಾನುಮತದಿಂದ ಅಂಗೀಕರಿಸಿದರು.

ರಾಜ್ಯದ ಹಿತಾಸಕ್ತಿ ಕಾಪಾಡುತ್ತೇವೆ



ಬೆಂಗಳೂರು: ಮೇಕೆದಾಟು ಯೋಜನೆಯ ವಿರುದ್ಧ ತಮಿಳುನಾಡು ವಿಧಾನಸಭೆಯ ನಿರ್ಣಯದ ನಂತರ, ರಾಜ್ಯ ಸರ್ಕಾರವು ತನ್ನ ಹಿತಾಸಕ್ತಿಗಳನ್ನು ರಕ್ಷಿಸುತ್ತದೆ ಎಂದು ಕರ್ನಾಟಕದ ಸಚಿವ ಪ್ರಿಯಾಂಕ್ ಖರ್ಗೆ ಶುಕ್ರವಾರ ಹೇಳಿದ್ದಾರೆ.

ನಮ್ಮ ರಾಜ್ಯದ ಹಿತಾಸಕ್ತಿಗಳನ್ನು ರಕ್ಷಿಸುವುದು ನನ್ನ ಜವಾಬ್ದಾರಿ. ಅವರು ತಮ್ಮ ರಾಜ್ಯದ ಹಿತಾಸಕ್ತಿಗಾಗಿ ನಿರ್ಣಯವನ್ನು ಅಂಗೀಕರಿಸುತ್ತಾರೆ. ನ್ಯಾಯಾಲಯದ ಆದೇಶ ಸ್ಪಷ್ಟವಾಗಿದೆ. ನಾವು ಸಮುದ್ರಕ್ಕೆ ಹೋಗುತ್ತಿರುವ ಹೆಚ್ಚುವರಿ ನೀರನ್ನು ಮಾತ್ರ ಸಂಗ್ರಹಿಸಿ ನಮ್ಮ ರಾಜ್ಯದ ಜನರಿಗೆ, ಬೆಂಗಳೂರಿಗೆ ಮತ್ತು ಸ್ಥಳೀಯ ಜಿಲ್ಲೆಗಳಿಗೆ ಬಳಸುತ್ತಿದ್ದೇವೆ ಎಂದು ಖರ್ಗೆ ಹೇಳಿದರು.

ಇಂದು ಮುಂಜಾನೆ, ತಮಿಳುನಾಡು ವಿಧಾನಸಭೆಯು ಮೇಕೆದಾಟು ಅಣೆಕಟ್ಟು ವಿರೋಧಿಸಿ ಮುಖ್ಯಮಂತ್ರಿ ವಿಜಯ್ ಮಂಡಿಸಿದ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿತು. ಅಂತಹ ಯಾವುದೇ ಯೋಜನೆಯು ಅಸ್ತಿತ್ವದಲ್ಲಿರುವ ಕಾನೂನು ಚೌಕಟ್ಟುಗಳು ಮತ್ತು ತಮಿಳುನಾಡಿನ ಜನರ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂದು ನಿರ್ಣಯವು ಒತ್ತಿಹೇಳುತ್ತದೆ ತಮಿಳುನಾಡು ಮುಖ್ಯಮಂತ್ರಿಗಳು ಮಂಡಿಸಿದ ನಿರ್ಣಯವು, 5.2.2007 ರ ಕಾವೇರಿ ಜಲ ವಿವಾದ ನ್ಯಾಯಮಂಡಳಿಯ ಅಂತಿಮ ತೀರ್ಪು ಮತ್ತು 16.2.2018ರ ಗೌರವಾನ್ವಿತ ಸುಪ್ರೀಂ ಕೋರ್ಟ್‌ನ ತೀರ್ಪನ್ನು ಗೌರವಿಸದೆ, ಸಂಬಂಧಪಟ್ಟ ಜಲಾನಯನ ರಾಜ್ಯಗಳ ಒಪ್ಪಿಗೆಯನ್ನು ಪಡೆಯದೆ ಮತ್ತು ಕೇಂದ್ರ ಸರ್ಕಾರದಿಂದ ಯಾವುದೇ ಅನುಮೋದನೆಯನ್ನು ಪಡೆಯದೆ, ಮೇಕೆದಾಟುವಿನಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಲು ಕರ್ನಾಟಕ ಸರ್ಕಾರವು ಏಕಪಕ್ಷೀಯವಾಗಿ ಮಾಡಿದ ಪ್ರಯತ್ನಕ್ಕೆ ಈ ಸದನವು ತನ್ನ ಬಲವಾದ ಆಕ್ಷೇಪಣೆಯನ್ನು ದಾಖಲಿಸುತ್ತದೆ ಎಂಬ ನಿರ್ಣಯ ಕೈಗೊಂಡಿದೆ.

ಕರ್ನಾಟಕ ಸರ್ಕಾರವು ಪ್ರಸ್ತಾಪಿಸಿದ ಮೇಕೆದಾಟು ಅಣೆಕಟ್ಟು ಯೋಜನೆಗೆ ತಾಂತ್ರಿಕ ಮತ್ತು ಪರಿಸರ ಅನುಮತಿಗಳನ್ನು ಒಳಗೊಂಡಂತೆ ಯಾವುದೇ ರೀತಿಯ ಅನುಮೋದನೆಯನ್ನು ನೀಡದಂತೆ ಈ ಆಗಸ್ಟ್ ಸದನವು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತದೆ" ಎಂದು ನಿರ್ಣಯವು ಹೇಳುತ್ತದೆ.

ಗ್ಯಾರಂಟಿಗಳಿಗೆ ಮರು ಅರ್ಜಿ ಸಲ್ಲಿಸಬೇಕಿಲ್ಲ

ತೊಂದರೆ ಆಗಬಾರದು. ಅನರ್ಹ ಫಲಾನುಭವಿಗಳ ದುರುಪಯೋಗಕ್ಕೆ ಮಾತ್ರ ಬ್ರೇಕ್ ಹಾಕಬೇಕು ಎಂದು ಅಧಿಕಾರಿಗಳಿಗೆ ಸಿಎಂ ಡಿ.ಕೆ.ಶಿವಕುಮಾರ್ ಸೂಚಿಸಿದರು. ಹಲವು ಫಲಾನುಭವಿಗಳು ಬ್ಯಾಂಕ್ ಸಾಲ ಪಡೆದಿರುತ್ತಾರೆ. ಸಾಲದ ಖಾತೆಗೆ ಗೃಹಲಕ್ಷ್ಮಿ ಹಣ ಹೋದಷ್ಟೂ ಆ ಹಣ ಸಾಲದ ಮೊತ್ತಕ್ಕೆ ಜಮೆ ಆಗಿ ಬಿಡುತ್ತದೆ. ಆದ್ದರಿಂದ ಅಂತಹ ಫಲಾನುಭವಿಗಳು ಖಾತೆ ಬದಲಾಯಿಸಿರುತ್ತಾರೆ. ಇಂಥಾ ಫಲಾನುಭವಿಗಳಿಗೆ ತೊಂದರೆ ಆಗಬಾರದು ಎಂದು ತಿಳಿಸಿದರು.

ಗೃಹಜ್ಯೋತಿ ಗ್ಯಾರಂಟಿ ಯೋಜನೆ ಜಾರಿ ಆಗುವಾಗ ಹೆಚ್ಚಿನ ದುರುಪಯೋಗ ಆಗದ ಹಾಗೆ ಎಚ್ಚರಿಕೆ ವಹಿಸಿದ್ದರು. ಇದೇ ಎಚ್ಚರಿಕೆ ಇತರೆ ಯೋಜನೆಗಳಲ್ಲೂ ಅನುಸರಿಸಿದ್ದರೆ ದುರುಪಯೋಗದ ಪ್ರಮಾಣ ಕಡಿಮೆ ಆಗುತ್ತಿತ್ತು. ಮೃತಪಟ್ಟಿರುವ ಫಲಾನುಭವಿಗಳಿಗೂ ಗೃಹಲಕ್ಷ್ಮಿ ಹಣ ಹೋಗುತ್ತಿರುವುದು ಪತ್ತೆಯಾಗಿದೆ. ಈ ರೀತಿ ದುರುಪಯೋಗ ಆಗಬಾರದು. ಗೃಹಲಕ್ಷ್ಮಿ ಹಣ ಫಲಾನುಭವಿಗಳ ಖಾತೆಗೆ ಜಮೆಯಾದ ತಕ್ಷಣ ಅವರ ಮೊಬೈಲಿಗೆ ವಾಯ್ಸ್ ಮೆಸೇಜ್ ಮೂಲಕ ಖಚಿತ ಪಡಿಸಬೇಕು ಎಂದು ಹೇಳಿದರು.

ಟಿಕೆಟ್ ದರ ಏರಿಕೆಗೆ ಶಿಫಾರಸು: ಶಕ್ತಿ ಯೋಜನೆಯಿಂದಾಗಿ ಸಾರಿಗೆ ಇಲಾಖೆಗೆ ಸದ್ಯ 5,173 ಕೋಟಿ ರೂ.ಗಳ ಬೃಹತ್ ಮೊತ್ತದ ಕೊರತೆ ಎದುರಾಗಿದೆ. ಈ ಕೊರತೆಯ ಹಣವನ್ನು ತಕ್ಷಣವೇ ಬಿಡುಗಡೆ ಮಾಡುವಂತೆ ಸಾರಿಗೆ ನಿಗಮ ಸರ್ಕಾರವನ್ನು ಒತ್ತಾಯಿಸಿದೆ. ಜೊತೆಗೆ ಸಿಬ್ಬಂದಿ ವೇತನ ಬಾಕಿ ಪಾವತಿಗೆ 1,271 ಕೋಟಿ ರೂ. ಅಗತ್ಯವಿದೆ. ಇದರಲ್ಲಿ 450 ರೂ. ಬಿಡುಗಡೆ ಆಗಿದೆ. ಡೀಸೆಲ್ ದರ ಮತ್ತು ಸಿಬ್ಬಂದಿಯ ವೆಚ್ಚ ಹೆಚ್ಚಳವಾಗಿದೆ. 2025ರ ಜನವರಿ 5ರಂದು ಪ್ರಯಾಣ ದರ ಹೆಚ್ಚಳ ಮಾಡಲಾಗಿದೆ. ಹೀಗಾಗಿ ಪ್ರಯಾಣದ ದರ ಹೆಚ್ಚಳಕ್ಕೆ ಅನುಮತಿಕೊಡಿ ಎಂದಿದೆ.

ಮೇ ಅಂತ್ಯದವರೆಗೆ 763 ಕೋಟಿ ಮಹಿಳೆಯರು ಯೋಜನೆಯ ಫಲಾನುಭವಿಗಳಾಗಿದ್ದು, ಅವರಿಗೆ ವಿನಿಯೋಗಿಸಲಾದ ಟಿಕೆಟ್ ಮೌಲ್ಯ 20047.69 ಕೋಟಿ ರೂ. 2026–27ನೇ ಸಾಲಿಗೆ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಎಲ್ಲರನ್ನೂ ಸೇರಿಸಿ 10 ಲಕ್ಷ ಉಚಿತ ಬಸ್ ಪಾಸ್‌ಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲು ಅಂದಾಜಿಸಲಾಗಿದೆ.

ಗೃಹಜ್ಯೋತಿ ಯೋಜನೆ: ಮೇ ಅಂತ್ಯದವರೆಗೆ 1.65 ಕೋಟಿ ಫಲಾನುಭವಿಗಳು ಯೋಜನೆಯ ಲಾಭ ಪಡೆದಿದ್ದಾರೆ. ಹೊರ ರಾಜ್ಯದಿಂದ ಇಲ್ಲಿಗೆ ಬಂದು ನೆಲೆಸಿ ಗೃಹಜ್ಯೋತಿ ಲಾಭ ಪಡೆಯುತ್ತಿರುವವರ ಮಾಹಿತಿ ಸಂಗ್ರಹಿಸಲು ಸೂಚನೆ ನೀಡಲಾಗಿದೆ. ಮತಪಟ್ಟಿಯಲ್ಲಿ ಹೆಸರಿರುವ ಮತದಾರರು ಮಾತ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳಾಗಿರುತ್ತಾರೆ. ಆದ್ದರಿಂದ ವಿಶೇಷ ಸಮಗ್ರ ಪರಿಷ್ಕರಣೆ ಸಂದರ್ಭದಲ್ಲಿ ಫಲಾನುಭವಿಗಳು ತಮ್ಮ ಹೆಸರು ಬಿಟ್ಟು ಹೋಗದಂತೆ ನೋಡಿಕೊಳ್ಳಬೇಕು.

ಅನ್ನಭಾಗ್ಯ ಯೋಜನೆ: 11,561 ಕೋಟಿ ರೂ.ಗಳನ್ನು ಡಿಬಿಟಿ ಮೂಲಕ ಫಲಾನುಭವಿಗಳ ಖಾತೆಗೆ ವರ್ಗಾಯಿಸಲಾಗಿದೆ. 2023ರ ಜುಲೈಯಿಂದ 2024ರ ಡಿಸೆಂಬರ್‌ವರೆಗೆ ಒಟ್ಟು 72,02,33,970 ಫಲಾನುಭವಿಗಳಿಗೆ ಒಟ್ಟು 11561.05 ಕೋಟಿ ರೂ.ಯನ್ನು ಡಿಬಿಟಿ ಮೂಲಕ ವರ್ಗಾಯಿಸಲಾಗಿದೆ. ತದನಂತರ 2025ರ ಫೆಬ್ರವರಿ ತಿಂಗಳಿನಿಂದ ಇಲ್ಲಿಯವರೆಗೆ ಪ್ರಸ್ತುತ ರಾಜ್ಯದಲ್ಲಿರುವ ಒಟ್ಟು 4,44,67,942 ಫಲಾನುಭವಿಗಳಿಗೆ ಪ್ರತಿ ತಿಂಗಳು ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿಯಾಗಿ 5 ಕೆ.ಜಿ. ಅಕ್ಕಿಯನ್ನು ವಿತರಿಸಲಾಗುತ್ತಿದೆ. ಕಾಳಸಂತೆಯಲ್ಲಿ ಅನ್ನಭಾಗ್ಯ ಅಕ್ಕಿ ಅಕ್ರಮ ಮಾರಾಟವಾಗುತ್ತಿರುವುದನ್ನು ನಿಗ್ರಹಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಚರ್ಚಿಸಲಾಗಿದೆ.

ಪ್ರಜ್ವಲ್ ರೇವಣ್ಣ ಜಾಮೀನು ಅರ್ಜಿ: ಎಸ್‌ಐಟಿಗೆ ಹೈಕೋರ್ಟ್ ನೋಟಿಸ್



ಬೆಂಗಳೂರು, ಜೂ.19– ಮಹಿಳೆಯನ್ನು ವಿವಸ್ತ್ರಗೊಳಿಸಿ ಆ ಸಂದರ್ಭವನ್ನು ಚಿತ್ರೀಕರಿಸಿದ ಆರೋಪದಡಿ ದಾಖಲಾಗಿರುವ ಪ್ರಕರಣದಲ್ಲಿ ಜಾಮೀನು ಕೋರಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ವಿಶೇಷ ತನಿಖಾ ದಳಕ್ಕೆ (ಎಸ್‌ಐಟಿ) ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿ, ಪ್ರತಿವಾದಿ ಎಸ್‌ಐಟಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಪ್ರಜ್ವಲ್ ವಿರುದ್ಧ: ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 354ಎ (ಲೈಂಗಿಕ ಕಿರುಕುಳ), 354ಬಿ (ವಿವಸ್ತ್ರಗೊಳಿಸಲು ಬೆದರಿಕೆ), 354ಡಿ (ಹಿಂಬಾಲಿಸುವುದು) ಮತ್ತು 506 (ಕ್ರಿಮಿನಲ್ ಬೆದರಿಕೆ) ಜೊತೆಗೆ; ಮಾಹಿತಿ ತಂತ್ರಜ್ಞಾನ ಕಾಯ್ದೆ–2000 ಕಲಂ 66 ಇ ಮತ್ತು 67ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಪ್ರಜ್ವಲ್ ವಿರುದ್ಧ, ಮೂರು ಅತ್ಯಾಚಾರ ಮತ್ತು ಮಹಿಳೆಯನ್ನು ವಿವಸ್ತ್ರಗೊಳಿಸಿದ ಪ್ರಕರಣವೂ ಸೇರಿದಂತೆ ಒಟ್ಟು ನಾಲ್ಕು ಪ್ರಕರಣ ದಾಖಲಾಗಿವೆ. ಈಗಾಗಲೇ ಒಂದರಲ್ಲಿ ಸೆಷನ್ಸ್ ನ್ಯಾಯಾಲಯ ಶಿಕ್ಷೆ ವಿಧಿಸಿದೆ.

ದಕ್ಷಿಣ ಕೊರಿಯಾ ಮಣಿಸಿ ನಾಕೌಟ್‌ಗೆ ಮೆಕ್ಸಿಕೋ ಲಗ್ಗೆ



ರಝಪೋಪಾನ್, ಜೂ.19– ಫಿಫಾ ವಿಶ್ವಕಪ್ ಪಂದ್ಯಾವಳಿಯ ಶುಕ್ರವಾರ ನಡೆದ ಪಂದ್ಯದಲ್ಲಿ ದಕ್ಷಿಣ ಕೊರಿಯಾ ವಿರುದ್ಧ ಮೆಕ್ಸಿಕೋ 1–0 ಗೋಲುಗಳ ಅಂತರದಲ್ಲಿ ಜಯಗಳಿಸುವ ಮೂಲಕ ಗ್ರೂಪ್ 'ಎ' ನಲ್ಲಿ ಅಗ್ರಸ್ಥಾನ ಅಲಂಕರಿಸಿ, ಮೊದಲ ತಂಡವಾಗಿ ನಾಕೌಟ್ ತಲುಪಿದೆ.

ಜೂ.30ರಂದು ಮೆಕ್ಸಿಕೋನಲ್ಲಿ ನಡೆಯುವ 32ನೇ ಸುತ್ತಿನ ಪಂದ್ಯದಲ್ಲಿ ಮೆಕ್ಸಿಕೋ ತಂಡ ಗ್ರೂಪ್ ಸಿ, ಇ, ಎಫ್, ಹೆಚ್ ಅಥವಾ ಐ ನಿಂದ 3ನೇ ಸ್ಥಾನದಲ್ಲಿರುವ ತಂಡವನ್ನು ಎದುರಿಸಲಿದೆ.

ಪಂದ್ಯದ ಆರಂಭದಲ್ಲಿ ಪಂದ್ಯದ ಮೇಲೆ ಮೆಕ್ಸಿಕೋ ಹಿಡಿತಯ ಸಾಧಿಸಿತ್ತು. ಸಮಯ ಕಳೆದಂತೆ ದಕ್ಷಿಣ ಕೊರಿಯಾ ಪುನರಾಗಮನ ಮಾಡಿತು. ಎರಡೂ ತಂಡಗಳು ಮೊದಲಾರ್ಧದಲ್ಲಿ ಶಕ್ತಿ ಮತ್ತು ಆಕ್ರಮಣಶೀಲತೆ ಪ್ರದರ್ಶಿಸಿದರೂ ಗೋಲುಗಳಿಸಲು ಸಾಧ್ಯವಾಗಲಿಲ್ಲ. ಇನ್ನೂ ದ್ವಿತೀಯಾರ್ಧದಲ್ಲಿ ಆಕ್ರಮಣ ಆಟ ಮುಂದುವರೆಸಿದ ಮೆಕ್ಸಿಕೊ ಪರ ಲೂಯಿಸ್ ರೋಮೋ 50ನೇ ನಿಮಿಷದಲ್ಲಿ ಗೋಲುಗಳಿಸುವ ಮೂಲಕ ತಂಡಕ್ಕೆ ಮುನ್ನಡೆ ತಂದು ಕೊಟ್ಟರು. ಪಂದ್ಯದ ಕೊನೆ ನಿಮಿಷಗಳಲ್ಲಿ ದಕ್ಷಿಣ ಕೊರಿಯಾ ಸಮಬಲ ಸಾಧಿಸುವ ಹತ್ತಿರಕ್ಕೆ ಬಂದಿತ್ತು. ಆದರೆ ಮೆಕ್ಸಿಕೋದ ಗೋಲ್ ಕೀಪರ್ ರಾಂಗೆಲ್ ತಂಡದ ಮುನ್ನಡೆ ಕಾಯ್ದುಕೊಳ್ಳಲು ಅದ್ಭುತವಾದ ಸೇವ್‌ಗಳನ್ನು ಮಾಡಿದರು. ರಾಂಗೆಲ್ ಅವರ ಅದ್ಭುತ ಪ್ರದರ್ಶನ ಮೆಕ್ಸಿಕೋ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತು.

ರೈತರಿಗೆ ಚೆಕ್ ವಿತರಿಸಿದ ಸರ್ಕಾರ

ಪರಿಹಾರದ ಹಣ ನಿಗದಿಪಡಿಸಲಾಗಿದೆ ಎಂದು ತಿಳಿಸಿದ್ದರು. 1 ತೆಂಗಿನಮರಕ್ಕೆ 40,446 ರೂ. ಮಾವಿನ ಗಿಡ 62,000 ರೂ., ಅಡಿಕೆ ಮರಕ್ಕೆ 7,440 ರೂ., ಬಾಳೆ ಎಕರೆಗೆ 10.86 ಲಕ್ಷ ರೂ., ರೇಷ್ಮೆಗೆ 14 ಲಕ್ಷ ಪ್ರತಿ ಎಕರೆಗೆ, ಹಲಸು ಎಕರೆಗೆ 42,750ರೂ., ಹುಣಸೆ ಎಕರೆಗೆ 53,310ರೂ., ಸೀಬೆ ಎಕರೆಗೆ 3,940 ರೂ., ಸಪೋಟ ಎಕರೆಗೆ 43,166 ರೂ. ಹಣ ನಿಗದಿ ಮಾಡಲಾಗಿದೆ ಎಂದು ಹೇಳಿದ್ದರು. ಯೋಜನೆ ವ್ಯಾಪ್ತಿಯಲ್ಲಿ ಕೇವಲ ಒಂದು ಗುಂಟೆ ಜಮೀನು ಇರುವ ಮಾಲೀಕರಿಗೆ ವಿಶೇಷ ಪರಿಹಾರ ನೀಡಲಾಗುವುದು. 1 ಗುಂಟೆ ಜಮೀನು ಕಳೆದುಕೊಳ್ಳುವ ರೈತರಿಗೆ 5 ಲಕ್ಷ ಇಡಿಗಂಟು ನೀಡಲು ಜಿಬಿಡಿಎ ಮುಂದಾಗಿದೆ. ಈಗಾಗಲೇ 9 ಗ್ರಾಮಗಳ ಪೈಕಿ 3 ಗ್ರಾಮಗಳ 519 ಎಕರೆಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಕೆಂಪಯ್ಯನಪಾಳ್ಯ, ಮಂಡಲಹಳ್ಳಿ, ವಡೇರಹಳ್ಳಿ ಗ್ರಾಮಗಳಿಗೆ ಅಂತಿಮ ಅಧಿಸೂಚನೆ ಪ್ರಕಟಿಸಿದೆ. ನೋಟಿಸ್ ಪಡೆದು ಒಪ್ಪಿಗೆ ನೀಡಿರುವ ರೈತರಿಗೆ ಭೂ ಪರಿಹಾರದ ಚೆಕ್ ವಿತರಣೆ ಮಾಡಲಾಗುತ್ತಿದೆ.

ಮೈಸೂರು ಮಿತ್ರ

ಮತ್ತೆ ನೀಟ್; ಮೈಸೂರು ಜಿಲ್ಲೆಯಲ್ಲಿ ಯಾವುದೇ ಲೋಪವಾಗದಂತೆ ಕ್ರಮಕ್ಕೆ ಎಡಿಸಿ ಸೂಚನೆ



ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಮತ್ತೆ ನಡೆಯಲಿರುವ 'ನೀಟ್' ಕುರಿತು ಪೂರ್ವಭಾವಿ ಸಿದ್ದತಾ ಸಭೆ ನಡೆಸಿದರು.

ಮೈಸೂರು, ಜೂ.19(ಎಂಟಿವೈ)–ಮತ್ತೆ ನಡೆಯುತ್ತಿರುವ ನೀಟ್ ವೇಳೆ ಮೈಸೂರು ಜಿಲ್ಲೆಯಲ್ಲಿ ಯಾವುದೇ ಲೋಪವಾಗದಂತೆ ಕ್ರಮ ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಸೂಚಿಸಿದ್ದಾರೆ.

ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ 'ನೀಟ್' ಕುರಿತು ಪೂರ್ವಭಾವಿ ಸಿದ್ದತಾ ಸಭೆಯಲ್ಲಿ ಮಾತನಾಡಿದ ಅವರು, ಜೂ.21. ರಂದು ನೀಟ್, ಮೈಸೂರಿನ 21 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ. ಒಟ್ಟು 7886 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಎಂ.ಜಿ.ಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜು, ಮೈಸೂರು ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್, ಮಹಾರಾಣಿ ಮಹಿಳಾ ವಾಣಿಜ್ಯ ಕಾಲೇಜು, ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಶನ್, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮಹಾರಾಣಿ ಮಹಿಳಾ ಕಲಾ ಕಾಲೇಜು, ವಿಜಯನಗರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಒಂಟಿಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜು, ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜು, ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು, ಕುವೆಂಪು ನಗರ ಸರ್ಕಾರಿ ಪದವಿಪೂರ್ವ ಕಾಲೇಜು, ಜಾಕಿ ಕ್ವಾಟ್ರಸ್ ಬಳಿ ಇರುವ ಸರ್ಕಾರಿ ಆದರ್ಶ ವಿದ್ಯಾಲಯ, ನಜರ್‌ಬಾದ್ ಹತ್ತಿರ ಇರುವ ಬೈಫರ್ಕೆಟೆಡ್ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು, ಪಿಎಂ ಶ್ರೀ ಕೇಂದ್ರೀಯ ವಿದ್ಯಾಲಯ ಹಾಗೂ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದಲ್ಲಿ ಪರೀಕ್ಷೆ ನಡೆಯಲಿದೆ, ಸರ್ಕಾರಿ ಪದವಿಪೂರ್ವ ಕಾಲೇಜು ಅನಿಕೇತನ ರಸ್ತೆ ಕುವೆಂಪುನಗರ ಮೈಸೂರು, ದೇವರಾಜ ಮಹಿಳಾ ಸರ್ಕಾರಿ ಪದವಿ ಪೂರ್ವ ಕಾಲೇಜು ದೇವರಾಜ ಮೊಹಲ್ಲಾ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಿದ್ಧಾರ್ಥ ಲೇಔಟ್, ಡೆಮೊಸ್ಟ್ರೇಷನ್ ಸ್ಕೂಲ್ ಮೈಸೂರು ಪರೀಕ್ಷಾ ಕೇಂದ್ರ ತೆರೆಯಲಾಗಿದ್ದು ಆ ಕೇಂದ್ರಗಳಲ್ಲಿ ಭದ್ರತೆ, ಪರೀಕ್ಷಾ ಸಿದ್ಧತೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ನೀಟ್ ಸಂಚಾಲಕ(ಕೋಆರ್ಡಿನೇಟರ್) ಮಿಥಿಲೇಶ್ ಕುಮಾರ್ ಮಾತನಾಡಿ, ಜೂ.21.ರಂದು ಮಧ್ಯಾಹ್ನ 2 ರಿಂದ 5 ಗಂಟೆಯವರೆಗೆ ನೀಟ್ ನಡೆಯಲಿದೆ. ಪರೀಕ್ಷಾ ಕೇಂದ್ರದಲ್ಲಿ ಬೆಳಗ್ಗೆ 11 ಗಂಟೆಯಿಂದ ಪರೀಕ್ಷಾರ್ಥಿಗಳ ಫ್ರಿಸ್ಕಿಂಗ್ ಹಾಗೂ ಬಯೋಮೆಟ್ರಿಕ್ ಪರಿಶೀಲನೆ ಪ್ರಕ್ರಿಯೆ ಪ್ರಾರಂಭವಾಗಲಿದೆ. ಮಧ್ಯಾಹ್ನ 1.30 ರೊಳಗೆ ಮಾತ್ರ ಪರೀಕ್ಷಾರ್ಥಿಗಳಿಗೆ ಪರೀಕ್ಷಾ ಕೇಂದ್ರಕ್ಕೆ ಪ್ರವೇಶವಿರುತ್ತದೆ. ನಂತರ ಬರುವ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದಿಲ್ಲ. ಪರೀಕ್ಷಾರ್ಥಿಗಳು ಪ್ರವೇಶ ಪತ್ರದಲ್ಲಿ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದರು.

ಪ್ರತಿ ಪರೀಕ್ಷಾ ಕೇಂದ್ರಗಳಿಗೆ ಓರ್ವ ಪೊಲೀಸ್ ವೃತ್ತ ನಿರೀಕ್ಷಕರು, 3 ಪುರುಷ, 2 ಮಹಿಳಾ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆಯನ್ನು ಒದಗಿಸಲಾಗುವುದು. ಪರೀಕ್ಷೆ ನಡೆಯುವ ದಿನಗಳಂದು ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಶುಚಿತ್ವ ಕಾಪಾಡುವ ಸಂಬಂಧ ಅಗತ್ಯ ಕ್ರಮವಹಿಸುವಂತೆ ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳಿಗೆ, ವಿದ್ಯಾರ್ಥಿಗಳ ಆರೋಗ್ಯದ ಹಿತದೃಷ್ಟಿಯಿಂದ ವಿದ್ಯಾರ್ಥಿಗಳು ಪರೀಕ್ಷೆ ಬರೆಯುವಾಗ ಆರೋಗ್ಯದ ಸಮಸ್ಯೆ ಉಂಟಾದಲ್ಲಿ ಅಭ್ಯರ್ಥಿಗಳಿಗೆ ಚಿಕಿತ್ಸೆಯನ್ನು ನೀಡಲು ಅಗತ್ಯ ಸಿಬ್ಬಂದಿ ನಿಯೋಜಿಸುವಂತೆ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕೆಎಸ್ಆರ್‌ಟಿಸಿ ವತಿಯಿಂದ ಪರೀಕ್ಷಾ ದಿನದಂದು ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯಲು ಪರೀಕ್ಷಾ ಕೇಂದ್ರದ ಮಾರ್ಗದಲ್ಲಿ ನಿಗಧಿತ ಸಮಯಕ್ಕೆ ತಲುಪುವಂತೆ ಹೆಚ್ಚಿನ ಬಸ್ ವ್ಯವಸ್ಥೆ ಮಾಡುವಂತೆ ತಿಳಿಸಲಾಗಿದೆ. ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷೆ ನಡೆಯುವ ದಿನಗಳಂದು ನಿರಂತರ ವಿದ್ಯುತ್ ವ್ಯವಸ್ಥೆ ಕಲ್ಪಿಸಲು ಚೆಸ್ಕಾಂಗೆ ಸೂಚಿಸಲಾಗಿದೆ. ಪರೀಕ್ಷಾ ದಿನಗಳಂದು ವಿಕಲಚೇತನ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಪರೀಕ್ಷಾ ಕೇಂದ್ರಗಳಿಗೆ ವೀಲ್ ಚೇರ್ ಮತ್ತು ಮೂಲ ಭೂತ ಅಗತ್ಯ ಕ್ರಮಗಳನ್ನು ಒದಗಿಸುವಂತೆ ತಿಳಿಸಿದರು.

ಸಭೆಯಲ್ಲಿ ನೀಟ್ ಕೋ–ಆರ್ಡಿನೇಟರ್ ಡಾ.ಎನ್.ಆರ್.ಶ್ರೀನಾಥ್, ಜಿಲ್ಲಾಧಿಕಾರಿಗಳ ಕಚೇರಿಯ ಶಿಷ್ಟಾಚಾರ ತಹಶೀಲ್ದಾರ್ ಶಿವಪ್ರಸಾದ್, ಅಗ್ನಿಶಾಮಕ ಅಧಿಕಾರಿ ಗುರುರಾಜ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಅಂತಿಮ ನಮನ



ನಿನ್ನೆ ನಿಧನ ಹೊಂದಿದ ಜೆಡಿಎಸ್ ಮುಖಂಡ ಪಿ.ಹೆಚ್.ಚಂದ್ರಶೇಖರ್ (ಪಾಲಹಳ್ಳಿ ಚಂದ್ರಶೇಖರ್) ಅವರ ಮೈಸೂರಿನ ಗೋಕುಲಂನ ಡಾಕ್ಟರ್ಸ್ ಕಾಲೋನಿಯ ನಿವಾಸಕ್ಕೆ ಶುಕ್ರವಾರ ಭೇಟಿ ನೀಡಿದ ಕೇಂದ್ರದ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಅಂತಿಮ ನಮನ ಸಲ್ಲಿಸಿದರು.

ಪಿಎಂ–ಕಿಸಾನ್: ಇಂದು 23ನೇ ಕಂತಿನ ಹಣ ಬಿಡುಗಡೆ

ಬೆಂಗಳೂರು: ರೈತರಿಗೆ ಗುಡ್ ನ್ಯೂಸ್ ಸಿಕ್ಕಿದೆ. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ–ಕಿಸಾನ್) ಯೋಜನೆಯ 23ನೇ ಕಂತಿನ ಆರ್ಥಿಕ ನೆರವನ್ನು ನಾಳೆ ಬಿಡುಗಡೆ ಮಾಡಲಾಗುತ್ತಿದೆ.

ಪ್ರಧಾನ ಮಂತ್ರಿಗಳು 2026 ನೇ ಜೂನ್ 20 ರಂದು ಪಶ್ಚಿಮ ಬಂಗಾಳ ರಾಜ್ಯದ ತಾರಕೇಶ್ವರ್, ಹೂಗ್ಲಿಯಲ್ಲಿ ಸಂಜೆ 4:00 ಗಂಟೆಗೆ ಆಯೋಜಿಸಲಾಗಿರುವ ಕಾರ್ಯಕ್ರಮದಲ್ಲಿ ದೇಶದ ರೈತರ ಖಾತೆಗಳಿಗೆ ಅಧಿಕೃತವಾಗಿ ಹಣ ವರ್ಗಾವಣೆ ಮಾಡಲಿದ್ದಾರೆ. ಈ ವಿಶೇಷ ದಿನವನ್ನು 'ಪಿ.ಎಂ. ಕಿಸಾನ್ ಉತ್ಸವ ದಿವಸ್' ಎಂದು ಆಚರಿಸಲಾಗುತ್ತಿದೆ.

ಕರ್ನಾಟಕದ ರೈತರಿಗೆ ರೂ. 830.832 ಕೋಟಿ ಅನುದಾನ: ಈ ಯೋಜನೆಯಡಿ ಕರ್ನಾಟಕ ರಾಜ್ಯದ ಒಟ್ಟು 41,54,160 ಫಲಾನುಭವಿ ರೈತರಿಗೆ ಕೇಂದ್ರ ಸರ್ಕಾರದಿಂದ ಒಟ್ಟಾರೆ ರೂ. 830.832 ಕೋಟಿಗಳ ಆರ್ಥಿಕ ನೆರವು ನೇರ ನಗದು ವರ್ಗಾವಣೆ ಮೂಲಕ ಜಮೆಯಾಗಲಿದೆ.

ಯೋಜನೆಯ ಹಿನ್ನೆಲೆ ಮತ್ತು ಪ್ರಯೋಜನಗಳು: ವಾರ್ಷಿಕ ನೆರವು: ಅರ್ಹ ರೈತ ಕುಟುಂಬಗಳಿಗೆ ಕೃಷಿ ಚಟುವಟಿಕೆಗಳ ನಿರ್ವಹಣೆ ಹಾಗೂ ಉತ್ತಮ ಇಳುವರಿ ಪಡೆಯಲು ನೆರವಾಗುವಂತೆ ವಾರ್ಷಿಕವಾಗಿ ಒಟ್ಟು ರೂ. 6,000/– ಗಳ ಆರ್ಥಿಕ ಸಹಾಯ ನೀಡಲಾಗುತ್ತದೆ.

ರಾಹುಲ್ ಗಾಂಧಿ ಹುಟ್ಟುಹಬ್ಬ



ಕಾಂಗ್ರೆಸ್ ಪಕ್ಷದ ಅಧಿನಾಯಕ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮೈಸೂರು ನಗರ ಕಾಂಗ್ರೆಸ್ ಸಮಿತಿ, ಹಿಂದುಳಿದ ವರ್ಗ ಘಟಕದ ವತಿಯಿಂದ ರಾಹುಲ್ ಗಾಂಧಿ ಸಂವಿಧಾನದ ಪುಸ್ತಕ ಹಿಡಿದಿರುವ ಪೋಸ್ಟರ್ ಬಿಡುಗಡೆ ಮಾಡಿ, ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು. ಘಟಕದ ಅಧ್ಯಕ್ಷ ಎನ್.ಆರ್.ನಾಗೇಶ್, ಸೇವಾದಳದ ಅಧ್ಯಕ್ಷ ಎಂ.ಕೆ.ಅಶೋಕ್, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಗಿರೀಶ್, ಓಬಿಸಿ ಘಟಕದ ಹಿರಿಯ ಉಪಾಧ್ಯಕ್ಷ ಎಂ.ಎಲ್.ಗೋಪಾಲ್, ಸಂಚಾಲಕ ಲಕ್ಷ್ಮೀನಾರಾಯಣ್, ಪ್ರಧಾನ ಕಾರ್ಯದರ್ಶಿ ವಿನೋದ್ ಉಪ್ಪಾರ್, ಕಾರ್ಯದರ್ಶಿ ರವಿ ಕುಂಬಾರ್, ಸಂಘಟನಾ ಕಾರ್ಯದರ್ಶಿ ಶ್ರೀರಾಮ್ ಮಡಿವಾಳ್, ಉಪಾಧ್ಯಕ್ಷ ಶ್ರೀಕಾಂತ್ ಯಾದವ್ ಮತ್ತಿತರರು ಉಪಸ್ಥಿತರಿದ್ದರು.

ಮುಸುಕಿನ ಜೋಳಕ್ಕೆ ಬೂಜುರೋಗ; ಪರ್ಯಾಯ ಬೆಳೆಗೆ ಕೃಷಿ ಇಲಾಖೆ ಸೂಚನೆ



ಮೈಸೂರಿನ ಹೆಚ್.ಡಿ.ಕೋಟೆ ತಾಲೂಕಿನ ಕೋಳಗಾಲ ಗ್ರಾಮದ ರೈತರ ಜಮೀನಿಗೆ ಶುಕ್ರವಾರ ಭೇಟಿ ನೀಡಿದ ಜಂಟಿ ಕೃಷಿ ನಿರ್ದೇಶಕ ಕೆ.ಹೆಚ್.ರವಿ, ಪರಿಶೀಲನೆ ನಡೆಸುತ್ತಿರುವುದನ್ನು ಕಾಣಬಹುದು

ಮೈಸೂರು, ಜೂ.19(ಎಂಕೆ)– ಮೈಸೂರು ಜಿಲ್ಲೆಯ ಹಲವು ಭಾಗಗಳಲ್ಲಿ ಮುಸುಕಿನ ಜೋಳಕ್ಕೆ ಬೂಜುರೋಗ ಅಥವಾ ಬಿಳಿ ಸುಳಿರೋಗ ಕಾಣಿಸಿಕೊಂಡಿದ್ದು, ಪರ್ಯಾಯ ಬೆಳೆಗೆ ಕೃಷಿ ಇಲಾಖೆ ಸೂಚಿಸಿದೆ.

ಜಿಲ್ಲೆಯ ಹೆಚ್.ಡಿ.ಕೋಟೆ, ಹುಣಸೂರು ಹಾಗೂ ಪಿರಿಯಾಪಟ್ಟಣ ತಾಲೂಕಿನ ಸುಮಾರು 800 ರಿಂದ 1 ಸಾವಿರ ಹೆಕ್ಟೇರ್ ಪ್ರದೇಶದಲ್ಲಿನ ಮುಸುಕಿನ ಜೋಳಕ್ಕೆ ಬೂಜುರೋಗ ಕಾಣಿಸಿಕೊಂಡಿದ್ದು, ಆಳವಾಗಿ ಎರಡು ಬಾರಿ ಉಳುಮೆ ಮಾಡಿ ಮುಸುಕಿನ ಜೋಳದ ಬದಲು ರಾಗಿ, ಅಲಸಂದೆ, ತೊಗರಿ ಮತ್ತು ಅವರೆ ಬೆಳೆ ಪರಿವರ್ತನೆ ಮಾಡುವಂತೆ ತಿಳಿಸಲಾಗಿದೆ.

ಬೆಳವಣಿಗೆ ಹಂತದಲ್ಲಿರುವ ಮುಸುಕಿನ ಜೋಳಕ್ಕೆ ಈ ರೋಗ ಕಾಣಿಸಿಕೊಳ್ಳುವುದು ಸಾಮಾನ್ಯವಾಗಿದ್ದು, ಸಮಗ್ರ ಪೋಷಕಾಂಶ ನಿರ್ವಹಣೆಗಾಗಿ ಭೂಮಿಗೆ ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ, ಜೈವಿಕ ಜೀವಾಣು ಮತ್ತು ಜೈವಿಕ ಗೊಬ್ಬರಗಳ ಬಳಕೆ ಜೊತೆಗೆ ಶಿಫಾರಸ್ಸು ಮಾಡಿದ ರಸಗೊಬ್ಬರಗಳ ಬಳಕೆ ಜೊತೆಗೆ ಬದುಗಳ ಮೇಲೆ ಕಳೆ ನಿರ್ವಹಣೆ ಮಾಡುವುದರಿಂದ ಹಾಗೂ ಬಸಿ ಕಾಲುವೆಗಳನ್ನು ನಿರ್ಮಾಣ ಮಾಡುವುದರಿಂದ ಬೂಜು ರೋಗ ನಿಯಂತ್ರಿಸಬಹುದಾಗಿದೆ ಎಂದು ಸಲಹೆ ನೀಡಿದೆ.

ಬೀಜೋಪಚಾರ: ರೋಗ ನಿಯಂತ್ರಣಕ್ಕೆ ಬೀಜೋಪಚಾರ ಅತ್ಯಂತ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಬಿತ್ತನೆಗೂ ಮೊದಲು ಯಾವುದೇ ಖಾಸಗಿ ಅಥವಾ ಸರ್ಕಾರಿ ಸಂಸ್ಥೆಯಿಂದ ಖರೀದಿಸಿದ ಪ್ರತಿ ಕೆ.ಜಿ.ಬೀಜವನ್ನು 3 ಗ್ರಾಂ ಮೆಟಾಲಾಕ್ಸಿಲ್ ಮತ್ತು ಮ್ಯಾಂಕೋಜೆಬ್ ಎಂಬ ಸಂಯುಕ್ತ ಶಿಲೀಂದ್ರನಾಶಕದಿಂದ ಬೀಜೋಪಚಾರ ಮಾಡಬೇಕು ಎಂದು ಜಂಟಿ ಕೃಷಿ ನಿರ್ದೇಶಕ ಕೆ.ಹೆಚ್.ರವಿ ತಿಳಿಸಿದ್ದಾರೆ.

ಬಿತ್ತನೆ ಮಾಡಿದ 15–20 ದಿನಗಳ ಅಂತರದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಸಂಯುಕ್ತ ಶಿಲೀಂದ್ರನಾಶಕವಾದ ಮೆಟಲಾಕ್ಸಿಲ್ 4% ಡಬ್ಲ್ಯೂ.ಪಿ ಮತ್ತು ಮ್ಯಾಂಕೋಜೆಬ್ 64% ಅನ್ನು ಪ್ರತಿ ಲೀಟರ್ ನೀರಿಗೆ 2 ಗ್ರಾಂ ನಂತೆ ಹಾಗೂ 2ನೇ ಸಿಂಪರಣೆಯಾಗಿ ಬಿತ್ತನೆ ಮಾಡಿದ 25–30 ದಿನಗಳ ಅಂತರದಲ್ಲಿ ರೋಗ ಲಕ್ಷಣಗಳು ಕಂಡು ಬಂದಲ್ಲಿ ಅಜೋಕ್ಸಿಸ್ಟೋಬಿನ್ 18.2% ಮತ್ತು ಡೈಫ್ ನೋಕೊನೊಜೋಲ್ 11.4% ಅನ್ನು ಪ್ರತಿ ಲೀಟರ್ ನೀರಿಗೆ 1 ಮೀ.ಲೀ. ಬೆರಸಿ ತಪ್ಪದೇ ಸಿಂಪರಣೆ ಮಾಡುವುದರಿಂದ ಬೆಳೆಗಳಿಗೆ ತಗುಲುವ ರೋಗಗಳನ್ನು ನಿಯಂತ್ರಿಸಬಹುದು ಎಂದು ಮಾಹಿತಿ ನೀಡಿದ್ದಾರೆ.

ಬೀದಿ ಬದಿ ಮಾರಾಟ ಮಾಡಲಾಗುವ ಆಹಾರ ಪದಾರ್ಥಗಳ ಸುರಕ್ಷತೆ ಪರಿಶೀಲಿಸಲು ಅಧಿಕಾರಿಗಳಿಗೆ ಡಿಸಿ ಸೂಚನೆ



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರು ಆಹಾರ ಸುರಕ್ಷತಾ ಅಧಿಕಾರಿಗಳ ಸಭೆ ನಡೆಸಿದರು.

ಮೈಸೂರು, ಜೂ.19(ಎಂಟಿವೈ)– ಬೀದಿ ಬದಿ ಫಾಸ್ಟ್‌ಫುಡ್, ಹೋಟೆಲ್, ರೆಸ್ಟೋರೆಂಟ್ ಸೇರಿದಂತೆ ವಿವಿಧ ಆಹಾರ ಪದಾರ್ಥಗಳ ಮಾರಾಟ ಮಳಿಗೆಗಳಲ್ಲಿ ಆಹಾರ ಸುರಕ್ಷತಾ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಸೂಚಿಸಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಹಾರ ಸುರಕ್ಷತಾ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಗ್ರಾಹಕರಿಗೆ ಆರೋಗ್ಯಯುತ ಆಹಾರ ನೀಡುವುದು ಹೋಟೆಲ್, ರೆಸ್ಟೋರೆಂಟ್, ಫಾಸ್ಟ್‌ಫುಡ್ ಮಾಲೀಕರ ಕರ್ತವ್ಯವಾಗಿದೆ. ಆಹಾರ ಸುರಕ್ಷತಾ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಆಹಾರ ಪದಾರ್ಥ ತಯಾರಿಕೆ, ವಿತರಣೆಯಲ್ಲಿ ಶುಚಿತ್ವ ಕಾಪಾಡಿಕೊಳ್ಳಬೇಕು. ಗುಣಮಟ್ಟದ ಪದಾರ್ಥ ಬಳಸಬೇಕು. ಆಹಾರ ಸುರಕ್ಷತಾ ಅಧಿಕಾರಿಗಳು, ಮೈಸೂರು ಮಹಾನಗರ ಪಾಲಿಕೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿರುವ ಆರೋಗ್ಯ ಅಧಿಕಾರಿಗಳು ಆಗ್ಗಿಂದಾಗ್ಗೆ ತಪಾಸಣೆ ನಡೆಸಬೇಕು ಎಂದು ಸಲಹೆ ನೀಡಿದರು.

ಆಹಾರ ಸುರಕ್ಷತಾ ಕ್ರಮ ಅನುಸರಿಸದಿದ್ದರೆ ನೋಟೀಸ್ ಜಾರಿ ಮಾಡಿ, ದಂಡ ವಿಧಿಸಬೇಕು. ಪದೇ ಪದೆ ನಿಯಮ ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಳ್ಳುವುದರೊಂದಿಗೆ ಟ್ರೇಡ್ ಲೈಸೆನ್ಸ್ ರದ್ದು ಮಾಡಲು ಶಿಫಾರಸ್ಸು ಮಾಡಬೇಕು. ಬೀದಿ ಬದಿಯಲ್ಲಿನ ಫಾಸ್ಟ್‌ಫುಡ್ ಸೇರಿದಂತೆ ಸ್ಟಾರ್ ಹೋಟೆಲ್‌ಗಳಲ್ಲೂ ತಪಾಸಣೆ ನಡೆಸುವಂತೆ ಆದೇಶಿಸಿದರು.

ಪರವಾನಗಿ ಪಡೆದ ಸಂದರ್ಭದಲ್ಲಿ ಸರ್ಕಾರ ಸೂಚಿಸುವ ಎಲ್ಲಾ ನಿಯಮಗಳನ್ನು ಪಾಲಿಸಬೇಕು. ಅನಾಹುತ ನಡೆದ ನಂತರ ಕ್ರಮಗಳ ಬಗ್ಗೆ ಚಿಂತಿಸುವ ಬದಲು ಮೊದಲೇ ಕಾರ್ಯಪ್ರವೃತ್ತರಾಗಿ, ವಿವಿಧ ಕಡೆ ಪರಿಶೀಲನೆ ನಡೆಸಿ ಪ್ರತಿ ದಿನ ಜಿಲ್ಲಾಡಳಿತಕ್ಕೆ ವರದಿ ನೀಡಬೇಕು. ಆಹಾರ ಮಾರಾಟಗಾರರು ಗ್ರಾಹಕರ ಆರೋಗ್ಯದ ಮೇಲೆ ವ್ಯತಿರಿಕ್ತವಾಗಿ ಪರಿಣಾಮ ಬೀರುವ ನಿಷೇಧಿತ ಪದಾರ್ಥಗಳನ್ನು ಬಳಸಬಾರದು. ಸ್ವಚ್ಛತೆಗೆ ಆದ್ಯತೆ ನೀಡಬೇಕು. ಕಾಲ ಕಾಲಕ್ಕೆ ಸರ್ಕಾರ ನೀಡುವ ನಿರ್ದೇಶನವನ್ನು ಪಾಲಿಸಬೇಕು ಎಂದರು.

ಸಭೆಯಲ್ಲಿ ಜಿ.ಪಂ. ಸಿಇಓ ಯಕೇಶ್ ಕುಮಾರ್, ಮೈಸೂರು ಮಹಾನಗರ ಪಾಲಿಕೆ ಕಂದಾಯ ವಿಭಾಗದ ಉಪ ಆಯುಕ್ತ ಸೋಮಶೇಖರ್, ಆಹಾರ ಸುರಕ್ಷತಾ ಅಧಿಕಾರಿ ಡಾ.ರವೀಂದ್ರ, ಕಾಂತರಾಜು ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಅಭಿನಂದನೆ–ಆಹ್ವಾನ



ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದ ಆರ್.ರಘು ಕೌಟಿಲ್ಯ ಅವರನ್ನು ಶ್ರೀ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಆಚರಣೆ ಸಮಿತಿ ಅಧ್ಯಕ್ಷ ಪಿ.ಪ್ರಶಾಂತಗೌಡ, ಸಮಿತಿಯ ಎ.ರವಿ, ಒಂಟಿಕೊಪ್ಪಲ್ ಗುರುರಾಜ್, ರವಿ ರಾಜಕೀಯ, ಚೇತನ್, ರಾಕೇಶ್ ರಾಮೇಗೌಡ, ಲಕ್ಷ್ಮಿದೇವಿ, ಪೈಲ್ವಾನ್ ಹೇಮಂತ್ ಗೌಡ, ಕೃಷ್ಣೇಗೌಡ ಅಭಿನಂದಿಸಿ, ಕೆಂಪೇಗೌಡರ ಜಯಂತ್ಯೋತ್ಸವಕ್ಕೆ ಆಹ್ವಾನಿಸಿದರು.

ನಾಳೆ 'ಮಧುಮೇಹ ಮನುಕುಲದ ಅಗೋಚರ ಶತ್ರು' ಕೃತಿ ಲೋಕಾರ್ಪಣೆ

ಮೈಸೂರು, ಜೂ.19(ಜಿಎ)–ಡಾ.ವಿ. ಲಕ್ಷ್ಮಿನಾರಾಯಣ ಹಾಗೂ ಡಾ.ಸೂರಜ್ ತೇಜಸ್ವಿ ಒಟ್ಟುಗೂಡಿ ರಚಿಸಿರುವ 'ಮಧುಮೇಹ ಮನುಕುಲದ ಅಗೋಚರ ಶತ್ರು' (9ನೇ ಮುದ್ರಣ) ಕೃತಿಯನ್ನು ಜೂ.21 ರಂದು ಬೆಳಗ್ಗೆ 10.30ಕ್ಕೆ ಗಾನಭಾರತಿ ಸಭಾಂಗಣದಲ್ಲಿ ಲೋಕಾರ್ಪಣೆ ಮಾಡಲಾಗುವುದು ಎಂದು ಚುಟುಕು ಸಾಹಿತ್ಯ ಪರಿಷತ್ ಸಂಸ್ಥಾಪಕ ಡಾ.ಎಂ.ಜಿ.ಆರ್.ಅರಸ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃತಿಯನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಲೋಕಾರ್ಪಣೆ ಮಾಡಲಿದ್ದಾರೆ. ಕೃತಿ ಕುರಿತು ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಪೂರ್ವಾಧ್ಯಕ್ಷ ಡಾ.ಪ್ರಧಾನ್ ಗುರುದತ್ತ ಮಾತನಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಟಿ.ಎಸ್.ಶ್ರೀವತ್ಸ ವಹಿಸಲಿದ್ದಾರೆ. ಕೃತಿಯ ಲೇಖಕ ಡಾ.ಲಕ್ಷ್ಮೀನಾರಾಯಣ್ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದ ಗೌಡ, ಜೆಎಸ್ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಉಪಕುಲಪತಿ ಡಾ.ಹೆಚ್.ಬಸವನಗೌಡ, ಹಿರಿಯ ಪತ್ರಕರ್ತ ರವೀಂದ್ರ ಭಟ್, ವಿಧಾನ ಪರಿಷತ್ ಸದಸ್ಯ ಆರ್.ರಘು ಕೌಟಿಲ್ಯ, ಸ್ವಪ್ನ ಬುಕ್ ಹೌಸ್ ಮುಖ್ಯಸ್ಥ ಆರ್.ದೊಡ್ಡೇಗೌಡ ಸೇರಿದಂತೆ ವಿವಿಧ ಗಣ್ಯರು ಆಗಮಿಸಲಿದ್ದಾರೆ ಎಂದರು.

ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಡಾ.ವಿ. ಲಕ್ಷ್ಮೀನಾರಾಯಣ ಹಾಗೂ ಡಾ. ಸೂರಜ್ ತೇಜಸ್ವಿ ಒಟ್ಟುಗೂಡಿ ರಚಿಸಿರುವ 'ಮಧುಮೇಹ ಮನುಕುಲದ ಅಗೋಚರ ಶತ್ರು' ಕೃತಿ ಸಾಮಾನ್ಯರೂ ಸಹಾ ಮಧು ಮೇಹವನ್ನು ನಿಯಂತ್ರಿಸಿಕೊಳ್ಳುವ ಬಗ್ಗೆ ಉಪಯುಕ್ತ ಮಾಹಿತಿ ನೀಡುತ್ತದೆ ಎಂದರು.

ಲೇಖಕ ಡಾ.ವಿಲಕ್ಷ್ಮೀ ನಾರಾಯಣ್ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಪೂರ್ವಾಧ್ಯಕ್ಷ ಡಾ.ಪ್ರಧಾನ್ ಗುರುದತ್ತ ಉಪಸ್ಥಿತರಿದ್ದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ಆರೋಪಿಗಳ ವಿರುದ್ಧ ಶಿಕ್ಷೆಗೆ ಆಗ್ರಹಿಸಿ ಎಐಡಿಎಸ್ಓ ಮೈಸೂರಲ್ಲಿ ಪ್ರತಿಭಟನೆ

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹ



ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಎಐಡಿಎಸ್ಓ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜೂ.19(ಎಂಕೆ)– ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ–ಎನ್‌ಟಿಎ (ರಾಷ್ಟ್ರೀಯ ಪರೀಕ್ಷಾ ಸಂಸ್ಥೆ) ರದ್ದು ಗೊಳಿಸಿ, ನೀಟ್ ಹಗರಣದ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವಂತೆ ಆಗ್ರಹಿಸಿ ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ (ಎಐಡಿಎಸ್ಓ) ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ನಗರದ ರಾಮಸ್ವಾಮಿ ವೃತ್ತದಲ್ಲಿ ಜಮಾವಣೆಗೊಂಡ ಸಂಘಟನೆ ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳು ಕೇಂದ್ರ ಸರ್ಕಾರ, ಎನ್‌ಟಿಎ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರಲ್ಲದೆ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ಮನನೊಂದ ವಿದ್ಯಾರ್ಥಿಗಳ ಸರಣಿ ಸಾವಿಗೆ ಕಾರಣರಾದ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸುವ ಜೊತೆಗೆ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್, ಈ ಕೂಡಲೇ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಆಕಸ್ಮಿಕ ಘಟನೆಯಲ್ಲ ಎನ್‌ಟಿಎ ವೈಫಲ್ಯಕ್ಕೆ ಮತ್ತೊಂದು ನಿದರ್ಶನವಾಗಿದೆ. 2022 ಮತ್ತು 2024ರಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿತ್ತು. 2024ರಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣದಲ್ಲಿ ಬಿಹಾರದ ಕೆಲವರನ್ನು ಬಂಧಿಸಿದರೂ ಸೋರಿಕೆಯ ಮೂಲ ಕಂಡು ಹಿಡಿಯುವಲ್ಲಿ ವ್ಯವಸ್ಥೆ ಸಂಪೂರ್ಣವಾಗಿ ವಿಫಲವಾಯಿತು. ಅದರಂತೆ ಪ್ರತಿ ವರ್ಷವೂ ಪ್ರಶ್ನೆ ಪತ್ರಿಕೆ ಸೋರಿಕೆಯಾಗುತ್ತಿದ್ದು, ಲಕ್ಷಾಂತರ ವಿದ್ಯಾರ್ಥಿಗಳ ಜೀವನ ದೊಂದಿಗೆ ಕೇಂದ್ರ ಶಿಕ್ಷಣ ಸಚಿವರಿಂದ ಹಿಡಿದು ಎನ್.ಟಿ.ಎ ಚೆಲ್ಲಾಟವಾಡುತ್ತಿದೆ ಎಂದು ಹರಿಹಾಯ್ದರು.

ನೀಟ್ ಎಂಬ ಏಕರೂಪದ ಪರೀಕ್ಷೆಯನ್ನು ಪರಿಚಯಿಸಿದ ಕೇಂದ್ರ ಸರ್ಕಾರ ನೀಟ್ ಕೋಚಿಂಗ್ ಸೆಂಟರ್‌ಗಳ ಆದಾಯ ಹೆಚ್ಚಿಸಿ, ವಿದ್ಯಾರ್ಥಿಗಳ ಬದುಕನ್ನು ಬರಿದಾಗಿಸುತ್ತಿದೆ. ಒಬ್ಬ ವಿದ್ಯಾರ್ಥಿಗೆ ನೀಟ್ ಕೋಚಿಂಗ್ ಪಡೆಯಲು 6 ರಿಂದ 7 ಲಕ್ಷ ರೂ.ಖರ್ಚಾಗುತ್ತಿದೆ. ಇದರಿಂದ ಮಕ್ಕಳನ್ನ ಓದಿಸಲಾಗದೇ 1.3 ಲಕ್ಷ ರೈತರು ಮತ್ತು ನಿರಾಶೆಗೆ ಒಳಗಾದ 1.5 ಲಕ್ಷ ವಿದ್ಯಾರ್ಥಿಗಳು ಹತಾಶೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ವರ್ಷವೇ 15 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕಿಡಿಕಾರಿದರು.

ಎಐಡಿಎಸ್ಓ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ ಮಾತನಾಡಿ, ಈ ವರ್ಷ ನೀಟ್ ಪರೀಕ್ಷೆ ರದ್ದಾದ 48 ಗಂಟೆಗಳಲ್ಲಿ ಆರು ವಿದ್ಯಾರ್ಥಿಗಳು ಸೇರಿ ಇದುವರೆಗೆ ದೇಶಾದ್ಯಂತ 15 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರತಿದಿನ ವಿದ್ಯಾರ್ಥಿಗಳ ಆತ್ಮಹತ್ಯೆ ಮುಂದುವರೆದಿದ್ದು, ವಿದ್ಯಾರ್ಥಿಗಳ ಭವ್ಯ ಭವಿಷ್ಯವನ್ನು ನಾಶ ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾಧ್ಯಕ್ಷೆ ಚಂದ್ರಕಲಾ ಮಾತನಾಡಿ, ಎನ್‌ಟಿಎ ಕೋಚಿಂಗ್ ಮಾಫಿಯಾದ ಕೈಗೊಂಬೆಯಾಗಿದ್ದು, ಮೆರಿಟ್ ವಿದ್ಯಾರ್ಥಿಗಳಿಗೆ ಮೋಸವಾಗುತ್ತದೆ. ಶಿಕ್ಷಣ ಮಾರಾಟದ ವಸ್ತುವಾಗಿದ್ದು, ಬಂಡವಾಳ ಹೂಡಿ ಲಾಭ ಮಾಡುವಂತಹ ಲಾಭದಾಯಕ ಕ್ಷೇತ್ರವಾಗಿ ಮಾರ್ಪಾಡಾಗಿದೆ. ಒಂದು ರಾಷ್ಟ್ರ ಒಂದು ಪರೀಕ್ಷೆಯ ಮುಖವಾಡ ಬಯಲಾಗಿದೆ ಎಂದು ಹೇಳಿದರು. ಎಐಡಿಎಸ್ಓ ಜಿಲ್ಲಾ ಸಮಿತಿ ಉಪಾಧ್ಯಕ್ಷೆ ಸ್ವಾತಿ, ಕಾರ್ಯದರ್ಶಿ ನಿತಿನ್, ಪದಾಧಿಕಾರಿಗಳಾದ ಚಂದನ, ಚಂದ್ರಿಕಾ, ಹೇಮಾ, ದಿಶಾ, ಅಂಜಲಿ, ನಂದೀಶ್, ದೀಕ್ಷಿತ ಮತ್ತಿತರರಿದ್ದರು.

ನಾಗರಿಕ ಬಂದೂಕು ತರಬೇತಿ ಶಿಬಿರ ಸಮಾರೋಪ

ಜೀವನದಲ್ಲಿ ನಿರಂತರ ಕಲಿಕೆ ಅನಿವಾರ್ಯ: ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ



ನಾಗರಿಕ ಬಂದೂಕು ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದ ನಾಗರಿಕರಿಗೆ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಪ್ರಮಾಣ ಪತ್ರ ವಿತರಿಸಿದರು.

> ಜೂ.11 ರಿಂದ 18 ವರೆಗೆ 8 ದಿನಗಳ ಕಾಲ ಮೈಸೂರು ಜಿಲ್ಲೆಯಾದ್ಯಂತ 48 ಮಂದಿಗೆ (47 ಪುರುಷರು, ಓರ್ವ ಮಹಿಳೆ) ಬಂದೂಕು ಬಳಕೆ ಕುರಿತು ಮಂಡ್ಯ ಜಿಲ್ಲೆಯ ಬ್ಯಾಡರಹಳ್ಳಿಯಲ್ಲಿ 7 ದಿನಗಳ ಕಾಲ ತರಬೇತಿ ನೀಡಲಾಗಿದೆ. ಪ್ರಾಣಿಗಳ ಭಯ, ಜೀವ ಭಯ ಸೇರಿದಂತೆ ಹತ್ತು ಹಲವು ಸಮಸ್ಯೆಗಳಿಗೆ ತಾತ್ಕಾಲಿಕ ರಕ್ಷಣೆಗಾಗಿ ಬಂದೂಕುಗಳ ಮೊರೆ ಹೋದವರಿಗೆ, ಇಲಾಖೆ ವತಿಯಿಂದ ತರಬೇತಿ ನೀಡಲಾಗಿದೆ.
>
> 
>
> –ಮಲ್ಲಿಕಾರ್ಜುನ ಬಾಲದಂಡಿ, ಎಸ್‌ಪಿ, ಮೈಸೂರು ಜಿಲ್ಲೆ.

ಮೈಸೂರು, ಜೂ.19(ವಿವಿಹೆಚ್)– ಕಲಿಕೆಗೆ ವಯಸ್ಸು, ಅಧಿಕಾರದ ಮಿತಿಯಿಲ್ಲ. ಜೀವನವೆಂಬ ಪಯಣದಲ್ಲಿ ನಿರಂತರವಾಗಿ ಕಲಿತರಷ್ಟೆ ಉಳಿಯಲು ಸಾಧ್ಯ ಎಂದು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅಭಿಪ್ರಾಯಿಸಿದರು.

ಮೈಸೂರಿನ ಜೆಸಿ ನಗರದ 'ನಗರ ಶಸಸ್ತ್ರ ಮೀಸಲು ಪಡೆ' ಕೇಂದ್ರ ಕಚೇರಿಯಲ್ಲಿ ಮೈಸೂರು ಜಿಲ್ಲಾ ಪೊಲೀಸ್ ವತಿಯಿಂದ ಗುರುವಾರ ಆಯೋಜಿಸಲಾಗಿದ್ದ 'ನಾಗರಿಕ ಬಂದೂಕು ತರಬೇತಿ ಶಿಬಿರ'ದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪೊಲೀಸ್ ಇರಲಿ, ಸಾರ್ವಜನಿಕರೇ ಇರಲಿ ಅವರ ಬದುಕಿನಲ್ಲಿ ಶಿಸ್ತು ಬಹಳ ಮುಖ್ಯ. ರಾಜಕೀಯ, ಶಿಕ್ಷಣ, ಕೃಷಿ ಸೇರಿದಂತೆ ಯಾವುದೇ ರಂಗವಿರಲಿ, ಶಿಸ್ತು, ಸಂಯಮ, ಶ್ರಮ ವಹಿಸಿದ್ದಲ್ಲಿ ಯಶಸ್ಸು ಸಿಗಲಿದೆ ಎಂದರು.

ಪ್ರತಿಯೊಬ್ಬರು ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಕ್ರೀಡೆ, ವ್ಯಾಯಾಮ, ಯೋಗ ಅಥವಾ ಇನ್ನಿತರ ವಿಷಯಗಳಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳಬೇಕು. ಇದರಿಂದ ಆರೋಗ್ಯ ಸುಧಾರಿಸಲಿದೆ ಕೆಲಸದಲ್ಲಿ ಶ್ರದ್ಧೆ, ಆಸಕ್ತಿ ಹೆಚ್ಚಾಗಲಿದೆ ಎಂದರು.

ಜಿಲ್ಲೆ, ರಾಜ್ಯ ಅಥವಾ ದೇಶದ ಭದ್ರತಾ ವಿಚಾರಗಳು, ತುರ್ತು ಕಾರ್ಯಾಚರಣೆಗಳಲ್ಲಿ ತೊಡಗಿಕೊಳ್ಳಲು, ಪೊಲೀಸ್, ಆರ್ಮಿ ಜೊತೆಗೆ ಕೈಗೂಡಿಸಲು ನಾಗರಿಕರೂ ಸದಾ ಸಿದ್ಧವಾಗಿರಬೇಕು. ಪ್ರವಾಹ, ಕೋವಿಡ್ ಮಹಾಮಾರಿ ಸೇರಿದಂತೆ ಹಲವಾರು ತುರ್ತು ಸಂದರ್ಭಗಳಲ್ಲಿ ನಾಗರಿಕರೂ ಸ್ವಯಂ ಪ್ರೇರಿತವಾಗಿ ಪಾಲ್ಗೊಂಡು ಶ್ರಮವಹಿಸಿ ಕರ್ತವ್ಯ ಪಾಲನೆ ಮೆರೆದಿರುವುದನ್ನು ನಾವು ಕಂಡಿದ್ದೇವೆ. ಸಾರ್ವಜನಿಕರ ಪಾಲ್ಗೊಳ್ಳುವಿಕೆ ಅರ್ಧದಷ್ಟು ಸಮಸ್ಯೆಗಳನ್ನು ಸ್ಥಳದಲ್ಲೇ ಬಗೆಹರಿಸಲಿದೆ ಎಂದು ತಿಳಿಸಿದರು.

ನಾಗರಿಕ ಬಂದೂಕುಗಳ ಬಳಕೆ, ಸುರಕ್ಷತೆ ಬಗ್ಗೆ ತರಬೇತಿಯಲ್ಲಿ ವಿವರಿಸಲಾಗಿದೆ. ಬಂದೂಕುಗಳ ಪಡೆಯುವ ನಾಗರಿಕರು ತಮ್ಮ ಆತ್ಮರಕ್ಷಣೆ ಜೊತೆಗೆ ಸಾರ್ವಜನಿಕರ ರಕ್ಷಣೆಗೆ ಹೆಚ್ಚಿನ ಒತ್ತು ನೀಡುವ ಸಾಧನವಾಗಿ ಬಂದೂಕುಗಳ ಬಳಸಬೇಕು. ಅತೀ ಅಗತ್ಯಬಿದ್ದ ಜಾಗದಲ್ಲಿ ಬಹಳ ಜಾಗರೂಕವಾಗಿ ಬಳಕೆ ಮಾಡುವುದನ್ನು ಮನಗಾಣಬೇಕು ಎಂದು ಕಿವಿಮಾತು ಹೇಳಿದರು.

ವಾರಗಳ ಕಾಲ ಶಿಬಿರದಲ್ಲಿ ಪಾಲ್ಗೊಳ್ಳುವ ಮೂಲಕ ಶಿಬಿರಾರ್ಥಿಗಳು ಇಲಾಖೆಯ ಒಂದು ಭಾಗವಾಗಿದ್ದೀರಿ ಎಂದು ಭಾವಿಸಿದ್ದೇನೆ. ಇಲಾಖೆಯಿಂದ ಬಂದೂಕು ಪಡೆದು, ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಲ್ಲಿ ಕಾನೂನು ಕ್ರಮಕ್ಕೆ ಒಳಗಾಗುತ್ತೀರಿ ಎಂದು ತಿಳಿ ಹೇಳಿದರು.

ಪಿತ್ರಾರ್ಜಿತ ಆಸ್ತಿ ವರ್ಗಾವಣೆ ವಿಳಂಬ

ಆದಿವಾಸಿ ಸಮುದಾಯ ಸಂಘಟನೆಗಳ ಒಕ್ಕೂಟ ಪ್ರತಿಭಟನೆ

ಮಡಿಕೇರಿ, ಜೂ.19–ಪಿತ್ರಾರ್ಜಿತ ಆಸ್ತಿಯನ್ನು ತಮ್ಮ ಹೆಸರಿಗೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಆದಿವಾಸಿ ಸಮೂಹಕ್ಕೆ ಸೇರಿದ ಬಸವನಹಳ್ಳಿಯ ವ್ಯಕ್ತಿಯೊಬ್ಬರು 2 ವರ್ಷಗಳಿಂದ ಇನ್ನಿಲ್ಲದ ಪಡಿಪಾಟಲಿಗೆ ಒಳಗಾಗಿದ್ದಾರೆ. ಹೀಗಾಗಿ ಸಮಸ್ಯೆ ಬಗೆಹರಿಕೆಯ ಕಾರಣಕ್ಕಾಗಿ ಆದಿವಾಸಿ ಸಮುದಾಯ ಸಂಘಟನೆಗಳ ಒಕ್ಕೂಟದ ಸಹಕಾರದೊಂದಿಗೆ ಪ್ರತಿಭಟನೆಯ ಹಾದಿ ತುಳಿದಿದ್ದಾರೆ.

ಬಸವನಹಳ್ಳಿ ಗ್ರಾಮದ ರಮೇಶ್ 2 ಪ್ರತ್ಯೇಕ ಸರ್ವೆ ನಂಬರ್‌ಗಳಲ್ಲಿ ಸುಮಾರು 1.95 ಎಕರೆ ಪಿತ್ರಾರ್ಜಿತ ಆಸ್ತಿಯನ್ನು ಹೊಂದಿದ್ದಾರೆ. ಇವರ ತಂದೆ ಎಸ್.ಎಸ್.ಸಿದ್ದಪ್ಪ ಅವರು ಮೃತಪಟ್ಟ ಬಳಿಕ ಜಾಗವನ್ನು ತಮ್ಮ ಹೆಸರಿಗೆ ಮಾಡಿಕೊಳ್ಳುವ ಪ್ರಯತ್ನಗಳು ವಿಫಲವಾಗಿದ್ದು, ಒಕ್ಕೂಟದ ಸಹಕಾರದೊಂದಿಗೆ ನಗರದ ಜಿಲ್ಲಾ ದಲಿತ ಭವನದ ಮುಂಭಾಗ ಪ್ರತಿಭಟನೆ ನಡೆಸಿದರು.

ಒಕ್ಕೂಟದ ಸದಸ್ಯರು ಹಾಗೂ ಜಿಲ್ಲಾ ಜೇನು ಕುರುಬರ ಅಭಿವೃದ್ಧಿ ಸಂಘದ ಅಧ್ಯಕ್ಷ ಜೆ.ಟಿ.ಕಾಳಿಂಗ ಮಾತನಾಡಿ, ಬಸವನಹಳ್ಳಿಯ ನಿವಾಸಿ ರಮೇಶ್ ತಂದೆ ಸಿದ್ದಪ್ಪ 1997ರಲ್ಲಿ ನಿಧನರಾಗಿದ್ದು, ಅವರ ಸ್ವಾಧೀನದಲ್ಲಿದ್ದ ಜಾಗವನ್ನು ಕೆಲವು ವ್ಯಕ್ತಿಗಳು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ತಮ್ಮ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಂಡಿರುವುದಾಗಿ ಆರೋಪಿಸಿದರು.

ಪಿತ್ರಾರ್ಜಿತವಾಗಿ ತಮ್ಮ ಹೆಸರಿಗೆ ಬರಬೇಕಾದ ಜಾಗವನ್ನು ಮತ್ತೊಬ್ಬರು ತಮ್ಮ ಹೆಸರಿಗೆ ಮಾಡಿಕೊಂಡಿರುವ ವಿಷಯಕ್ಕೆ ಸಂಬಂಧಿಸಿದಂತೆ ರಮೇಶ್ 2024ರ ಸೆ.25 ರಂದು ತಹಸೀಲ್ದಾರ್‌ಗೆ ದೂರು ಸಲ್ಲಿಸಿದ್ದರು. ಈ ಬಗ್ಗೆ ವಿಚಾರಣೆಗಳು ನಡೆದು, ಜಾಗ ಸಿದ್ದಪ್ಪ ಅವರಿಗೆ ಸೇರಿದ್ದು ಎಂದು ನಿರ್ಧಾರವಾಗಿದ್ದು, ಸಿದ್ದಪ್ಪ ಅವರ ಹೆಸರಿಗೆ ಯಥಾಸ್ಥಿತಿಯಂತೆ ಜಾಗದ ಆರ್‌ಟಿಸಿ ಮಾಡಲಾಗುತ್ತದೆ ಎಂದು ತಿಳಿಸಿದರು.

ಸೋಲಿಗ ಅಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಬಿ.ಬಿ.ಮಹೇಶ್ ಮಾತನಾಡಿ, ಸಂಕಷ್ಟ ಬಗೆ ಹರಿಯದಿದ್ದಲ್ಲಿ ದೊಡ್ಡ ಮಟ್ಟದ ಹೋರಾಟವನ್ನು ಒಕ್ಕೂಟದ ಮೂಲಕ ಹಮ್ಮಿಕೊಳ್ಳುವ ಮೂಲಕ ಆದಿವಾಸಿ ವ್ಯಕ್ತಿಗೆ ನ್ಯಾಯ ಒದಗಿಸಲು ಪ್ರಯತ್ನಿಸುವುದಾಗಿ ಸ್ಪಷ್ಟಪಡಿಸಿದರು. ಪ್ರತಿಭಟನೆಯಲ್ಲಿ ಸಂತ್ರಸ್ತ ಬಸವನಹಳ್ಳಿಯ ರಮೇಶ್, ಹೊಸಕೋಟೆ ನಿವಾಸಿ ಜೆ.ಚಿನ್ನಪ್ಪಯ್ಯ, ಜೇನುಕುರುಬರ ಅಭಿವೃದ್ಧಿ ಸಂಘದ ಹಾಗೂ ಒಕ್ಕೂಟದ ಸದಸ್ಯರಾದ ಚಂದ್ರಿ, ರೇಣುಕ, ಬಿ.ಎಂ.ರವಿ, ಚಿನ್ನಪ್ಪಯ್ಯ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.



ಆದಿವಾಸಿ ಸಮುದಾಯ ಸಂಘಟನೆಗಳ ಒಕ್ಕೂಟ ಶುಕ್ರವಾರ ಪ್ರತಿಭಟನೆ ನಡೆಸಿತು.

ವಂಶವೃಕ್ಷಕ್ಕೆ ಪರದಾಟ

ಈ ಎಲ್ಲ ಬೆಳವಣಿಗೆಗಳ ಬಳಿಕ ರಮೇಶ್ ಹೆಸರಿಗೆ ಜಾಗದ ಖಾತೆ ವರ್ಗಾವಣೆಗಾಗಿ ಪೌತಿ ಖಾತೆ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳು ಸೂಚಿಸಿದ್ದರು. ಅದರಂತೆ ಇವರು ಅಗತ್ಯ ದಾಖಲಾತಿಗಳೊಂದಿಗೆ ವಂಶವೃಕ್ಷಕ್ಕೆ ಅರ್ಜಿ ಸಲ್ಲಿಸಿದ್ದರು. ದಾಖಲೆಗಳು ಸಮರ್ಪಕವಿಲ್ಲ ಎನ್ನುವ ಕಾರಣ ನೀಡಿ ಇಲ್ಲಿಯವರೆಗೂ ದಾಖಲೆ ಮಾಡಿ ಕೊಟ್ಟಿಲ್ಲ ಎಂದು ಆರೋಪಿಸಿದರು.

ಮಲ್ಮಕುಂದ್‌ನ ರಕ್ಷಣೆಗೆ ಜಬ್ಬೂಮಿ ಚಾರಿಟಬಲ್ ಟ್ರಸ್ಟ್ ಹೋರಾಟಕ್ಕೆ ಸಿದ್ಧ



ಇಗ್ಗುತ್ತಪ್ಪ ದೇವಾಲಯದ ಬಳಿ ನಡೆಯುತ್ತಿರುವ ಕಾಮಗಾರಿ

ಮಡಿಕೇರಿ, ಜೂ.19–ಶ್ರೀ ಪಾಡಿ ಇಗ್ಗುತ್ತಪ್ಪ ಕ್ಷೇತ್ರದ ಮಲ್ಮಕುಂದ್(ಬೆಟ್ಟ)ನ ರಕ್ಷಣೆಗೆ ಜಬ್ಬೂಮಿ ಚಾರಿಟಬಲ್ ಟ್ರಸ್ಟ್ ಬದ್ಧವಾಗಿದೆ. ಅಲ್ಲದೆ ಸ್ಥಳೀಯ ಗ್ರಾಮಸ್ಥರ ನೇತೃತ್ವದ ಯಾವುದೇ ಹೋರಾಟಕ್ಕೆ ಸಿದ್ಧವಾಗಿದೆ ಎಂದು ಟ್ರಸ್ಟ್‌ನ ಸಂಚಾಲಕ ಚೊಟ್ಟೆಕ್‌ಮಾಡ ರಾಜೀವ್ ಬೋಪಯ್ಯ ತಿಳಿಸಿದ್ದಾರೆ.

ಮಲ್ಮಕುಂದ್‌ನಲ್ಲಿ ನಡೆಯುತ್ತಿರುವ ಕಾಮಗಾರಿಗೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಅವರು, ಶ್ರೀ ಪಾಡಿ ಇಗ್ಗುತ್ತಪ್ಪ ಕ್ಷೇತ್ರಕ್ಕೆ ಧಕ್ಕೆ ಬಂದರೆ ಇಡೀ ಕೊಡವ ಹಾಗೂ ಕೊಡವ ಭಾಷಿಕ ಜನಾಂಗಕ್ಕೆ ಧಕ್ಕೆ ಬಂದ ಹಾಗೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಹೊರ ಜಿಲ್ಲೆಯಿಂದ ಆಗಮಿಸಿ ಭೂಮಿಯನ್ನು ಖರೀದಿಸಿ ಶ್ರೀಪಾಡಿ ಕ್ಷೇತ್ರದ ಮಲ್ಮಕುಂದ್‌ನಲ್ಲಿ ಜಾಗವನ್ನು ಸಮತಟ್ಟು ಮಾಡಿ ಅಭಿವೃದ್ಧಿ ಪಡಿಸುತ್ತಿದ್ದಾರೆ. ಸಾರ್ವಜನಿಕವಾಗಿ ಈ ಕಾಮಗಾರಿಗೆ ತೀವ್ರ ವಿರೋಧ ವ್ಯಕ್ತವಾಗುತ್ತಿದ್ದು, ಶ್ರೀ ಪಾಡಿ ಇಗ್ಗುತ್ತಪ್ಪ ದೇವಸ್ಥಾನ ಸಮಿತಿ ಹಾಗೂ ಸುತ್ತಮುತ್ತಲ ಗ್ರಾಮಸ್ಥರು ತೆಗೆದುಕೊಳ್ಳುವ ನಿರ್ಣಯಕ್ಕೆ ಮತ್ತು ಹೋರಾಟದ ನಿರ್ಧಾರಕ್ಕೆ ಜಬ್ಬೂಮಿ ಚಾರಿಟೇಬಲ್ ಟ್ರಸ್ಟ್ ಸಂಪೂರ್ಣ ಬೆಂಬಲ ವ್ಯಕ್ತಪಡಿಸಲಿದೆ. ಜೂ.20ರಂದು ನಡೆಯುವ ವಿಶೇಷ ಗ್ರಾಮ ಸಭೆಯಲ್ಲಿ ತೆಗೆದುಕೊಳ್ಳುವ ನಿರ್ಣಯಕ್ಕೂ ಟ್ರಸ್ಟ್ ಬೆಂಬಲ ನೀಡಲಿದೆ ಎಂದು ಪತ್ರಿಕಾ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಪ್ರಸ್ತುತ ಪಾಡಿ ಶ್ರೀ ಇಗ್ಗುತ್ತಪ್ಪ ದೇವಸ್ಥಾನದ ಅಸ್ತಿತ್ವಕ್ಕೆ ಧಕ್ಕೆ ತರುವ ರೀತಿಯಲ್ಲಿ ಮಲ್ಮ ಬೆಟ್ಟದ ಒಡಲಿನಲ್ಲಿ ನಡೆಯುತ್ತಿರುವ ಕಾರ್ಯ ಚಟುವಟಿಕೆಯಿಂದ ಮುಂದೊಂದು ದಿನ ಈ ಭಾಗದಲ್ಲಿ ಭೂಕುಸಿತವಾಗುವ ಸಾಧ್ಯತೆಗಳಿವೆ. ಅಲ್ಲದೆ ಪರಿಸರ ಅಸಮತೋಲನ ಉಂಟಾಗಿ ಸಾಕಷ್ಟು ತೊಂದರೆಗಳು ಎದುರಾಗಬಹುದು. ಜಿಲ್ಲಾಡಳಿತ, ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರು ಹಾಗೂ ಸರಕಾರ ತಕ್ಷಣ ಎಚ್ಚೆತ್ತುಕೊಂಡು ಸ್ಥಳೀಯ ಜನರ ಭಾವನೆಗೆ ಗೌರವ ನೀಡಿ ಕಾಮಗಾರಿಗೆ ನಿರ್ಬಂಧ ವಿಧಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ಬೇಡಿಕೆಗಳನ್ನು ಸರಕಾರ ಪರಿಗಣನೆಗೆ ತೆಗೆದುಕೊಳ್ಳದೆ ಹೋದರೆ ಮುಂದಿನ ದಿನಗಳಲ್ಲಿ ಜಿಲ್ಲೆಯಾದ್ಯಂತ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಉಪಾಧ್ಯಕ್ಷ ಅಜ್ಜಮಾಡ ಕುಶಾಲಪ್ಪ, ಕಾರ್ಯದರ್ಶಿ ಅಣ್ಣೀರ ಹರೀಶ್ ಮಾದಪ್ಪ, ಖಜಾಂಚಿ ಜಮ್ಮಡ ಗಣೇಶ್ ಅಯ್ಯಣ್ಣ, ಮಲ್ಲಮಾಡ ಪ್ರಭು ಪೂಣಚ್ಚ, ಮಚ್ಚ ಮಾಡ ಅನಿಲ್ ಮಾದಪ್ಪ, ಮಾಳೆಯಂಡ ಶ್ರೀನಿವಾಸ್, ಪುಚ್ಚಿಮಂಡ ಬಬ್ಬು, ನೆರವಂಡ ಅನೂಪ್, ಚೋಕಂಡ ಸೂರಜ್, ಚೆರಂಡ ಶಮ್ಮಿ ಮಾದಯ್ಯ, ಪಾಡೆ ಯಂಡ ದೀಪಕ್ ಹಾಗೂ ಉಳುವಂಗಡ ಲೋಹಿತ್ ಭೀಮಯ್ಯ ಪತ್ರಿಕಾ ಹೇಳಿಕೆಗೆ ಸಹಿ ಹಾಕಿದ್ದಾರೆ.

ಇಂದು ವಿಶೇಷ ಗ್ರಾಮಸಭೆ

ನಾಪೋಕ್ಲು: ಸಮೀಪದ ಬಲ್ಲಮಾವಟಿ ಗ್ರಾಮ ಪಂಚಾಯಿತಿ ಸಭಾಂಗಣದಲ್ಲಿ ಜೂ.20 ರಂದು ವಿಶೇಷ ಗ್ರಾಮಸಭೆ ಏರ್ಪಡಿಸಲಾಗಿದೆ. ನೆಲಜಿ ಗ್ರಾಮದ, ಆರಾಧ್ಯ ದೇವ ಶ್ರೀ ಇಗ್ಗುತಪ್ಪ ದೇವರ ಸನ್ನಿಧಿಯ ಸಮೀಪ ಹೊರಗಿನ ವ್ಯಕ್ತಿಗಳು, ಜಾಗ ಖರೀದಿಸಿ, ಈ ಜಾಗದಲ್ಲಿ ಮನಸ್ಸೋ ಇಚ್ಛೆ ವಿವಿಧ ಕಾಮಗಾರಿ ನಡೆಸುತ್ತಿದ್ದಾರೆ. ಇದರಿಂದ ದೇವಾಲಯದ ಆಸ್ತಿಕ, ಆಚಾರ, ಸಂಪ್ರದಾಯಗಳಿಗೆ, ಮತ್ತು ಶ್ರೀ ಇಗ್ಗುತಪ್ಪ ದೇವರ ಮೂಲ ಸ್ಥಳವಾದ ಮಲ್ಮಬೆಟ್ಟದ ಪಾವಿತ್ರ್ಯತೆಗೆ ತೀವ್ರತರವಾದ ಧಕ್ಕೆ ಉಂಟಾಗಲಿದೆ. ಈ ವಿಚಾರವಾಗಿ ಗ್ರಾಮಸ್ಥರ ಅಭಿಪ್ರಾಯವನ್ನು ಸಂಗ್ರಹಿಸಲು ಸಭೆ ಕರೆಯಲಾಗಿದೆ. ಈ ಸಂಬಂಧವಾಗಿ ಇತ್ತೀಚೆಗೆ ನೆಲಜಿ ಗ್ರಾಮದಲ್ಲಿ ಪೂರ್ವಭಾವಿ ಸಭೆ ನಡೆಸಲಾಗಿತ್ತು. ಅಲ್ಲಿ ತೆಗೆದುಕೊಂಡ ನಿರ್ಣಯದಂತೆ ನಾಳಿನ ಸಭೆ ಆಯೋಜಿಸಲಾಗಿದ್ದು ಮುಂದಕ್ಕೆ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಚರ್ಚಿಸಲು ಗ್ರಾಮಸ್ಥರು ಸಹಕಾರ ನೀಡಬೇಕೆಂದು ಪ್ರಕಟಣೆ ತಿಳಿಸಿದೆ.

ಕೊಡವ ಸಮಾಜ ಬೆಂಬಲ

ಶ್ರೀ ಇಗ್ಗುತಪ್ಪ ದೇವರ ನೆಲೆಯಾದ ಪಾವಿತ್ರತೆಗೆ ಧಕ್ಕೆ ಬರುವಂಥ ಯಾವುದೇ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳುವುದನ್ನು ವಿರೋಧಿಸಿ ಕೊಡವ ಸಮಾಜದ ಆಡಳಿತ ಮಂಡಳಿ ಸಭೆಯಲ್ಲಿ ನಿರ್ಣಯವನ್ನು ಕೈಗೊಂಡಿದೆ. ಈ ವಿಚಾರವಾಗಿ ಸಮಾಜವು ಊರಿನವರ, ನಾಡಿನವರ ಬೆಂಬಲಕ್ಕೆ ಸದಾ ನಿಲ್ಲುವುದಲ್ಲದೆ ಹೋರಾಟಕ್ಕೆ ಸಂಪೂರ್ಣ ಬೆಂಬಲವನ್ನು ನೀಡುವುದಾಗಿ ತಿಳಿಸಿದೆ.

ಕುಶಾಲನಗರದಲ್ಲಿ ಲವ್ ಜಿಹಾದ್

ನಾಪತ್ತೆಯಾಗಿದ್ದ ಪತ್ನಿ, ಮಗ ಕೇರಳದ ಮದರಸದಲ್ಲಿ ಪತ್ತೆ

ಮಡಿಕೇರಿ: ಒಂದೂವರೆ ತಿಂಗಳ ಹಿಂದೆ ಕುಶಾಲನಗರದಿಂದ ನಾಪತ್ತೆಯಾಗಿದ್ದ ಸಚಿತಾ ಹಾಗೂ ಆಕೆಯ 9 ವರ್ಷದ ಮಗ ಕೇರಳದ ಮಲಪ್ಪುರಂ ಜಿಲ್ಲೆಯ ಮದರಸವೊಂದರಲ್ಲಿ ಪತ್ತೆಯಾಗಿದ್ದಾರೆ.

ಇದರ ಹಿಂದೆ ಮತಾಂತರ ಹಾಗೂ ಲವ್ ಜಿಹಾದ್‌ನ ದೊಡ್ಡ ಸಂಚು ಇದೆ ಎಂದು ಹಿಂದೂಪರ ಸಂಘಟನೆಗಳು ಆರೋಪಿಸಿವೆ. ಮಲಪ್ಪುರಂ ಜಿಲ್ಲೆಯ ಪೊನ್ನಾನಿ ಹಾಗೂ ಮಂಜೇರಿ ಭಾಗಗಳಲ್ಲಿ ಮತಾಂತರ ಜಾಲ ಕಾರ್ಯನಿರ್ವಹಿಸುತ್ತಿದೆ ಎಂಬ ಆರೋಪವನ್ನೂ ಮಾಡಿವೆ. ಮಹಿಳೆ ತನ್ನ ಮಗನಿಗೆ ಇಸ್ಲಾಂ ಧರ್ಮದ ಅನ್ವಯ ಮುಂಜಿ ಮಾಡಿಸಿದ್ದಾಳೆನ್ನಲಾಗಿದೆ.

ಇಲ್ಲಿನ ಎಸ್‌ಬಿಐ ಕಾಂಪ್ಲೆಕ್ಸ್‌ನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಸಚಿತಾ, ಅಂಗಡಿ ಮಾಲೀಕ ಸಲೀಂ ಸಂಪರ್ಕಕ್ಕೆ ಬಂದ ಬಳಿಕ ಗಂಡನನ್ನು ಬಿಟ್ಟು ಮಗುವಿನೊಂದಿಗೆ ತೆರಳಿದ್ದರು ಎಂದು ಆರೋಪಿಸಲಾಗಿದೆ. ಪತ್ನಿ ಹಾಗೂ ಮಗು ಕಾಣೆಯಾಗಿದ್ದರಿಂದ ಮಹಿಳೆಯ ಪತಿ ಸಾಕಷ್ಟು ಹುಡುಕಾಟ ನಡೆಸಿದ್ದರು. ಪತ್ನಿ ಕೆಲಸ ಮಾಡುತ್ತಿದ್ದ ಅಂಗಡಿ ಮಾಲಿಕನ ಮೇಲೆ ಅನುಮಾನ ವ್ಯಕ್ತಪಡಿಸಿ, ಹಿಂದೂ ಪರ ಸಂಘಟನೆಗಳ ಸಹಕಾರದೊಂದಿಗೆ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು.

ಕೊಡಗಿಗೆ ಕರೆತಂದಿದ್ದೇವೆ: ಕುಶಾಲನಗರದಿಂದ ನಾಪತ್ತೆಯಾಗಿ ಕೇರಳದ ಮದರಸದಲ್ಲಿ ಪತ್ತೆಯಾಗಿರುವ ತಾಯಿ ಮತ್ತು ಮಗುವನ್ನು ಮರಳಿ ಕೊಡಗಿಗೆ ಕರೆತರಲಾಗಿದೆ ಎಂದು ಎಸ್‌ಪಿ ಕೆ.ಆರ್. ಬಿಂದುಮಣಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಈ ಬಗ್ಗೆ ತನಿಖೆ ನಡೆಯುತ್ತಿರುವುದರಿಂದ ಹೆಚ್ಚಿನ ವಿವರಗಳನ್ನು ತಿಳಿಸಲು ಸಾಧ್ಯವಾಗುವುದಿಲ್ಲ ಎಂದು ಹೇಳಿದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕರಿಂದ ಭೂಮಿ ಪೂಜೆ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎ.ಎಸ್. ಪೊನ್ನಣ್ಣ ಭೂಮಿಪೂಜೆ ನೆರವೇರಿಸಿದರು.

ಮಡಿಕೇರಿ, ಜೂ.19–ಪೊನ್ನಂಪೇಟೆ ತಾಲೂಕಿನ ಪೊನ್ನಪ್ಪಸಂತೆಯಿಂದ ಬಾಳೆಲೆಗೆ ಹೋಗುವ ಮಾರ್ಗದ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎ.ಎಸ್. ಪೊನ್ನಣ್ಣ ಶುಕ್ರವಾರ ಭೂಮಿಪೂಜೆ ನೆರವೇರಿಸಿ, ರೂ.2.30 ಕೋಟಿ ವೆಚ್ಚದಲ್ಲಿ ಈ ಕಾಮಗಾರಿ ಕೈಗೊಳ್ಳಲಾಗುತ್ತಿದ್ದು, ಸದ್ಯದಲ್ಲೇ ಪ್ರಾರಂಭವಾಗಲಿದೆ ಎಂದು ತಿಳಿಸಿದರು.

ಪೊನ್ನಂಪೇಟೆ ತಾಲೂಕಿನ ಮಾಹಿತಿಯೊಂದು ಭಾಗಕ್ಕೆ ಶಾಸಕ ಪೊನ್ನಣ್ಣ ಭೇಟಿ ನೀಡಿ, ಮಾಹಿತಿಯೊಂದುವಿನಿಂದ ಮದಿಕೇರಿಗೆ ತೆರಳುವ ರಸ್ತೆ ಅಭಿವೃದ್ಧಿಗೆ ಭೂಮಿ ಪೂಜೆ ನೆರವೇರಿಸಿ, 2.80 ಕೋಟಿ ವೆಚ್ಚದ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಪ್ರಮುಖರಾದ ಮಿದೇರಿರ ನವೀನ್, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರು ಕಾಳಿಮಾಡ ಪ್ರಶಾಂತ್, ಚಟ್ಟ ಮೊಣ್ಣಪ್ಪ, ಚಂಗುಲಂಡ ಸೂರಜ್, ಹಿರಿಯರು ಮುಕ್ಕಟೀರ ಕುಶಾಲಪ್ಪ, ತಿತೀರ ಮಂದಣ್ಣ, ಸಾದಲಿ, ಮಲ್ಲಂಡ ಧ್ಯಾನ್ ದೇವಯ್ಯ, ಕೊಣ್ಣಿಯಂಡ ಸೋಮಣ್ಣ, ಮಚ್ಚಾಮಾಡ ಮನು, ಅಣ್ಣಳಮಾಡ ಹರೀಶ್, ರವಿ, ಗಿರೀಶ್, ಅಜ್ಜಿಕುಟ್ಟಿರ ಪೊನ್ನಪ್ಪ, ಅಜ್ಜಿಕುಟ್ಟಿರ ಗಿರೀಶ್, ಕೇಚಮಾಡ ಸಿದ್ದು ನಾಚಪ್ಪ, ಕುಂಡಚ್ಚಿರ ಮಂಜು ದೇವಯ್ಯ, ತಾಣಚ್ಚಿರ ನಿಖಿಲ್ ಸೋಮಣ್ಣ, ಮದನ್ ಮಂದಣ್ಣ, ರಿಕ್ಕಿತ್ ಕಾರ್ಯಪ್ಪ, ಬಿಪಿನ್, ವಚನ್ ನಾಚಪ್ಪ ಇತರರಿದ್ದರು.

ಭಾರಿ ಮರ ಬಿದ್ದು ವಾಹನಗಳ ಸಂಚಾರಕ್ಕೆ ಅಡ್ಡಿ

ಮಡಿಕೇರಿ, ಜೂ.19– ಭಾಗಮಂಡಲ–ಕರಿಕೆ ಮುಖ್ಯ ರಸ್ತೆಯಲ್ಲಿ ಗುರುವಾರ ರಾತ್ರಿ ಬೃಹತ್ ಗಾತ್ರದ ಮರ ರಸ್ತೆಯ ಮಧ್ಯೆ ಉರುಳಿ ಬಿದ್ದ ಪರಿಣಾಮ ಹಲವು ಗಂಟೆಗಳ ಕಾಲ ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿತ್ತು.

ಅರಣ್ಯ ಇಲಾಖೆಯ ಸಿಬ್ಬಂದಿ ಕಿರಣ್, ವಿವೇಕ್, ರಾಜೇಶ್ ಸ್ಥಳಕ್ಕೆ ಧಾವಿಸಿ, ಹಲವು ಗಂಟೆಗಳ ಶ್ರಮದ ಬಳಿಕ ರಸ್ತೆಯ ಮೇಲಿದ್ದ ಮರ ಹಾಗೂ ಕೊಂಬೆಗಳನ್ನು ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಹೊಸಕಾಡಲ್ಲಿ ಕಾಡಾನೆಗಳ ದಾಳಿ: ಕೃಷಿ ಫಸಲು ನಾಶ

ಮಡಿಕೇರಿ, ಜೂ.19– ಗುಡ್ಡೆಹೊಸೂರು ಸಮೀಪದ ಬಸವನಹಳ್ಳಿ ಹೊಸಕಾಡು ಗ್ರಾಮದಲ್ಲಿ ಗುರುವಾರ ತಡರಾತ್ರಿ 4 ಕಾಡಾನೆಗಳ ಹಿಂಡು ಜಮೀನಿಗೆ ದಾಳಿ ಮಾಡಿ ಕೃಷಿ ಫಸಲು ನಾಶಪಡಿಸಿವೆ.


ಗ್ರಾಮದ ನಿವಾಸಿ ಅಣ್ಣಯ್ಯ ಎಂಬುವರಿಗೆ ಸೇರಿದ ಜಮೀನಿಗೆ ಲಗ್ಗೆ ಇಟ್ಟ ಕಾಡಾನೆಗಳು ಅಡಿಕೆ, ಬಾಳೆ, ತೆಂಗು, ಮರಗೆಣಸು ಸೇರಿದಂತೆ ಇನ್ನಿತರ ಫಸಲು ಬೆಳೆಗಳನ್ನು ತಿಂದು ತುಳಿದು ಧ್ವಂಸಗೊಳಿಸಿವೆ. ಈ ಭಾಗದಲ್ಲಿ ನಿರಂತರವಾಗಿ ನಡೆಯುತ್ತಿರುವ ಕಾಡಾನೆ ದಾಳಿಯಿಂದಾಗಿ ಗ್ರಾಮಸ್ಥರು ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಂತ್ರಸ್ತ ರೈತ ಅಣ್ಣಯ್ಯ ಅವರಿಗೆ ನಷ್ಟ ಪರಿಹಾರ ಒದಗಿಸಬೇಕು. ಕಾಡಾನೆಗಳ ಉಪಟಳ ತಡೆಯಲು ಸೂಕ್ತ ರೀತಿಯಲ್ಲಿ ರೈಲ್ವೆ ಬ್ಯಾರಿಕೇಡ್‌ಗಳನ್ನು ಅಳವಡಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.



ಕಾಡಾನೆಗಳ ಹಿಂಡು ದಾಳಿಯಿಂದ ಕೃಷಿ ಫಸಲು ನಾಶ

ಕೊಳ್ಳೇಗಾಲದ ಬಳಿ ಸೇತುವೆಗೆ ಕಾರು ಡಿಕ್ಕಿ

ನ್ಯಾಯಾಲಯದ ಇಬ್ಬರು ಸಿಬ್ಬಂದಿ ಸಾವು



ಕೊಳ್ಳೇಗಾಲ, ಜೂ.19– ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ಸೇತುವೆಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ನ್ಯಾಯಾಲಯದ ನೌಕರರು ಸಾವನ್ನಪ್ಪಿ ಮೂವರು ತೀವ್ರವಾಗಿ ಗಾಯಗೊಂಡಿರುವ ಘಟನೆ ಗುರುವಾರ ರಾತ್ರಿ ಮುಡಿ ಗುಂಡದಲ್ಲಿ ಸಂಭವಿಸಿದೆ.

ಪಟ್ಟಣದ ನ್ಯಾಯಾಲಯದ ಶಿರಸ್ತೆ ದಾರರಾದ ಮೂಲತಃ ಬಾಗೇಪಲ್ಲಿಯ ನಂಜುಂಡಪ್ಪ(50), ಗುಮಾಸ್ತರಾದ ಯಮುನಪ್ಪ ಭಜಂತ್ರಿ(40) ಸ್ಥಳದಲ್ಲೆ ಸಾವಿಗೀಡಾದ ದುರ್ದೈವಿಗಳು.



ದುರಂತದಲ್ಲಿ ಸಾವನ್ನಪ್ಪಿದವರು

ಉಳಿದಂತೆ ಇವರ ಜೊತೆ ಕಾರಿನಲ್ಲಿದ್ದ ಬೆಂಚ್ ಕ್ಲರ್ಕ್ ಕೃಷ್ಣಪ್ಪ, ಎಫ್.ಡಿ.ಎ ಲೋಕೇಶ್, ಗುಮಾಸ್ತ ಶಂಕರಪ್ಪ ತೀವ್ರವಾಗಿ ಗಾಯಗೊಂಡಿದ್ದು, ಮೈಸೂರಿನ ವಿವಿಧ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ. ಐವರು ಸಂತೇಮರಳ್ಳಿ ಸಮೀಪದ ನಡುಕಲು ಮೋಳೆ ಗ್ರಾಮದಲ್ಲಿ ತಮ್ಮ ಗೆಳೆಯರೊಬ್ಬರ ಮನೆ ಕಾರ್ಯಕ್ರಮ ಮುಗಿಸಿಕೊಂಡು ಹಿಂತಿರುತ್ತಿದ್ದಾಗ ಮುಡಿಗುಂಡ ಸೇತುವೆಗೆ ಕಾರು ಡಿಕ್ಕಿಯಾದ ಪರಿಣಾಮ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮೂವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಜರುಗಿಸಿದ್ದಾರೆ.

ನ್ಯಾಯಾಧೀಶರ ಸಂತಾಪ: ಇಬ್ಬರು ನ್ಯಾಯಾಲಯದ ನೌಕರರುಸಾವನ್ನಪ್ಪಿರುವ ಹಿನ್ನೆಲೆಯಲ್ಲಿ ನ್ಯಾಯಾಧೀಶರುಗಳು ಮೃತರ ಆತ್ಮಕ್ಕೆ ಶಾಂತಿ ಕೋರಿ ಶ್ರದ್ಧಾಂಜಲಿ ಅರ್ಪಿಸಿದರು. ಪ್ರಧಾನ ಜಿಲ್ಲಾ ನ್ಯಾಯಾಧೀಶರಾದ ಪ್ರಭಾವತಿ, ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾದ ಟಿ.ಸಿ.ಶ್ರೀಕಾಂತ್, ಹಿರಿಯ ಸಿವಿಲ್ ನ್ಯಾಯಾಧೀಶರಾದ ಸುನೀತಾ, ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಕಾವ್ಯ, ಅಪರ ಸಿವಿಲ್ ನ್ಯಾಯಾಧೀಶರು ಎಂ.ರಂಜಿತ್ ಕುಮಾರ್ ಸೇರಿದಂತೆ ಇಲ್ಲಿನ ನ್ಯಾಯಾಲಯದ ಸಿಬ್ಬಂದಿಗಳು, ವಕೀಲರು ಮೃತರ ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದರು.

ಚಾ.ನಗರ ಜಿಲ್ಲೆಯಲ್ಲಿ ಮತ್ತೆ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ

ಹೊಂಗನೂರಿನಲ್ಲಿ ಗ್ರಾಮಸ್ಥರಿಂದ ಆಕ್ರೋಶ; ಕಿಡಿಗೇಡಿಗಳ ಬಂಧನಕ್ಕೆ ಒತ್ತಾಯ

ಚಾಮರಾಜನಗರ: ಯಳಂದೂರು ತಾಲೂಕಿನ ಮಸಣಾಪುರ ಘಟನೆ ಮಾಸುವ ಮುನ್ನವೇ ಚಾಮರಾಜನಗರ ತಾಲೂಕಿನ ಹೊಂಗನೂರು ಗ್ರಾಮದಲ್ಲಿಯೂ ಕಿಡಿಗೇಡಿಗಳು ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿರುವ ಹೇಯ ಕೃತ್ಯ ಶುಕ್ರವಾರ ನಡೆದಿದೆ.

ಗ್ರಾಮದ ಜ್ಯೋತಿಗೌಡನಪುರ ರಸ್ತೆಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರದ ನಾಮ ಫಲಕಕ್ಕೆ ದುಷ್ಕರ್ಮಿಗಳು ಸಗಣಿ ಬಳಿದು ವಿಕೃತಿ ಮೆರೆದಿದ್ದಾರೆ. ಘಟನೆಯಿಂದ ಗ್ರಾಮದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಯಿತು.

ವಿಷಯ ತಿಳಿದು ಸ್ಥಳದಲ್ಲಿ ಜಮಾಯಿಸಿದ ಗ್ರಾಮಸ್ಥರು ಕೃತ್ಯವನ್ನು ಖಂಡಿಸಿ ತಪ್ಪಿತಸ್ಥರನ್ನು ಶೀಘ್ರ ಬಂಧಿಸಿ ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿದ್ದಾರೆ. ಅಲ್ಲದೇ ಈ ರೀತಿಯ ಘಟನೆಗಳು ಪದೇ ಪದೇ ನಡೆಯುತ್ತಿದ್ದು ಪೊಲೀಸ್ ಇಲಾಖೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಮಸಣಾಪುರ ಗ್ರಾಮದಲ್ಲಿ ಇತ್ತೀಚೆಗೆ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿರುವ ಘಟನೆ ಮಾಸುವ ಮುನ್ನವೇ ಹೊಂಗನೂರಿನಲ್ಲಿ ಇದೇ ರೀತಿಯ ಮತ್ತೊಂದು ಘಟನೆ ನಡೆದಿರುವುದು ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ.

ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನದ ವಿಚಾರ ತಿಳಿದು ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು, ಎಎಸ್‌ಪಿ ಶಶಿಧರ್, ಡಿವೈಎಸ್‌ಪಿ ಸ್ನೇಹ ರಾಜ್ ಹಾಗೂ ಚಾಮರಾಜನಗರ ಪೂರ್ವ ಪೊಲೀಸ್ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ಗ್ರಾಮಸ್ಥರಿಂದ ಮಾಹಿತಿ ಕಲೆ ಹಾಕಿದರು.

ಬಳಿಕ ಆರೋಪಿಗಳ ಪತ್ತೆಗೆ ಮೊಬೈಲ್ ಟವರ್ ಲೊಕೇಷನ್ ಹಾಗೂ ಸಿಸಿ ಕ್ಯಾಮರ್‌ಗಳನ್ನು ಪರಿಶೀಲನೆ ನಡೆಸುತ್ತಿದ್ದಾರೆ.

ಶಾಸಕ ಎ.ಆರ್. ಕೃಷ್ಣಮೂರ್ತಿ ಭೇಟಿ: ಹೊಂಗನೂರು ಗ್ರಾಮಕ್ಕೆ ಶಾಸಕ ಎ.ಆರ್.ಕೃಷ್ಣಮೂರ್ತಿ ಭೇಟಿ ನೀಡಿ ಗ್ರಾಮಸ್ಥರಿಂದ ಮಾಹಿತಿ ಪಡೆದುಕೊಂಡರು. ಬಳಿಕ ಮಾತನಾಡಿ, ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡುವಂತಹ ಘಟನೆಗಳು ಪದೇ ಪದೇ ನಡೆಯುತ್ತಿರುವುದು ಖಂಡನೀಯ. ಇಂತಹ ಘಟನೆಗಳು ಮರುಕಳಿಸದಂತೆ ಪೊಲೀಸರು ಕ್ರಮವಹಿಸಬೇಕು ಎಂದರು.

ಜಿಲ್ಲೆಯಲ್ಲಿ ಪದೇ–ಪದೆ ನಡೆಯುತ್ತಿದೆ ಅಪಮಾನದ ಕೃತ್ಯ: ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ ಹೆಚ್ಚಿನ ಅನುಯಾಯಿಗಳನ್ನು ಹೊಂದಿರುವ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಅಂಬೇಡ್ಕರ್ ಭಾವ ಚಿತ್ರಕ್ಕೆ ಅಪಮಾನದಂತಹ ಹೀನಾ ಕೃತ್ಯ ಪದೇ–ಪದೇ ನಡೆಯುತ್ತಿರುವುದು ವಿಪರ್ಯಾಸವಾಗಿದೆ.

ಕಳೆದ ವರ್ಷ ಅಕ್ಟೋಬರ್ 24ರಂದು ಚಾಮರಾಜನಗರ ತಾಲೂಕಿನ ಜ್ಯೋತಿಗೌಡನಪುರ ಗ್ರಾಮದ ಗುಡಿಯೊಳಗಿದ್ದ ಬುದ್ಧನ ವಿಗ್ರಹವನ್ನು ಒಡೆದು ಹಾಕಿ, ಅಂಬೇಡ್ಕರ್ ಭಾವಚಿತ್ರವನ್ನು ಹರಿದು, ಬರಹವನ್ನು ಅಳಿಸಿ ವಿಕೃತಗೊಳಿಸಿದ್ದರು.

ನಂತರ ಕಳೆದ 5 ದಿನಗಳ ಹಿಂದೆ (ಜೂ.14) ಯಳಂದೂರು ತಾಲೂಕಿನ ಮಸಣಾಪುರ ಗ್ರಾಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಯುವಕನೊಬ್ಬ ಸಗಣಿ ಎರಚಿ ಅಪಮಾನ ವೆಸಗಿದ್ದ. ಈ ಘಟನೆ ಮಾಸುವ ಮುನ್ನವೇ ಚಾಮರಾಜನಗರ ತಾಲೂಕಿನ ಹೊಂಗನೂರು ಗ್ರಾಮದಲ್ಲಿ ಮತ್ತೆ ಅಂಬೇಡ್ಕರ್ ಭಾವಚಿತ್ರಕ್ಕೆ ಕಿಡಿಗೇಡಿಗಳು ಅಪಮಾನ ಮಾಡಿದ್ದಾರೆ.



ಘಟನಾ ಸ್ಥಳಕ್ಕೆ ಶಾಸಕ ಎ.ಆರ್. ಕೃಷ್ಣಮೂರ್ತಿ ಭೇಟಿ ನೀಡಿ ಗ್ರಾಮಸ್ಥರೊಂದಿಗೆ ಚರ್ಚಿಸಿದರು.

“ಪೊಲೀಸರು ಸೂಕ್ತ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಬೇಕು. ಈ ಸಂಬಂಧ ಸೂಕ್ತವಾದ ಕಾನೂನನ್ನು ಜಾರಿಗೆ ತರಬೇಕು. ಈ ಸಂಬಂಧ ವಿಧಾನಸಭೆಯಲ್ಲಿ ಮಾತನಾಡುತ್ತೇನೆ. ಹೊಸ ಗೃಹ ಸಚಿವರ ಜೊತೆ ಚರ್ಚಿಸಿ ಹೊಸ ಕಾನೂನನ್ನು ಜಾರಿಗೆ ತರುವ ನಿಟ್ಟಿನಲ್ಲಿ ಮನವಿ ಮಾಡಲಾಗುವುದು.

–ಎ.ಆರ್. ಕೃಷ್ಣಮೂರ್ತಿ, ಶಾಸಕರು.

“ಘಟನೆ ಸಂಬಂಧ ಈಗಾಗಲೇ ಸಿಸಿ ಕ್ಯಾಮರಾ ಹಾಗೂ ಮೊಬೈಲ್ ಟವರ್ ಲೊಕೇಷನ್ ಪರಿಶೀಲಿಸುತ್ತಿದ್ದು ಆರೋಪಿಗಳನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಲಾಗುವುದು. ಗ್ರಾಮಸ್ಥರು ಗ್ರಾಮದಲ್ಲಿ ಶಾಂತಿ ಕಾಪಾಡಿಕೊಳ್ಳಬೇಕು.

–ಮುತ್ತುರಾಜು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ.

ಬೆಳೆ ವಿಮೆ ಸಮರ್ಪಕ ಅನುಷ್ಠಾನಕ್ಕೆ ಕ್ರಮ ವಹಿಸಿ

ಚಾಮರಾಜನಗರ: 2026–27ರ ಮುಂಗಾರು ಹಂಗಾಮಿಗೆ ಕರ್ನಾಟಕ ರೈತ ಸುರಕ್ಷ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ, ಇದರ ಪ್ರಯೋಜನವನ್ನು ರೈತರು ಪಡೆಯಲು ಅಧಿಕಾರಿಗಳು ಅಗತ್ಯ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಶ್ರೀರೂಪ ಸೂಚಿಸಿದರು.

ನಗರದ ತಮ್ಮ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಪ್ರಧಾನಮಂತ್ರಿ ಫಸಲ್ ಬಿಮಾ ವಿಮಾ ಯೋಜನೆ ಕುರಿತ ಜಿಲ್ಲಾ ಮಟ್ಟದ ಜಂಟಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿಗೆ ಗ್ರಾಮ ಪಂಚಾಯಿತಿ, ಹೋಬಳಿ ಮಟ್ಟದಲ್ಲಿ ಅಧಿಸೂಚಿತ ಬೆಳೆಗಳನ್ನು ನಿಗದಿಪಡಿಸಿ ವಿಮೆ ವ್ಯಾಪ್ತಿಗೆ ಒಳಪಡಿಸಲಾಗುತ್ತಿದೆ. ಈ ವಿಮೆ ಯೋಜನೆಯ ಪ್ರಯೋಜನವನ್ನು ಬೆಳೆಸಾಲ ಪಡೆದ ಹಾಗೂ ಪಡೆಯದ ರೈತರು ಪಡೆಯಬಹುದಾಗಿದೆ ಎಂದರು.

ಬ್ಯಾಂಕುಗಳು ರೈತರಿಗೆ ಬೆಳೆವಿಮೆ ಯೋಜನೆ ಪ್ರಯೋಜನ ಪಡೆಯಲು ಅನುಕೂಲವಾಗುವಂತೆ ಪೂರಕವಾಗಿ ಎಲ್ಲಾ ವ್ಯವಸ್ಥೆಗಳನ್ನು ಮಾಡಬೇಕು. ಪ್ರತ್ಯೇಕ ಕೌಂಟರ್‌ಗಳ ಮೂಲಕ ಬೆಳೆವಿಮೆಗೆ ಸಹಕರಿಸಬೇಕು. ಕೃಷಿ, ಕಂದಾಯ, ಸಹಕಾರ, ತೋಟಗಾರಿಕೆ ಹಾಗೂ ಸಂಬಂಧಪಟ್ಟ ಇತರೆ ಇಲಾಖೆಗಳು ಬೆಳೆವಿಮೆ ಸಂಬಂಧ ಹಂಗಾಮಿನಲ್ಲಿ ಅಧಿಸೂಚಿಸಿರುವ ಬೆಳೆಗಳು, ಘಟಕಗಳ ಬಗ್ಗೆ ಬ್ಯಾಂಕುಗಳು, ರೈತ ಸಂಪರ್ಕ ಕೇಂದ್ರಗಳು ಮತ್ತು ಗ್ರಾಮ ಪಂಚಾಯಿತಿ ಕಚೇರಿಗಳ ಸೂಚನ ಫಲಕಗಳಲ್ಲಿ ಪ್ರಕಟಿಸಬೇಕು ಎಂದು ಹೇಳಿದರು.

ಬ್ಯಾಂಕುಗಳು ಸಂರಕ್ಷಣೆ ಪೋರ್ಟಲ್ ಮೂಲಕ ಬೆಳೆಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರಿಗೆ ಸಂಬಂಧಿಸಿದ ಪ್ರಸ್ತಾವನೆಗಳ ವಿವರಗಳನ್ನು ದಾಖಲಿಸಲು ಹಾಗೂ ರೈತರ ಪ್ರಸ್ತಾವನೆ ವಿಮಾ ಕಂತಿನ ಮೊತ್ತವನ್ನು ವಿಮಾ ಸಂಸ್ಥೆಗಳಿಗೆ ವರ್ಗಾಯಿಸಲು ನಿಗದಿತ ದಿನದೊಳಗೆ ಕ್ರಮವಹಿಸಬೇಕು ಎಂದು ಡಿಸಿ ಶ್ರೀರೂಪ ತಿಳಿಸಿದರು.

ಇದೇ ವೇಳೆ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಕುರಿತ ಮಾಹಿತಿ ಕರಪತ್ರ ಬಿಡುಗಡೆ ಮಾಡಲಾಯಿತು. ಜಿಪಂ ಸಹಾಯಕ ಯೋಜನಾಧಿಕಾರಿ ಶ್ರೀಕಂಠರಾಜೇ ಅರಸ್, ಪ್ರಭಾರ ಜಂಟಿ ಕೃಷಿ ನಿರ್ದೇಶಕ ಡಾ.ಯು.ಹೆಚ್. ಭಾನುಪ್ರಕಾಶ್ ಇದ್ದರು.



ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಕುರಿತ ಮಾಹಿತಿ ಕರಪತ್ರ ಬಿಡುಗಡೆ ಮಾಡಲಾಯಿತು.

ಇಂದು ಬೇಗೂರಲ್ಲಿ ಹನುಮ ಜಯಂತಿ ಮೆರವಣಿಗೆ

ಬೇಗೂರು: ಗ್ರಾಮದ ಹನುಮ ಸೇವಾ ಸಮಿತಿ ವತಿಯಿಂದ ಜೂ.20ರಂದು ಗ್ರಾಮದಲ್ಲಿ ಅದ್ದೂರಿ ಹನುಮ ಜಯಂತಿ ಕಾರ್ಯಕ್ರಮ ನಡೆಯಲಿದೆ

ಗ್ರಾಮದ ಶ್ರೀ ಬಂಡಿಗೆರೆ ಮಹದೇಶ್ವರ ಸ್ವಾಮಿ ದೇವಾಲಯದ ಆವರಣದಲ್ಲಿ ಪೂಜೆ ಸಲ್ಲಿಸಿ 12 ಗಂಟೆಗೆ ಹನುಮ ಮತ್ತು ಶ್ರೀ ರಾಮನ ವಿಗ್ರಹಗಳ ಹಾಗೂ ವಿವಿಧ ಕಲಾ ತಂಡಗಳ ಸಮೇತ ಗ್ರಾಮದ ರಾಷ್ಟ್ರೀಯ ಹೆದ್ದಾರಿ ಮೂಲಕ ಮೆರವಣಿಗೆ ಅಂಚೆ ಕಚೇರಿವರೆಗೆ ಸಾಗಿ ಗ್ರಾಮದ ಆಂಜನೇಯ ಸ್ವಾಮಿ ದೇವಾಲಯದ ಆವರಣಕ್ಕೆ ಬಂದು ತಲುಪಲಿದೆ ಎಂದು ಹನುಮ ಸೇವಾ ಸಮಿತಿ ತಿಳಿಸಿದೆ.

ನಾಳೆ ಶ್ರೀ ಮಹಾ ಗಣಪತಿ ದೇವಸ್ಥಾನದ ವಾರ್ಷಿಕೋತ್ಸವ

ಚಾಮರಾಜನಗರ: ನಗರದ ಭ್ರಮರಾಂಬ ಬಡಾವಣೆಯ 4ನೇ ಕ್ರಾಸ್‌ನಲ್ಲಿರುವ ಶ್ರೀ ಮಹಾಗಣಪತಿ ದೇವಸ್ಥಾನದ ವಾರ್ಷಿಕೋತ್ಸವ ಮಹೋತ್ಸವವು ಜೂ.21ರಂದು ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ನಡೆಯಲಿದೆ.


ಅಂದು ಬೆಳಗ್ಗೆ ಮೂಲ ದೇವರ ಅಭಿಷೇಕ, ಗಣಪತಿ ಪೂಜೆ, ಪುಣ್ಯಾಹ, ಕಳಶ ಸ್ಥಾಪನೆ, ನವಗ್ರಹ ಹೋಮ, ಗಣಪತಿ ಹೋಮ, ಪರಿವಾರ ದೇವತೆಗಳ ಹೋಮ ಹಾಗೂ ಆಂಜನೇಯಸ್ವಾಮಿ ಹೋಮ ಸೇರಿದಂತೆ ವಿವಿಧ ವೈದಿಕ ಕಾರ್ಯಕ್ರಮಗಳು ನೆರವೇರಲಿವೆ. ಬಳಿಕ ಶ್ರೀ ಆಂಜನೇಯ ಸ್ವಾಮಿಗೆ ನೂತನ ಕವಚಧಾರಣೆ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 12.30 ಗಂಟೆಗೆ ಮಹಾ ಪೂರ್ಣಾಹುತಿ ಹಾಗೂ ಮಹಾಮಂಗಳಾರತಿ ನೆರವೇರಿದ ನಂತರ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಗುವುದು. ಸಂಜೆ 6 ಗಂಟೆಗೆ ಶ್ರೀ ಮಹಾ ಗಣಪತಿ ದೇವರ ಮುತ್ತಿನ ಪಲ್ಲಕ್ಕಿ ಉತ್ಸವವು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಲಿದ್ದು, ರಾತ್ರಿ 8.30 ಗಂಟೆಗೆ ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ಕಾರ್ಯ ಕ್ರಮ ಏರ್ಪಡಿಸಲಾಗಿದೆ.

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ

ಇಂದು ಚಾಮರಾಜನಗರದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಚಾಮರಾಜನಗರ, ಜೂ.19– ನವದೆಹಲಿಯ ಆಯುಷ್ ಮಂತ್ರಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ, ಗೃಹ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ನಗರಸಭೆ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಶ್ರೀ ಪತಂಜಲಿ ಯೋಗ ಶಿಕ್ಷಣ ಸೇವಾ ಸಮಿತಿ, ಮೈ ಭಾರತ್ ಕೇಂದ್ರ ಹಾಗೂ ಯೋಗ ನಿರತ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಘೋಷವಾಕ್ಯದೊಂದಿಗೆ 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಜೂ.21 ರಂದು ಬೆಳಿಗ್ಗೆ 6 ರಿಂದ 9 ಗಂಟೆಯವರೆಗೆ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಗ್ಗೆ 7 ರಿಂದ 7.45 ಗಂಟೆಯವರೆಗೆ ಸಾಮೂಹಿಕ ಯೋಗ ಪ್ರದರ್ಶನ ನಡೆಯಲಿದೆ. ಶಾಸಕ ಸಿ.ಪುಟ್ಟರಂಗಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿ, ಅಧ್ಯಕ್ಷತೆ ವಹಿಸುವರು. ಸಂಸದ ಸುನೀಲ್ ಬೋಸ್ ಅವರು ಘನ ಉಪಸ್ಥಿತಿ ವಹಿಸುವರು.



ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್. ಮಂಜುನಾಥ, ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪಿ.ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ. ಚಂದ್ರು, ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಪಶುಸಂಗೋಪನೆ, ಪಶು ವೈದ್ಯಕೀಯ ವಿಜ್ಞಾನ ಮತ್ತು ಮೀನುಗಾರಿಕೆ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿಗಳು ಮತ್ತು ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಆರ್.ವಿನೋತ್ ಪ್ರಿಯ, ಆಯುಷ್ ಇಲಾಖೆ ಮತ್ತು ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ರಿತ್ವಿಕ್ ರಂಜನಂ ಪಾಂಡೆ, ಆಯುಷ್ ಇಲಾಖೆ ಆಯುಕ್ತರಾದ ಡಾ. ಸುನೀಲ್ ಪವಾರ್, ಜಿಲ್ಲಾಧಿಕಾರಿ ಶ್ರೀರೂಪ, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜ್, ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ, ಜಿಲ್ಲಾ ಆಯುಷ್ ಅಧಿಕಾರಿ ಡಾ. ಬಿ.ಪಿ. ಸತೀಶ್ ಕುಮಾರ್ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ಯಾರನ್ನೂ ಸಚಿವ ಸ್ಥಾನ ಕೊಡಿ ಅಂತಾ ನಾನು ಕೇಳಿಲ್ಲ: ಹೆಚ್‌ಸಿಎಂ



ಮೈಸೂರು, ಜೂ.19(ಎಂಕೆ)– ಸಚಿವ ಸ್ಥಾನ ಕೊಡಿ ಎಂದು ಯಾರನ್ನೂ ನಾನು ಕೇಳಿಲ್ಲ. ಪಕ್ಷದ ಹೈಕಮಾಂಡ್ ತೀರ್ಮಾನದಂತೆ ಸಚಿವ ನಾಗಿದ್ದೆ. ಈಗಲೂ ಪಕ್ಷದ ಹೈಕಮಾಂಡ್ ಏನು ನಿರ್ಧಾರ ಮಾಡುತ್ತದೆಯೋ ಅದಕ್ಕೆ ಬದ್ಧ ನಾಗಿದ್ದೇನೆ ಎಂದು ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಸ್ಪಷ್ಟಪಡಿಸಿದರು.

ಮೈಸೂರಿನಲ್ಲಿ ಶುಕ್ರವಾರ ಸಚಿವ ಸ್ಥಾನ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಸಚಿವ ಸ್ಥಾನ ಸಿಗಲಿಲ್ಲ ಎಂದು ಬೇಸರಗೊಳ್ಳುವ ಪ್ರಶ್ನೆಯೇ ಇಲ್ಲ. ಪಕ್ಷದ ಹೈಕಮಾಂಡ್ ನಿರ್ಧಾರವೇ ಅಂತಿಮ. ಅಲ್ಲದೆ ಇನ್ನೂ ಸಂಪೂರ್ಣವಾಗಿ ಸಚಿವ ಸಂಪುಟ ವಿಸ್ತರಣೆ ಆಗಿಲ್ಲವಾದ್ದರಿಂದ ನಿರಾಶೆಗೆ ಒಳಗಾಗುವ ಅಗತ್ಯವಿಲ್ಲ ಎಂದರು.

ಹಾಗೆಯೇ ಸಚಿವ ಸ್ಥಾನ ಸಿಗದಿದ್ದಕ್ಕೆ ನನಗೇನು ಬೇಸರವಿಲ್ಲ. ನನ್ನ 41 ವರ್ಷಗಳ ರಾಜಕೀಯ ಇತಿಹಾಸದಲ್ಲಿ ಕೇಳಿ ಅಧಿಕಾರ ಪಡೆದಿಲ್ಲ. ಪಕ್ಷದ ಹೈಕಮಾಂಡ್ ಏನು ಹೇಳುತ್ತದೆಯೋ ಅದಕ್ಕೆ ಬದ್ಧನಾಗಿ ಪಕ್ಷ ಬಲಪಡಿಸುವುದು ನಮ್ಮ ಗುರಿ. ಸೂಕ್ತ ಸಂದರ್ಭದಲ್ಲಿ ಹೈಕಮಾಂಡ್ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳಲಿದೆ ಎಂದು ಹೇಳಿದರು.

ಮಂತ್ರಿಗಿರಿಗಿಂತ ದೊಡ್ಡದು: ಮಂತ್ರಿಗಿರಿಗಿಂತ ದೇಶದ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ರಕ್ಷಣೆಯೇ ಅತ್ಯಂತ ಮತ್ತು ದೊಡ್ಡ ಸೈದ್ಧಾಂತಿಕ ನಿಲುವಾಗಿದೆ. ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಬಲವರ್ಧನೆಗೆ ನಾವು ತೆಗೆದುಕೊಂಡ ತೀರ್ಮಾನಗಳನ್ನು ಬೆಂಬಲಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಲು ಬಯಸುತ್ತೇನೆ. ಅಲ್ಲದೆ ಅತ್ಯಂತ ಸಾಮಾಜಿಕ ಜವಾಬ್ದಾರಿಯುಳ್ಳ, ಸಂವಿಧಾನಕ್ಕೆ ಅಪಾರ ಗೌರವನ್ನಿಟ್ಟುಕೊಂಡು ಪ್ರಜಾಸತ್ತಾತ್ಮಕ ನಡವಳಿಕೆ ಮೂಲಕ ಜನರ ಮತ್ತು ರಾಜ್ಯದ ಅಭಿವೃದ್ಧಿಯಾಗಬೇಕೆಂಬ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಮಾಡುವ ದಲಿತ ಸಂಘಟನೆಗಳು ನನ್ನ ನಾಯಕತ್ವದ ಮೇಲೆ ವಿಶ್ವಾಸವಿಟ್ಟು ಬೆಂಬಲ ನೀಡಿರುವುದು ಸಂತೋಷ ತಂದಿದೆ ಎಂದು ತಿಳಿಸಿದರು.

ಮತದಾನದ ಹಕ್ಕು ಕಸಿಯುವ ಹುನ್ನಾರ: ದೇಶದಲ್ಲಿ ಎಸ್‌ಐಆರ್ ಮೂಲಕ ಪರೋಕ್ಷವಾಗಿ ಸಿಎಎ ಮತ್ತು ಎನ್‌ಆರ್‌ಸಿ ಜಾರಿಗೊಳಿಸಿ ಮತದಾನದ ಹಕ್ಕನ್ನು ಕಸಿದು ಮತ್ತೆ ಗುಲಾಮಗಿರಿಯತ್ತ ನೂಕಲು ಚುನಾವಣಾ ಆಯೋಗದ ಮೂಲಕ ಬಿಜೆಪಿ ಹುನ್ನಾರ ನಡೆಸುತ್ತಿದೆ. ಇದರ ವಿರುದ್ಧ ನಡೆಸುವ ಹೋರಾಟ ಮಂತ್ರಿಗಿರಿಯನ್ನು ಮೀರಿದ್ದಾಗಿದೆ ಎಂದರು.


ಇಬ್ಬರೂ ನಮ್ಮ ಮಕ್ಕಳೇ..!

ಡಾ.ಯತೀಂದ್ರ ಮಂತ್ರಿಯಾಗಿದ್ದರ ಬಗ್ಗೆ ವೈಯಕ್ತಿಕವಾಗಿ ನನಗೆ ಸಂತೋಷವಾಗಿದೆ. ನನಗೆ ಯತೀಂದ್ರ ಬೇರೆಯಲ್ಲ. ಸುನೀಲ್ ಬೋಸ್ ಬೇರೆಯಲ್ಲ. ಇಬ್ಬರೂ ನಮ್ಮ ಮಕ್ಕಳೇ. ಯತೀಂದ್ರಗಾಗಿ ನನಗೆ ಸಚಿವ ಸ್ಥಾನ ಸಿಕ್ಕಿಲ್ಲ ಅನ್ನೋದು ತಪ್ಪು.

ನಾನು, ಸಿದ್ದರಾಮಯ್ಯ ಜೊತೆಯಾಗಿಯೇ ಇದ್ದೇವೆ. ಒಟ್ಟಾಗಿ ಹೋರಾಟ ಮಾಡಿಕೊಂಡು ಬಂದವರು. ಈಗಲೂ, ಮುಂದೆಯೂ ಒಟ್ಟಾಗಿ ಇರುತ್ತೇವೆ. ಸಿದ್ದರಾಮಯ್ಯ ಆಪ್ತ ಬಣದಲ್ಲಿ ಇರೋದಕ್ಕೆ ನಾವೆಲ್ಲ ಗಟ್ಟಿಯಾಗಿ ಇರೋದು. ಸಿದ್ದರಾಮಯ್ಯ ಮತ್ತು ನನಗೆ ಬೆಂಬಲ ನೀಡಿದ ಜನರ ಪರವಾಗಿ ಮತ್ತು ನಾಡಿನ ಅಭಿವೃದ್ಧಿಗಾಗಿ ಯತೀಂದ್ರ ಮತ್ತು ಸುನೀಲ್ ಬೋಸ್ ಇಬ್ಬರೂ ಕೆಲಸ ಮಾಡುತ್ತಾರೆ ಎಂಬ ವಿಶ್ವಾಸವಿದೆ.

– ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಸಚಿವ

ಬಿಜೆಪಿ ಕಚೇರಿಗೆ ರಘು ಕೌಟಿಲ್ಯ ಭೇಟಿ



ಮೈಸೂರು, ಜೂ.19(ಬಿಎಲ್‌ಯು) ವಿಧಾನ ಪರಿಷತ್‌ಗೆ ಆಯ್ಕೆಯಾದ ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಅವರು ನಾಳೆ (ಜೂನ್ 20) ಮೈಸೂರಿನ ಬಿಜೆಪಿ ಕಚೇರಿಗೆ ಭೇಟಿ ನೀಡಲಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೂಲೆ ನಿವೇಶನ MDA
50x30 ಶ್ರೀರಾಂಪುರ 3ನೇ ಹಂತ Survey No 80/12ರಲ್ಲಿ ನಿರ್ಮಿಸಿರುವ ನಿವೇಶನ
Broker Excuse
8892749320 9845779020

HOUSE FOR RENT
ಒಂದು ಹಾಲ್, ಎರಡು ಬೆಡ್ ರೂಂ, ಕಿಚನ್, ಗೀಝರ್, ಸೋಲಾರ್ ವ್ಯವಸ್ಥೆ ಇರುತ್ತದೆ.
B.MC Nagar, Metagalli, Mysore
8368448384 9148688368

ಟೈಲರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ:
Mob: 6364734914

ಮನೆ ಭೋಗ್ಯಕ್ಕೆ
ಬಸವೇಶ್ವರ ರಸ್ತೆ, 6ನೇ ಕ್ರಾಸ್‌ನಲ್ಲಿರುವ 30x48ರಲ್ಲಿ 3 BHK, ಮನೆ, ಅಟ್ಯಾಚ್‌ಬಾತ್ ರೂಮ್, ವಾಸ್ತು, ಉತ್ತರದಿಕ್ಕಿನ ರಸ್ತೆ ಬಾಗಿಲು, 2ನೇ ಮಹಡಿ(ಸಸ್ಯಹಾರಿಗಳಿಗೆ ಮಾತ್ರ)
94483-69421

ಸೈಟುಗಳು ಬೇಕಾಗಿದೆ
ಮೈಸೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿ ಸೈಟುಗಳು ಮಾರುವವರು ಸಂಪರ್ಕಿಸಿ,
7899272101
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

ಬೇಕಾಗಿದ್ದಾರೆ
ಮೈಸೂರಿನ ಇಲವಾಲದಲ್ಲಿ 3000 ಚದರ ಅಡಿ ವಿಸ್ತೀರ್ಣದ ಶೆಡ್ ಬಾಡಿಗೆಗೆ ಲಭ್ಯವಿದೆ. ಸಂಪರ್ಕಿಸಿ
7899381450

ಬೇಕಾಗಿದ್ದಾರೆ
ಅನುಭವವುಳ್ಳ ನಾನ್‌ವೆಜ್ ಅಡಿಗೆ ಭಟ್ಟರು ಬೇಕಾಗಿದ್ದಾರೆ (ಮೈಸೂರು) ಸಂಪರ್ಕಿಸಿ
9449738155 9945321020

ಬೋಳು ತಲೆಯ ಸಮಸ್ಯೆಯೇ?



SMART HAIR FIXING
574, 9th Cross, Anikethana Road, kuvempunagar, Mysuru
MYSURU 9591311161 MANGALORE 9901910161



ಸ್ಕೂಲ್, ಕಾಲೇಜ್ ಯೂನಿಫಾರಂ
ಬ್ಲೇಜರ್ ರೂ.1300
ಲ್ಯಾಬ್ ಏಪ್ರಾನ್ ರೂ. 300
ಭಾವಸಾರ್ ಶ್ರೀಗಣೇಶ್
ಅಗ್ರಹಾರ, ಬಸವೇಶ್ವರ ರಸ್ತೆ 5ನೇ ಕ್ರಾಸ್, ಮೈಸೂರು

ಸೈಟು ಮಾರಾಟಕ್ಕಿದೆ
30x40 - ಪೂರ್ವ ದಿಕ್ಕು * 30x40 - ಉತ್ತರ ದಿಕ್ಕು
30x40 - ಉತ್ತರ ದಿಕ್ಕು * 30x40 - ಪಶ್ಚಿಮ ದಿಕ್ಕು
30x50 - ಉತ್ತರ ದಿಕ್ಕು * 40x60 - ಪೂರ್ವ ದಿಕ್ಕು
40x70 - ಪೂರ್ವ ದಿಕ್ಕು ರಿಂಗ್ ರೋಡ್ ಹತ್ತಿರ
30x40 - ಉತ್ತರ ದಿಕ್ಕು ಬನ್ನೂರು ರಸ್ತೆ ಕಡೆ.
Mob: 9900372792

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

Commercial Building for Sale
2.5 yrs old, 1800 sqft ,Single Floor, Commercial Building,53x40, W/S Corner,50 ft Road at NR Mohalla, Rajputh Road, Mysore, Price - 3 Cr
(Close to Fountain Circle)
8660105902

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

ಬೇಕಾಗಿದ್ದಾರೆ
ಮೈಸೂರಿನ ದಟ್ಟಗಳ್ಳಿಯಲ್ಲಿರುವ ಮನೆಗೆ ಗಾರ್ಡನರ್ ಕೆಲಸಕ್ಕೆ ಮತ್ತು ಅಡಿಕೆತೋಟದಲ್ಲಿ ಕೆಲಸ ಮಾಡಲು ಅನುಭವಸ್ಥ ಒಂದು ಕುಟುಂಬ ಬೇಕಾಗಿದೆ ಉತ್ತಮ ಸಂಬಳ ನೀಡಲಾಗುವುದು.
ಸಂಪರ್ಕಿಸಿ: 81234 50066

2000 sq.feet industrial shed for rent in Hootagalli Industrial Area, Mysore. Contact:
Mob: 9900747692

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ಜಮೀನು ಮಾರಾಟಕ್ಕಿದೆ
ಹೆಚ್.ಡಿ.ಕೋಟೆ ತಾಲ್ಲೂಕು, ಕೊಲ್ಲೇಗೌಡನಹಳ್ಳಿ ಸರ್ಕಲ್ ಹತ್ತಿರ ಮೈಸೂರು – ಮಾನಂದವಾಡಿ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇರುವ 1 ಎಕರೆ ಕೃಷಿ ಭೂಮಿ ಮಾರಾಟಕ್ಕಿದೆ ದಲ್ಲಾಳಿಗಳಿಗೆ ಅವಕಾಶವಿಲ್ಲ ಆಸಕ್ತರು ನೇರವಾಗಿ ಸಂಪರ್ಕಿಸಿ
ಮೊ. : 9980907989, 9449885857

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654

ಸೈಟು ಮಾರಾಟಕ್ಕಿದೆ
30x50 W/F ಅಳತೆಯ 45 ಲಕ್ಷ ರೂ. ಭೂಮಿಕ ಪಿ.ಆರ್. ವ್ಯಾಲಿ, ಹುಣಸೂರು ಮೇನ್ ರೋಡ್, ಇಲವಾಲ ಬಸ್ ನಿಲ್ದಾಣದಿಂದ ಕೇವಲ 3 ಕಿ.ಮೀ.
Mob: 9845017347

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವಾಜಮಂಗಲ / ವರುಣ ಕ್ಯಾಲಿಬರ್ / ಜೆಎಸ್‌ಎಸ್ 3ನೇ ಹಂತ / ವರುಣ ಬಸವೇಶ್ವರ / ನಿರ್ಮಾಣ್ ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.
9686071750

SITE FOR SALE
30x50 S/F Shanthaveri Gopalgowda Nagara, Mysore
Direct Register
Mob: 9972958878

ಸೈಟು / ಮನೆ ಮಾರಾಟಕ್ಕಿದೆ
40x40 N/W Corner ಕಂದಾಯನಗರ. 40x40 - East Old R.T. Nagar. 40x60 - West ಪರಶುರಾಮನಗರ. ಭುಗತಗಳ್ಳಿ, ಬನ್ನೂರು ರಸ್ತೆ 30x40 ಕಬಿನಿ ಲೇಔಟ್, ಶ್ರೀರಾಂಪುರ. 20x30, 3 BHK Duplex MUDA site ಲಲಿತಾದ್ರಿನಗರ 30x45 Site, N/W corner KBL Layout, ವರುಣಾಯಾಂದಳ್ಳಿ,
9448938989, 7892035789

CHANGE OF NAME
I, SHRIKANTHA .S, Residing at No. 1022/A, 1st Floor, 9th Main, 3rd Stage, Gokulam, Mysuru-570002, have changed my name from SRIKANTHA S TO SHRIKANTHA S on my own will sworn in before Notary K.B. Nagesha, Mysore vide affidavit dtd 19-6-2026, Hence forth in all my records, deeds and in my future communication i will be called and Known as SHRIKANTHA S
Sd/- SHRIKANTHA S

ದರ್ಶನ್ ಮ್ಯಾಟ್ರಿ ಮೋನಿಯಲ್
ಚಿನ್ನದ ಕೆಲಸ ಮಾಡುತ್ತಿರುವ ಮೊದಲಿಯರ್ 43 ವರ್ಷದ ವರನಿಗೆ ವಧು ಹಾಗೂ ಭಾವುಸಾರ್ ಕ್ಷತ್ರಿಯ 35 ವರ್ಷದ ಮರಾಠ ವರನಿಗೆ 2ನೇ ಮದುವೆಗೆ ವಧು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ
9739969830 9972355161

ಮ್ಯಾನೇಜರ್ ಬೇಕಾಗಿದ್ದಾರೆ
ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ. ಪಂಚವಳ್ಳಿ ಗ್ರಾಮದ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್‌ನಲ್ಲಿ ಮ್ಯಾನೇಜರ್ ಹುದ್ದೆ ಖಾಲಿಯಿದ್ದು ಕೆಲಸ ಮಾಡಲು ಆಸಕ್ತಿಯುಳ್ಳವರು, ತಕ್ಷಣ ಸಂಪರ್ಕಿಸಿ
9916891977

ಬಿರ್ಲಾ ಓಪಸ್ ಪೇಂಟ್‌ನ (c/o) ಹೆರಿಟೇಜ್ ಅಂಡ್ ಕೋ ಕೇರ್
ಗೋಡೌನ್‌ನಲ್ಲಿ ಕೆಲಸ ಮಾಡಲು ಆಸಕ್ತ ಹುಡುಗರು ಬೇಕಾಗಿದ್ದಾರೆ ಲೋಡರ್ ಹಾಗೂ ಅನ್ಲೋಡರ್‌ಗಳು ಬೇಕಾಗಿದ್ದಾರೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9113956899 9538520013

ಸೈಟು ಮಾರಾಟಕ್ಕಿದೆ
20x30 N/W ಕಾರ್ನರ್ MUDA ಅಪ್ರೂಡ್ ಸೈಟು ಮಾರಾಟಕ್ಕಿದೆ. 18 ಲಕ್ಷಗಳು (Opp Park) ಜಯಪುರದ ಹತ್ತಿರ, ಮೈಸೂರು
9731401898

ಬೇಕಾಗಿದ್ದಾರೆ
ಮೈಸೂರಿನ ರಾಜರಾಜೇಶ್ವರಿ ನಗರದಲ್ಲಿರುವ ಹರ್ವಿಕ್ ಫರ್ನಿಚರ್ ಶೋರೂಂನಲ್ಲಿ ಕೆಲಸ ಮಾಡಲು ಸೇಲ್ಸ್ ಎಕ್ಸಿಕ್ಯೂಟಿವ್ ಮತ್ತು ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ
9980556642

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ, ಪ್ರತಿದಿನ ವಧುವರರ ನೇರ ಸಂದರ್ಶನವಿರುತ್ತದೆ.
9448229184 7899625268

ವರ ಬೇಕಾಗಿದ್ದಾರೆ
46 ವರ್ಷದ ಹಿಂದೂ ಸಸ್ಯಹಾರಿ ಒಬ್ಬ ಮಗ ಇರುವ ವಿದುವೆಗೆ ತೋಟ ಗದ್ದೆ ಹೊಲ ಹೊಂದಿರುವಂತಹ ಕೃಷಿಕ ವರ ಬೇಕಾಗಿದ್ದಾರೆ. ಒಕ್ಕಲಿಗರು ಗೌಡರು ಲಿಂಗಾಯಿತರು, ವಿಶ್ವಕರ್ಮ ಆರ್ಯವೈಶ್ಯ ಬ್ರಾಹ್ಮಣ ಜಾತಿಯವರಿಗೆ ಪ್ರಪ್ರಥಮ ಆದ್ಯತೆ. (ವಯಸ್ಸು ಮತ್ತು ಜಾತಿ ಅಭ್ಯಂತರ ಇಲ್ಲ)
9483287183

ಕೊರ್ ಕಟಿಂಗ್, ಫ್ಲಾಮಿಂಗ್ ವರ್ಕ್, ಗ್ಯಾಸ್ ಲೈನ್, ಸ್ಲಾಬ್ ವಾಲ್ ಕಟಿಂಗ್
6362150462, 7795749881

ಸುವರ್ಣಾವಕಾಶ
ಪ್ರಯೋಜನಗಳು
ಶೂನ್ಯ ಬಂಡವಾಳ
ಮನೆ/ ಕಛೇರಿಯಿಂದಲೇ ಕೆಲಸ
ನಿಮ್ಮ ಸಮಯಕ್ಕೆ ತಕ್ಕಂತೆ ಕೆಲಸ
ಪಿಎಫ್ ಹಾಗೂ ವೈದ್ಯಕೀಯ ಲಾಭ
ವಿದೇಶ ಪ್ರಯಾಣ
30 ವರ್ಷ ಮೇಲ್ಪಟ್ಟವರಬೇಕು ಹಾಗೂ ಎಸ್‌ಎಸ್‌ಎಲ್‌ಸಿ ಪಾಸಾಗಿರಬೇಕು.
ಸಂಪರ್ಕಿಸಿ
94491 52797 / 86607 64095

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
6362150462, 7795749881

ಸೈಟ್ ಮಾರಾಟಕ್ಕಿದೆ
ಪೊಲೀಸ್ ಲೇಔಟ್ 2nd stage ಪಕ್ಕ 30x40 East 60 lakh 30x40 East 40 lakh nego, T. Narsasipura Road
8971936090

ಜಮೀನು ಮಾರಾಟಕ್ಕಿದೆ
1 ಎಕರೆ ಫೆನ್ಸಿಂಗ್ ವಿತ್ ಗೇಟ್ 40 ಲಕ್ಷಗಳು(ಜನರಲ್ ಪ್ರಾಪರ್ಟಿ), ಗುಂಡ್ಲುಪೇಟೆ K.S.R.T.C ಬಸ್ ಸ್ಟ್ಯಾಂಡ್‌ನಿಂದ 7 K.M.
9731401898

SITE FOR SALE
40x60 North Suvarna Nagar
Call: 98802 73834

SITE FOR SALE
40x60 Judicial Layout Near Christ Public School
Call: 98802 73834

SITE FOR SALE
40x60 Roopa Nagar
Mob: 97400 88990

SITE FOR SALE
30x50 E/F SITE NEAR CFTRI LAYOUT.
8884133677

SITE FOR SALE
40x60 MUDA Site, Near Ring Road, Vijayanagar 4th Stage.
Mob: 91488 75800

For sale ರಿಂಗ್ ರಸ್ತೆ ಸಮೀಪ
ವಿಜಯನಗರ 30x40 - 1.2 Cr.
ವಸಂತನಗರ 40x75 - 1.24 Cr.
ಜೆ.ಪಿ.ನಗರ 50x80 - 2.5 Cr. / 40x60 - 1.12 Cr.
ದಟ್ಟಗಳ್ಳಿ–ರಾಯಲ್ ಓಕ್ ಸಿಗ್ನಲ್ 1.15 Cr.
10–20 ಗುಂಟೆ ಲ್ಯಾಂಡ್ 6–8 ಲಕ್ಷ ಗುಂಟೆಗೆ
(ಸಿಟಿಗೆ ಕೇವಲ 12 ರಿಂದ 15 ಕಿ.ಮೀ)
ವಿಜಯನಗರ, ಬಸವನಳ್ಳಿ 30x40 - 64 ಲಕ್ಷ.
Sale 4 BHK – ಬೋಗಾದಿ & ಪೊಲೀಸ್ ಲೇಔಟ್‌ನಲ್ಲಿ
Call: 8123075038
BROKERS EXCUSE

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benefits: Fixed Salary + PF+ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು: ಫೋಟೋ, ಪಾನ್ ಕಾರ್ಡ್, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ ಸ್ಥಳ: GURU RESIDENCY, Near Metropole Circle, Mysore. Time 11 AM and Date 23/6/2026 (Followed by Lunch)
9448376423 9886883858

MUDA APPROVED
SITE FOR SALE
30x40 East facing Nypunya School RT Nagar
Call 9035460999

MUDA LAYOUT
NEW HOUSE FOR SALE
30x40 N/F Gopal Gowda Nagar
Call 9035460999

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

HOUSE FOR RENT
30x40, 2 BHK independent House Dattagalli 3rd stage
8150970714



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ನಿವೇಶನಗಳು ಮಾರಾಟಕ್ಕಿವೆ
ಟಿ.ನರಸೀಪುರದಲ್ಲಿ ಪುರಸಭೆ ವ್ಯಾಪ್ತಿಯ ಡಿ.ಟಿ.ಸಿ.ಪಿ ಅನುಮೋದನೆಯಾಗಿರುವ ಎಲ್ಲಾ ಅಳತೆಯ ನಿವೇಶನಗಳು ಮಾರಾಟಕ್ಕಿವೆ.
8867243636 8867283636

ಅಮೃತಧಾರೆ ವೃದ್ಧಾಶ್ರಮ
(ಸಸ್ಯಾಹಾರಿಗಳಿಗೆ ಮಾತ್ರ)
ವಯಸ್ಸಾದ, ಹಾಸಿಗೆ ಹಿಡಿದ ಮತ್ತು ಪಾರ್ಶ್ವವಾಯು ಪೀಡಿತ ವಯೋವೃದ್ಧರನ್ನು ಸುಸಜ್ಜಿತವಾದ ಸಸ್ಯಾಹಾರಿ ಊಟ, ವಸತಿ, ವೈದ್ಯಕೀಯ ತಪಾಸಣೆ ಹಾಗೂ ನರ್ಸಿಂಗ್ ಸೌಲಭ್ಯಗಳೊಂದಿಗೆ ಮನೆಯಂತೆಯೇ ನೋಡಿಕೊಳ್ಳಲಾಗುವುದು. ಸಂಪರ್ಕಿಸಿ:
Mob: 7892317304

30x40
Site and Duplex & Individual Houses in Srirampura Close to Vivekanda Circle
Sri Vishnu Properties
Mob: 9840728571

SITE FOR SALE
East South Corner(970 Sqft), R.K. Layout(Opp to Ramabai Nagar, Near Ring road, 30x40 W/F, Jnanaganga House building, Dhanagalli, B Block, Near Kote Road,
9845411228

TURN YOUR EXPERIENCE TO OPPORTUNITY
Men and Women aged 35+ are invited to join a reputed bank as financial advisers. build a rewarding Career, Enjoy flexible working hours and help families achive thier finanical goals while serving as attractive income. for details contact:
8861918556

ಮನೆ ಮಾರಾಟಕ್ಕಿದೆ
ವಿವೇಕಾನಂದ ಸರ್ಕಲ್, 30x40 ಮನೆ, 20x30 ಮನೆ 60x40 ಮನೆ, 50x30 ಮನೆ
9008711654

ಬೇಕಾಗಿದ್ದಾರೆ
ಮೈಸೂರಿನ ಕಂಪನಿ, ಹಾಗೂ ಆಫೀಸ್ ಮತ್ತು ಮನೆಯಿಂದಲೇ ಮಾಡುವ ಕೆಲಸಕ್ಕೆ ಬೇಕಾಗಿದ್ದಾರೆ, ವಯಸ್ಸಿನ ಮಿತಿ ಇಲ್ಲ, ಪ್ಯಾಕಿಂಗ್ ಪಿಕ್ಕಿಂಗ್, ಟೆಲಿ ಕಾಲಿಂಗ್, ಅಪ್ಲಿಕೇಶನ್ ಫೀಲಿಂಗ್, ಆಸಕ್ತಿ ಉಳ್ಳವರು ಕರೆ ಮಾಡಿ
6361167510 8050567478

ನಿವೇಶನ ಮಾರಾಟಕ್ಕಿದೆ
ನಂ.9, 30'x50' ಅಳತೆಯ ಉತ್ತರದಿಕ್ಕು ಇರುವ ಖಾಲಿ ನಿವೇಶನ ಮಾರಾಟಕ್ಕಿದೆ. ಮೈಸೂರು–ಬನ್ನೂರು ಮುಖ್ಯ ರಸ್ತೆಯಲ್ಲಿ ದೇವೇಗೌಡ ಸರ್ಕಲ್‌ನಿಂದ 7 ಕಿ.ಮೀ ನಲ್ಲಿ ಪ್ರಕಾಶ್‌ನಗರ. ಸಂಪರ್ಕಿಸಿ :
9448075383

Cashier cum Driver ಕೆಲಸಕ್ಕೆ ಬೇಕಾಗಿದ್ದಾರೆ
Mob: 7204464646

ಕಳೆದಿದೆ
ಜುಬೇದಾ ನಂ.19 ಇಡಬ್ಲ್ಯೂಎಸ್, ಸಿಐಟಿಬಿ ಕಾಲೋನಿ ಉದಯಗಿರಿ, ಮೈಸೂರು. ಇವರ ಮನೆ ನಂ.19ರ ಮಹದೇವಪುರ ಬಡಾವಣೆ ಸಿಐಟಿಬಿ ಕಾಲೋನಿ, ಉದಯಗಿರಿ, ಮೈಸೂರು. ಈ ಸ್ವತ್ತಿನ ಮೂಲ ದಾಖಲಾತಿ ಗಳಾದ ಸ್ವತ್ತಿನ ಮಂಜೂರಾತಿ ಪತ್ರ, ಸ್ವಾಧೀನ ಪತ್ರ, ಗುತ್ತಿಗೆ ಕರಾರು ಪತ್ರ ಕಳೆದಿದೆ. ಸಿಕ್ಕವರು ಸಂಪರ್ಕಿಸಿ–
8217215391

MUDA / DTCP SITES
ತಕ್ಷಣ ಮನೆ ಕಟ್ಟಲು ನಮ್ಮ ಲೇಔಟ್‌ನಲ್ಲಿ
ಟಿ.ಎನ್. ಪುರ ಹೈವೆ ಚಿಕ್ಕಳ್ಳಿ ಹತ್ತಿರ 22.3 ಲಕ್ಷ.
ವಸಂತನಗರ ಪೊಲೀಸ್ ಲೇಔಟ್ ಪಕ್ಕ 32 ಲಕ್ಷ
ಮಾನಸಿ ನಗರ ಪಕ್ಕ ವಿದ್ಯಾವಿಕಾಸ್ 34 ಲಕ್ಷ
ಬೋಗಾದಿ ಟ್ರೆಂಡ್ಸ್ ಫ್ಲಾಟ್ ಹತ್ತಿರ 30 ಲಕ್ಷ
ವಿಜಯನಗರ 4ನೇ ಸ್ಟೇಜ್ ಪಕ್ಕ 64 ಲಕ್ಷ
ಜೆಪಿ ನಗರ ರಿಂಗ್ ರಸ್ತೆ ಹತ್ತಿರ 24 ಲಕ್ಷ.
Mob: 8123075038
Brokers Excuse. 0% Commission

ಉದ್ಯೋಗಾವಕಾಶ
ಮೈಸೂರಿನ ಹೆಸರಾಂತ ವೈದ್ಯಕೀಯ ಸೇವಾ ಸಂಸ್ಥೆಯಲ್ಲಿ ಹೋಂ ನರ್ಸಿಂಗ್ ಕೆಲಸಕ್ಕೆ ಯುವತಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ. 7th, SSLC, PUC, Degree, ANM, and GNM (Pass or Fail). ವೇತನ: 15000/– ರಿಂದ 20,000/– (ಉಚಿತ ತರಬೇತಿ, ಊಟ, ವಸತಿಯೊಂದಿಗೆ)
ಸಂಪರ್ಕಿಸಿ : 9741637711, 9606081490, 9606514441

ಮನೆಗಳು ಬಾಡಿಗೆಗೆ/ ಭೋಗ್ಯ/ ಮಾರಾಟಕ್ಕೆ ಲಭ್ಯವಿದೆ
30x50 ಸೈಜಿನ ಇಂಡಿಪೆಂಡೆಂಟ್ 2 ಬೆಡ್‌ರೂಂ ಅಟ್ಯಾಚ್ ಬಾತ್, ಓಪನ್ ಕಿಚನ್, ವಾರ್ಡ್ರೋಬ್, ಪೂಜ ರೂಂ, ವಾಷಿಂಗ್ ಏರಿಯಾ, ಕಾರ್ ಪಾರ್ಕಿಂಗ್, 24 ಗಂಟೆ ನೀರಿನ ಸೌಲಭ್ಯ, ಮನೆಯ ಸುತ್ತಲು ಕಾಂಪೌಂಡ್ ಇರುವ ಮನೆ, ಭೋಗ್ಯಕ್ಕೆ ಲಭ್ಯವಿದೆ. ಮತ್ತು ನಮ್ಮಲ್ಲಿ ಸಿಂಗಲ್ 2/3/4 ಬೆಡ್‌ರೂಂಗಳಿರುವ ಮನೆಗಳು ಸಿಂಗಲ್ ರೂಂ, ಅಟ್ಯಾಚ್ ಇರುವ ಮನೆಗಳು ಲಭ್ಯವಿರುತ್ತವೆ. ನಮ್ಮಲ್ಲಿ ವಾಣಿಜ್ಯ ಮಳಿಗೆಗಳು ವ್ಯಾಪಾರಕ್ಕೆ ಸೂಕ್ತವಾದ ಸ್ಥಳ ಲಭ್ಯವಿದೆ. ಬೆಲೆ – 30 ರಿಂದ 65 ಲಕ್ಷದವರೆಗೆ ಮನೆಗಳು ಮಾರಾಟಕ್ಕೆ ಲಭ್ಯವಿದೆ. ಹತ್ತಿರ : ಬನ್ನಿಮಂಟಪ, ಹೈವೇ ಸರ್ಕಲ್, ಸುಭಾಷ್‌ನಗರ, ಎನ್.ಆರ್. ಮೊಹಲ್ಲಾ, ಜೆಎಸ್‌ಎಸ್ ಡೆಂಟಲ್ ಕಾಲೇಜ್, ಶಿಲಕ್‌ನಗರ, ಬೆಲವತ್ತ, ಮಂಡಿ, ಹಳೇ ಕೆಸರೆ, ಬಿ.ಎಂ. ಶ್ರೀ ನಗರ. ಸಂಪರ್ಕಿಸಿ.
8553501505 / 9611240336

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

ಚಾಮುಂಡೇಶ್ವರಿ ಮ್ಯಾರೇಜ್ ಬ್ಯೂರೋ
ಒಕ್ಕಲಿಗ, ಕುರುಬ, ಲಿಂಗಾಯಿತ, ಬ್ರಾಹ್ಮಣ, ನಾಯಕ, ದೈವಾಂಗ, SC, ST, ವಿಶ್ವಕರ್ಮ ಎಲ್ಲಾ ಜಾತಿಯ ವಧು–ವರರು ಹಾಗೂ ವಿಧುರ–ವಿಧುವೆಯರು ವಿಚ್ಛೇದಿತರು ನೇರವಾಗಿ ಸಂಪರ್ಕಿಸಿ, II ಮ್ಯಾರೇಜ್ ಒಕ್ಕಲಿಗ ವಧುವಿಗೆ ವರಬೇಕು. (Cast No bar(50 to 60) ಒಳಗೆ ಇರಬೇಕು.
8951241381

HOUSE FOR RENT
Residential or Commercial 50x80 (3 BHK) Kuvempunagar, Mysore
Mob: 9880379895

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಶುದ್ಧ ಸಸ್ಯಾಹಾರಿ ಹೋಟೆಲ್‌ಗೆ ಸಿಬ್ಬಂದಿ ಬೇಕಾಗಿದ್ದಾರೆ. • ಕ್ಲೀನಿಂಗ್ / ವಾಷಿಂಗ್– 2 • ಕೌಂಟರ್ & ಫುಡ್ ಪ್ಯಾಕಿಂಗ್ • ವೇಟರ್ / ಸಪ್ಲೈಯರ್ • ದೋಸೆ ಭಟ್ರು ಉತ್ತಮ ಸಂಬಳ, ESI ಹಾಗೂ ವಸತಿ ಸೌಲಭ್ಯ. ಅನುಭವಿಗಳಿಗೆ ಆದ್ಯತೆ.
7338392631 8884066166

ಸೈಟ್ ಮಾರಾಟಕ್ಕಿದೆ
30x40 11 "A" ಖಾತಾ ಸೊಸೈಟಿ ಸೈಟು ಮಾರಾಟಕ್ಕಿದೆ 20 ಲಕ್ಷಗಳು, ನಂಜುಂಡೇಶ್ವರನಗರ, ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು
9742198093

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಮಾರ್ಕೆಟಿಂಗ್ & ಫೀಲ್ಡ್ ಆಫೀಸರ್ ಸೆಕ್ಯೂರಿಟಿ ಸೂಪರ್‌ವೈಸರ್ & ಸೆಕ್ಯೂರಿಟಿ ಗಾರ್ಡ್, ಸಂಬಳ 15000 ರಿಂದ 24000, ವಯೋಮಿತಿ 20 ರಿಂದ 50, ಊಟ, ವಸತಿ, ESI, PF, W/o ಇರುತ್ತದೆ. ಮೊದಲು ಬಂದವರಿಗೆ ಆದ್ಯತೆ.
Contact : 7259624713 / 6364850322 / 9036825939

ಮೈಸೂರು ಮಿತ್ರ 47
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಜಮೀರ್‌ರನ್ನು ಡಿಸಿಎಂ ಮಾಡಲು ಒತ್ತಾಯಿಸಿ ಪ್ರತಿಭಟನೆ



ಮಾಜಿ ಸಚಿವ ಜಮೀರ್‌ಗೆ ಡಿಸಿಎಂ ಸ್ಥಾನ ನೀಡುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ಭೇರ್ಯ, ಜೂ.19– ಮಾಜಿ ಸಚಿವ ಬಿ.ಝೆಡ್.ಜಮೀರ್ ಅಹ್ಮದ್ ಖಾನ್ ಅವರನ್ನು ಉಪ ಮುಖ್ಯಮಂತ್ರಿ ಮಾಡುವಂತೆ ಒತ್ತಾಯಿಸಿ ಮುಸ್ಲಿಂ ಸಮುದಾಯದ ಮುಖಂಡರು ಪಟ್ಟಣದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಸಾಲಿಗ್ರಾಮ ತಾಲೂಕಿನ ಭೇರ್ಯ ಗ್ರಾಮದ ಜಾಮೀಯ ಮಸೀದಿಯಲ್ಲಿ ಶುಕ್ರವಾರ ಪ್ರಾರ್ಥನೆ ಸಲ್ಲಿಸಿದ ಬಳಿಕ ಮೆರವಣಿಗೆ ಮೂಲಕ ಹಾಸನ–ಮೈಸೂರು ರಸ್ತೆಯ ಗಾಂಧಿ ವೃತ್ತದಲ್ಲಿ ಜಮಾಯಿಸಿ ಮಾಜಿ ಸಚಿವ ಬಿ.ಝೆಡ್. ಜಮೀರ್ ಅಹ್ಮದ್ ಖಾನ್ ಅವರನ್ನು ಉಪ ಮುಖ್ಯಮಂತ್ರಿ ಮಾಡುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿ ಸರ್ಕಾರವನ್ನು ಒತ್ತಾಯಿಸಿದರು.

ಮೈಸೂರು ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷ ಅಜೀಜುಲ್ಲಾ ಅಜ್ಜು ಮಾತನಾಡಿ, ಜಾತಿ, ಪಕ್ಷ ಭೇದ ಮರೆತು ಕೆಲಸ ಮಾಡುವ ಏಕೈಕ ನಾಯಕ ಬಿ.ಝೆಡ್. ಜಮೀರ್ ಅಹ್ಮದ್ ಖಾನ್. ಹಗಲು ಹಾಗೂ ರಾತ್ರಿ ಎನ್ನದೇ ಕಾಂಗ್ರೆಸ್ ಪಕ್ಷಕ್ಕಾಗಿ ದುಡಿದ ಅವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಲು ಕಡೆಗಣಿಸಿರುವುದು ರಾಜ್ಯದ ಅಲ್ಪಸಂಖ್ಯಾತ ಸಮುದಾಯಕ್ಕೆ ನೋವಾಗಿದೆ ಎಂದರು.

ರಾಜ್ಯ ಹಜ್ ಕಮಿಟಿ ಸದಸ್ಯ ಸಮಿ ಅಜ್ಜು ಮಾತನಾಡಿ, ಈಗಾಗಲೇ ರಾಜ್ಯದಲ್ಲಿ ಮಾಜಿ ಸಚಿವ ಬಿ.ಝೆಡ್.ಜಮೀರ್ ಅಹ್ಮದ್ ಖಾನ್ ಅಭಿಮಾನಿಗಳು ಎಲ್ಲಾ ಜಿಲ್ಲೆ, ತಾಲೂಕುಗಳಲ್ಲಿ ಜಮೀರ್ ಅವರಿಗೆ ಡಿಸಿಎಂ ಸ್ಥಾನ ನೀಡುವಂತೆ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ. ಕಾಂಗ್ರೆಸ್ ಪಕ್ಷ ಅಲ್ಪ ಸಂಖ್ಯಾತರಾದ ನಮ್ಮನ್ನು ಕೇವಲ ವೋಟ್ ಬ್ಯಾಂಕ್‌ಗಾಗಿ ಬಳಸಿಕೊಳ್ಳುತ್ತಿದೆ. ಅಲ್ಲದೇ ಪಕ್ಷಕ್ಕಾಗಿ ದುಡಿಸಿಕೊಂಡು ಕಡೆಗಣಿಸುವುದು ಬೇಸರದ ಸಂಗತಿ. ಹೀಗಾಗಿ ಮಾಜಿ ಸಚಿವ ಬಿ.ಝೆಡ್.ಜಮೀರ್ ಅಹ್ಮದ್ ಖಾನ್ ಅವರಿಗೆ ಸಚಿವ ಸ್ಥಾನದೊಂದಿಗೆ ಅವರನ್ನು ಉಪ ಮುಖ್ಯಮಂತ್ರಿ ಮಾಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಹಜ್ ಕಮಿಟಿ ಸದಸ್ಯ ಜಿಲ್ಲಾ ವಕ್ಫ್ ಬೋರ್ಡ್ ಸದಸ್ಯ ಅಜ್ಜರ್, ಭೇರ್ಯ ಜಾಮೀಯ ಮಸೀದಿ ಕಮಿಟಿ ಅಧ್ಯಕ್ಷ ಪರ್ವೀಜ್ ಖಾನ್, ಕಲೀಂ ಷರೀಫ್, ಗ್ರಾಪಂ ಮಾಜಿ ಸದಸ್ಯ ಇನಾಯತ್ (ಇಲ್ಲು) ಮಾತನಾಡಿದರು. ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ನಜೀರುದ್ದೀನ್ ಬಾಬು, ಹಜ್ ಕಮಿಟಿ ಸದಸ್ಯ ಹಾಜಿ ಹಿಮಾಯನ್ ಶರೀಫ್, ಜಿಲ್ಲಾ ವಕ್ಫ್ ಬೋರ್ಡ್ ಸದಸ್ಯ ಅಮ್ಜದ್ ಪಾಷ, ಉಪಾಧ್ಯಕ್ಷ ರಫೀಕ್ ಬೇಗ್, ಕಾರ್ಯದರ್ಶಿ ಮಹಮ್ಮದ್ ಮನ್ಸೂರ್, ಹಾಜಿ ಪೀರ್ ಖಾನ್ ಸಾಬ್, ಸಮೀರ್, ಹಾಜಿ ಸಮೀಉಲ್ಲಾ ಖಾನ್, ಜನಾಬ್ ಸಜ್ಜಿರ್ ಸಾಬ್, ಖಲೀಲ್ ಸಾಬ್, ಮುಜಕ್ಕಿರ್ ಪಾಷ, ನೇಮತ್, ಸರ್ದಾರ್ ಷರೀಫ್, ಶಾಗೀಲ್ ಬೇಗ್, ಮುಸರತ್ ಖಾನ್, ವಸೀಂ ಬೇಗ್, ನಾಜೀಂ ಬೇಗ್, ಇಜಿಲುಲ್ಲಾ ಬೇಗ್(ಗುಡ್ಡು), ಖಾಲಿದ್, ಅಯಾನ್, ದಾನೀಷ್, ಕೈಸೈನ್, ರಫೀ, ಅಕ್ರಮ ಖಾನ್, ಷಫೀಉಲ್ಲಾ ಖಾನ್, ಶಯಿಬ್, ಸಿರಾಜ್, ಮುಜ್ಜಮಿಲ್, ಮುಸ್ತಾಫ್ ಸೇರಿದಂತೆ ಭೇರ್ಯ ಗ್ರಾಮದ ಮುಸ್ಲಿಂ ಸಮುದಾಯದ ಮುಖಂಡರು ಹಾಜರಿದ್ದರು.

ಕೆಇಆರ್‌ಸಿ ಟಾಟಾ ಪವರ್ ಸಂಸ್ಥೆ ಅರ್ಜಿ ತಿರಸ್ಕರಿಸಿ

ವಿದ್ಯುತ್ ಖಾಸಗೀಕರಣ ಕೈ ಬಿಡುವಂತೆ ಪ್ರತಿಭಟನೆ



ವಿದ್ಯುತ್ ಖಾಸಗೀಕರಣ ಕೈ ಬಿಡುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ತಿ.ನರಸೀಪುರ, ಜೂ.19– ಕೆಇಆರ್‌ಸಿ ಟಾಟಾ ಪವರ್ ಸಂಸ್ಥೆ ಅರ್ಜಿ ತಿರಸ್ಕರಿಸಿ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣ ಮಾಡುವ ಪ್ರಕ್ರಿಯೆ ಕೈಬಿಡಬೇಕು ಎಂದು ಒತ್ತಾಯಿಸಿ ಪಟ್ಟಣದ ಸೆಸ್ಕ್ ಕಚೇರಿ ಎದುರು ಶುಕ್ರವಾರ ಕೆಪಿಟಿಸಿಎಲ್ ನೌಕರರು, ವಿದ್ಯುತ್ ಗುತ್ತಿಗೆದಾರರು, ನಿವೃತ್ತ ನೌಕರರು ಹಾಗೂ ಇಂಜಿನಿಯರ್ ಅಸೋಸಿಯೇಷನ್ ವತಿಯಿಂದ ಸಾಂಕೇತಿಕ ಪ್ರತಿಭಟನೆ ನಡೆಸಲಾಯಿತು.

ಸೆಸ್ಕ್ ಕಚೇರಿ ಎದುರು ಜಮಾಯಿಸಿದ ವಿವಿಧ ವಿಭಾಗಗಳ ನೌಕರರು ವಿದ್ಯುತ್ ಕ್ಷೇತ್ರ ಖಾಸಗೀಕರಣ ಮಾಡಲು ಮುಂದಾಗಿರುವ ಸರ್ಕಾರ ಕ್ರಮದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಎಇಇ ಕೆ.ವಿ.ವೀರೇಶ್ ಮಾತನಾಡಿ, ಟಾಟಾ ಪವರ್ ಲಾಭದ ಉದ್ದೇಶದಿಂದ ಕಾರ್ಯ ನಿರ್ವಹಿಸುವ ಖಾಸಗಿ ಸಂಸ್ಥೆಯಾಗಿದೆ. ವಿದ್ಯುತ್ ಕ್ಷೇತ್ರ ಸೇವಾ ಕ್ಷೇತ್ರವಾಗಿದ್ದು, ಫ್ರಾಂಚೈಸೇಷನ್ ಹೆಸರಿನಲ್ಲಿ ಖಾಸಗೀಕರಣ ಮಾಡಲು ಸರ್ಕಾರ ಮುಂದಾಗಿದೆ. ಖಾಸಗಿ ಸಂಸ್ಥೆಗಳಿಂದ ಸಾರ್ವಜನಿಕ ಸೇವೆ ಸಮರ್ಪಕವಾಗಿ ನೀಡಲು ಸಾಧ್ಯವಿಲ್ಲ. ಸರ್ಕಾರದ ಗೃಹಜ್ಯೋತಿ, ಭಾಗ್ಯಜ್ಯೋತಿ ಸೇರಿದಂತೆ ಹಲವು ಸಬ್ಸಿಡಿ ಯೋಜನೆಗಳ ಮೂಲಕ ರೈತರು ಹಾಗೂ ಸಾರ್ವಜನಿಕರಿಗೆ ನೆರವು ನೀಡಲಾಗುತ್ತಿದೆ. ಖಾಸಗೀಕರಣವಾದರೆ ಸಬ್ಸಿಡಿ ಹೊಣೆ ಸರ್ಕಾರದಲ್ಲಿಯೇ ಉಳಿದು, ಆದಾಯ ತರುವ ಯೋಜನೆಗಳನ್ನು ಖಾಸಗಿ ಸಂಸ್ಥೆಗಳು ತಮ್ಮ ವಶಕ್ಕೆ ಪಡೆಯುವ ಸಾಧ್ಯತೆ ಇದೆ. ಇದರಿಂದ ಸರ್ಕಾರಿ ವಿದ್ಯುತ್ ಸಂಸ್ಥೆಗಳು ದುರ್ಬಲಗೊಂಡು ಸಾರ್ವಜನಿಕರು, ರೈತರು ಹಾಗೂ ಕೈಗಾರಿಕೆಗಳಿಗೆ ತೀವ್ರ ತೊಂದರೆಯಾಗಲಿದೆ. ಹಾಗಾಗಿ ಆಕ್ಷೇಪಣೆ ಸಲ್ಲಿಸಲು ನೀಡಿರುವ ಗಡುವಿನೊಳಗೆ ಪ್ರತಿಯೊಬ್ಬರೂ ತಮ್ಮ ಮೊಬೈಲ್ ಮೂಲಕ ಆನ್‌ಲೈನ್‌ನಲ್ಲಿ ಆಕ್ಷೇಪಣೆ ಸಲ್ಲಿಸಿ ವಿದ್ಯುತ್ ಕ್ಷೇತ್ರದ ಖಾಸಗೀಕರಣ ತಡೆಯಲು ಮುಂದಾಗಬೇಕು ಎಂದರು.

ಪ್ರತಿಭಟನೆಯಲ್ಲಿ ಮಾತನಾಡಿದ ಮುಖಂಡರು, ಟಾಟಾ ಪವರ್ ಸಂಸ್ಥೆ ಸರ್ಕಾರಿ ಸ್ವಾಮ್ಯದ 5 ವಿದ್ಯುತ್ ಸಂಸ್ಥೆಗಳಿಗೆ ಸಮಾನಾಂತರವಾಗಿ (ಫ್ರಾಂಚೈಸೇಷನ್ ಮೂಲಕ) ವಿದ್ಯುತ್ ಸರಬರಾಜು ಮಾಡುವುದಾಗಿ ಭರವಸೆ ನೀಡಿ ಕೆಇಆರ್‌ಸಿಗೆ ಅರ್ಜಿ ಸಲ್ಲಿಸಿದೆ. ಆದರೆ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸಿದರೆ ಸೆಸ್ಕ್ ನೌಕರರು ಮಾತ್ರವಲ್ಲದೇ ಸಾರ್ವಜನಿಕರು ಸಹ ತೀವ್ರ ಸಂಕಷ್ಟ ಎದುರಿಸಬೇಕಾಗುತ್ತದೆ. ಆದ್ದರಿಂದ ಟಾಟಾ ಪವರ್ ಸಂಸ್ಥೆ ಅರ್ಜಿಯನ್ನು ಕೂಡಲೇ ತಿರಸ್ಕರಿಸಬೇಕು ಎಂದು ಆಗ್ರಹಿಸಿದರು.

ಟಾಟಾ ಪವರ್ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಜೂ.23ರವರೆಗೆ ಅವಕಾಶ ನೀಡಲಾಗಿದೆ. ಖಾಸಗೀಕರಣದ ವಿರುದ್ಧ ಪ್ರಾಥಮಿಕ ಸಮಿತಿ, ಸ್ಥಳೀಯ ಸಮಿತಿ ಹಾಗೂ ಕೇಂದ್ರ ಸಮಿತಿಗಳ ಮೂಲಕ ಹಂತ ಹಂತವಾಗಿ ಹೋರಾಟ ನಡೆಸಲಾಗುವುದು. ಜೂ.23ರ ಬಳಿಕ ಸರ್ಕಾರ ಹಾಗೂ ಕೆಇಆರ್‌ಸಿ ಸಾರ್ವಜನಿಕರ ಅಭಿಪ್ರಾಯ ಪರಿಗಣಿಸಿ ಟಾಟಾ ಪವರ್ ಸಂಸ್ಥೆ ಅರ್ಜಿ ತಿರಸ್ಕರಿಸಿದರೆ ಅಭಿನಂದಿಸಲಾಗುವುದು. ಇಲ್ಲದಿದ್ದರೆ ಸಂಘಟನೆಗಳ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳ ನಿರ್ದೇಶನದಂತೆ ಕುಟುಂಬ ಸಮೇತ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಪ್ರತಿಭಟನಾನಿರತರು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಪ್ರಾಥಮಿಕ ಸಮಿತಿ ಅಧ್ಯಕ್ಷ ಶಿವಾನಂದ್, ಕಾರ್ಯದರ್ಶಿ ಮನೋಜ್, ನಿರ್ದೇಶಕರಾದ ನಾಗೇಂದ್ರ, ಮಧು, ಚೆಂಗುಮಣಿ, ಸಿದ್ದರಾಜು, ಮಹದೇವಸ್ವಾಮಿ, ಗುತ್ತಿಗೆದಾರರ ಸಂಘದ ಅಧ್ಯಕ್ಷ ಇಮ್ರಾನ್, ಕಾರ್ಯದರ್ಶಿ ಮಹದೇವಪ್ಪ, ಜೆಎಪಿ ಅಧ್ಯಕ್ಷ ಕೃಷ್ಣ, ನಿವೃತ್ತ ನೌಕರರ ಸಂಘದ ಅಧ್ಯಕ್ಷ ನಾರಾಯಣ್, ಗುತ್ತಿಗೆದಾರರಾದ ಎಂ.ಸಿ. ಮಹದೇವಸ್ವಾಮಿ, ವೀರೇಶ್, ಕುಮಾರ್ ಲೈನ್‌ಮನ್, ಸಿಬ್ಬಂದಿಗಳು ಸೇರಿದಂತೆ ಹಲವರು ಭಾಗವಹಿಸಿದ್ದರು.

ಬೇಡಿಕೆ ಈಡೇರಿಕೆಗೆ ನಗರಾಭಿವೃದ್ಧಿ ಸಚಿವರಿಗೆ ಮನವಿ



ಸಚಿವ ಯತೀಂದ್ರ ಅವರಿಗೆ ಮನವಿ ಸಲ್ಲಿಸಲಾಯಿತು.

ತಿ.ನರಸೀಪುರ, ಜೂ.19– ವಿವಿಧ ಬೇಡಿಕೆ ಈಡೇರಿಕೆ ಒತ್ತಾಯಿಸಿ ತಿ.ನರಸೀಪುರ ತ್ರಿವೇಣಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ಸಮಿತಿ ಪದಾಧಿಕಾರಿಗಳು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಅವರಿಗೆ ಮನವಿ ಸಲ್ಲಿಸಿದರು.

ಬೆಂಗಳೂರಿನಲ್ಲಿ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಅವರನ್ನು ಭೇಟಿ ಮಾಡಿದ ಸಮಿತಿ ಪದಾಧಿಕಾರಿಗಳು, ತ್ರಿವೇಣಿ ನಗರದ ಮಹಾನಾಯಕ ವೃತ್ತದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಸ್ಥಾಪಿಸುವುದು, ಪ.ಜಾತಿಯವರ ಸ್ಮಶಾನಕ್ಕೆ ರಸ್ತೆ, ನೀರಿನ ಟ್ಯಾಂಕ್ ಮತ್ತು ಕುಳಿತುಕೊಳ್ಳಲು ಬೆಂಚುಗಳನ್ನು ಹಾಕುವುದು, ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣಕ್ಕೆ ನಿವೇಶನಕೊಳ್ಳಲು ಧನ ಸಹಾಯ ಮತ್ತು ಆರ್ಯ ಮಹಲಿನಿಂದ ಭೈರಾಪುರದವರೆಗೆ ಡಾಂಬರೀಕರಣ ಸೇರಿದಂತೆ ಇನ್ನಿತರ ಬೇಡಿಕೆಗಳ ಈಡೇರಿಕೆಗೆ ಮನವಿ ಸಲ್ಲಿಸಿದರು.

ಈ ವೇಳೆ ಅಂಬೇಡ್ಕರ್ ಸಂಘದ ಅಧ್ಯಕ್ಷ ಮಹೇಶ್, ನಿರ್ದೇಶಕರಾದ ಎಂ.ಮಹೇಶ್, ಶ್ರೀಧರ್, ಮಲ್ಲರಾಜು, ಎಂ.ಮಿಥುನ್, ಮಹದೇವಸ್ವಾಮಿ, ರಂಗದಾಸ್, ಶಿವಣ್ಣ, ರವಿ ಮಹ ದೇವಮ್ಮ ಉಪಸ್ಥಿತರಿದ್ದರು.

ಪತ್ನಿ ಮೊಬೈಲ್ ನಂಬರ್ ಕೇಳಿದ ವ್ಯಕ್ತಿ ಮೇಲೆ ಹಲ್ಲೆ

ಪತಿ ರಕ್ಷಣೆಗೆ ಬಂದ ಪತ್ನಿಗೆ ತೀವ್ರ ಗಾಯ

ಹನಗೋಡು, ಜೂ.19– ಪತ್ನಿ ಮೊಬೈಲ್ ನಂಬರ್ ಕೇಳಿದ ಹಿನ್ನೆಲೆಯಲ್ಲಿ ಕುಪಿತಗೊಂಡ ಪತಿ ವ್ಯಕ್ತಿಯ ಮೇಲೆ ಮಚ್ಚಿನಿಂದ ಹಲ್ಲೆ ಮಾಡಲು ಮುಂದಾದ ವೇಳೆ ತಡೆಯಲು ಬಂದ ಆತನ ಪತ್ನಿ ತೀವ್ರವಾಗಿ ಗಾಯಗೊಂಡಿರುವ ಘಟನೆ ಶುಕ್ರವಾರ ಹನಗೋಡು ಬಳಿಯ ಒಂದನೇ ಬೋವಿ ಕಾಲೋನಿಯಲ್ಲಿ ನಡೆದಿದೆ.

ಒಂದನೇ ಭೋವಿ ಕಾಲೋನಿ ನಿವಾಸಿ ರಾಜು ಅವರ ಪತ್ನಿ ರುಕ್ಮಿಣಿ ಗಾಯಗೊಂಡವರು. ಇದೇ ಗ್ರಾಮದ ನಿವಾಸಿ ಮಂಜುನಾಥ್ ಹಾಗೂ ಆತನ ಅಪ್ಪಾಜಿ ಪುತ್ರನ ವಿರುದ್ಧ ಪ್ರಕರಣ ದಾಖಲಾಗಿದೆ.

ಶುಕ್ರವಾರ ಬೆಳಗ್ಗೆ ಭೋವಿ ಸಮುದಾಯದ ರಾಜು ತಮ್ಮ ಪರಿಚಯಸ್ಥರ ಬಳಿ ಅದೇ ಗ್ರಾಮದ ಮಂಜುನಾಥ್ ಅವರ ಪತ್ನಿ ಮೊಬೈಲ್ ನಂಬರ್ ಕೇಳಿದ್ದಾರೆ. ಈ ವಿಚಾರ ತಿಳಿದು ಆಕ್ರೋಶಗೊಂಡ ಮಂಜುನಾಥ ಹಾಗೂ ಅವರ ಅಪ್ಪಾಜಿ ಪುತ್ರ ಮಚ್ಚು ಹಿಡಿದು ರಾಜು ಅವರ ಮನೆ ಬಳಿ ತೆರಳಿ ರಾಜುನನ್ನು ಪ್ರಶ್ನಿಸಿದ್ದಾರೆ. ಈ ವೇಳೆ ಇಬ್ಬರ ನಡುವೆ ಮಾತಿನ ಚಕಮಕಿ ನಡೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಮಂಜುನಾಥ್ ಮಚ್ಚಿನಿಂದ ರಾಜು ಮೇಲೆ ಹಲ್ಲೆ ಮಾಡಲು ಮುಂದಾಗಿದ್ದಾರೆ. ಈ ವೇಳೆ ರಾಜು ಪತ್ನಿ ರುಕ್ಮಿಣಿ ಪತಿ ಮೇಲೆ ಹಲ್ಲೆ ಮಾಡುವುದನ್ನು ತಪ್ಪಿಸಲು ಹೋದ ವೇಳೆ ಆಕೆಯ ಕೈಗೆ ತೀವ್ರವಾಗಿ ಪೆಟ್ಟಾಗಿದ್ದು, ತಕ್ಷಣ ಆಕೆಯನ್ನು ಹನಗೋಡು ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕೆ ಡಿವೈಎಸ್‌ಪಿ ರವಿ, ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಹಲ್ಲೆ ನಡೆಸಿದ ಮಂಜುನಾಥ್ ಮತ್ತು ಆತನ ಅಪ್ಪಾಜಿ ಪುತ್ರ ವಿರುದ್ಧ ಹಲ್ಲೆ, ಅಟ್ರಾಸಿಟಿ ಪ್ರಕರಣ ದಾಖಲಿಸಿಕೊಂಡು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭೋವಿ ನಿಗಮದ ಅಧ್ಯಕ್ಷರ ಭೇಟಿ: ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳು ರುಕ್ಮಿಣಿ ಅವರನ್ನು ರಾಜ್ಯ ಭೋವಿ ನಿಗಮದ ಅಧ್ಯಕ್ಷ ರಾಮಪ್ಪಭೋವಿ ಭೇಟಿ ನೀಡಿ ಮಾಹಿತಿ ಪಡೆದರು. ತಾಪಂ ಮಾಜಿ ಸದಸ್ಯ ಚಿನ್ನವೀರಯ್ಯ ಮತ್ತಿತರರಿದ್ದರು.

ಬೈಕ್‌ಗೆ ಲಾರಿ ಡಿಕ್ಕಿ: ಸ್ಥಳದಲ್ಲೇ ಸವಾರ ಸಾವು

ನಂಜನಗೂಡು, ಜೂ.19– ಬೈಕ್‌ಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿ, ಹಿಂಬದಿ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಹೊಸಹಳ್ಳಿಯ ಫ್ಲೈಓವರ್ ಬಳಿ ನಡೆದಿದೆ.

ತಾಲೂಕಿನ ತಾಂಡವಪುರ ಗ್ರಾಮದ ನಿವಾಸಿ ರತ್ನಮ್ಮ ಅವರ ಪುತ್ರ ಪ್ರಜ್ವಲ್(17) ಸಾವನ್ನಪ್ಪಿದವರು. ಈತನ ಸ್ನೇಹಿತ ಮಾಲಯ್ಯ(17) ಗಂಭೀರವಾಗಿ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪ್ರಜ್ವಲ್ ತನ್ನ ಪಲ್ಸರ್ ಬೈಕ್‌ನಲ್ಲಿ ಸ್ನೇಹಿತ ಮಾಲಯ್ಯ ಜೊತೆ ಗುಂಡ್ಲುಪೇಟೆ ಮುಖ್ಯ ರಸ್ತೆಯಲ್ಲಿರುವ ಬನ್ನಿಹಾಳ ದೇವಸ್ಥಾನಕ್ಕೆ ತೆರಳುತ್ತಿದ್ದರು. ಈ ವೇಳೆ ಊಟಿ–ನಂಜನಗೂಡು ರಾಷ್ಟ್ರೀಯ ಹೆದ್ದಾರಿಯ ತಾಲೂಕಿನ ಹೊಸಹಳ್ಳಿ ನೂತನ ಫ್ಲೈಓವರ್ ಬಳಿಯ ಸರ್ವಿಸ್ ರಸ್ತೆಯಲ್ಲಿ ತೆರಳುತ್ತಿದ್ದ ವೇಳೆ ಹೆಡಿಯಾಲ ಕಡೆಯಿಂದ ಗ್ರಾಮಕ್ಕೆ ಸಿಮೆಂಟ್ ತುಂಬಿಕೊಂಡು ಹೋಗುತ್ತಿದ್ದ ಲಾರಿ ಚಾಲಕ ನಿರ್ಲಕ್ಷ್ಯ ಹಾಗೂ ವೇಗವಾಗಿ ಬಂದು ಬೈಕ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ಕೆಳಗೆ ಬಿದ್ದ ಬೈಕ್ ಸವಾರ ಪ್ರಜ್ವಲ್ ಮೇಲೆ ಲಾರಿಯ ಚಕ್ರ ಹರಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಹಿಂಬದಿ ಸವಾರ ಮಾಲಯ್ಯ ಅವರ ಕೈ ಮೇಲೆ ಲಾರಿ ಹರಿದಿದ್ದು ಗಂಭೀರವಾಗಿ ಗಾಯಗೊಂಡ ಅವರನ್ನು ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಂಜನಗೂಡು ಸಂಚಾರಿ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಲಾರಿ, ಚಾಲಕನನ್ನು ವಶಕ್ಕೆ ಪಡೆದು ಶವವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ವಾರಸುದಾರರಿಗೆ ಹಸ್ತಾಂತರಿಸಿದರು. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ತಿ.ನರಸೀಪುರದಲ್ಲಿ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ

ಅಪರಿಚಿತನಿಗಾಗಿ ಪೊಲೀಸರ ಹುಡುಕಾಟ

ತಿ.ನರಸೀಪುರ, ಜೂ.19– ಪಟ್ಟಣದ ಇಂದಿರಾನಗರದಲ್ಲಿ 4 ವರ್ಷದ ಬಾಲಕಿ ಮೇಲೆ ಅಪರಿಚಿತ ವ್ಯಕ್ತಿಯೊಬ್ಬ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪ ಕೇಳಿ ಬಂದಿದೆ. ಈ ಸಂಬಂಧ ತಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

ಪಶ್ಚಿಮ ಬಂಗಾಳದ ಪರ್ಗಾನಸ್ ಜಿಲ್ಲೆಯ ಮಾಮುದ್‌ಪುರ ಗ್ರಾಮದ ದಂಪತಿಯ 4 ವರ್ಷದ ಪುತ್ರಿ ಅಪರಿಚಿತ ನಿಂದ ಲೈಂಗಿಕ ದೌರ್ಜನ್ಯ ಕ್ಕೊಳಗಾದ ಬಾಲಕಿ.

ಈ ದಂಪತಿ 4 ವರ್ಷದ ಪುತ್ರಿಯೊಂದಿಗೆ 3 ತಿಂಗಳ ಹಿಂದೆ ಉದ್ಯೋಗ ಅರಸಿ ತಿ.ನರಸೀಪುರಕ್ಕೆ ಆಗಮಿಸಿ ಇಂದಿರಾ ನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದು, ಸ್ಥಳೀಯವಾಗಿ ಮಹಿಳಾ ಟೈಲರಿಂಗ್ ಅಂಗಡಿ ನಡೆಸಿಕೊಂಡು ಜೀವನ ಸಾಗಿಸುತ್ತಿದ್ದರು. ಜೂ.18ರಂದು ಎಂದಿನಂತೆ ಬೆಳಗ್ಗೆ ತಿಂಡಿ ಮುಗಿಸಿ ತಂದೆ ತಮ್ಮ ಟೈಲರಿಂಗ್ ಅಂಗ ಡಿಗೆ ತೆರಳಿದ್ದರು. ಮಧ್ಯಾಹ್ನ ಊಟಕ್ಕಾಗಿ ಮನೆಗೆ ಬಂದು ಮತ್ತೆ ಕೆಲಸಕ್ಕೆ ತೆರಳಿದ್ದರು. ಈ ವೇಳೆ ಮನೆಯಲ್ಲಿ ಪತ್ನಿ ಹಾಗೂ ಪುತ್ರಿ ಮಾತ್ರ ಇದ್ದರು ಎನ್ನಲಾಗಿದೆ.

ಸಂಜೆ 6 ಗಂಟೆ ವೇಳೆಗೆ ಅಪರಿಚಿತ ವ್ಯಕ್ತಿಯೊಬ್ಬ ಮನೆಗೆ ನುಗ್ಗಿ, ಬಾಲಕಿ ಬಾಯಿ ಮುಚ್ಚಿ ಮನೆ ಹೊರಭಾಗದ ಮೆಟ್ಟಿಲುಗಳ ಮೂಲಕ ಮೇಲಕ್ಕೆ ಕರೆದೊಯ್ದು ಕೂಗಿಕೊಂಡರೆ ಅಥವಾ ಅತ್ತರೆ ಹೊಡೆಯುವುದಾಗಿ ಬೆದರಿಕೆ ಹಾಕಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಮೊದಲಿಗೆ ಬಾಲಕಿಯನ್ನು ತಿ.ನರಸೀಪುರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ವೈದ್ಯಕೀಯ ಪರೀಕ್ಷೆ ಹಾಗೂ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ. ನಂತರ ಹೆಚ್ಚಿನ ಚಿಕಿತ್ಸೆ ಮತ್ತು ತಪಾಸಣೆಗಾಗಿ ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಬಾಲಕಿ ತಂದೆ ನೀಡಿರುವ ದೂರನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ.

ದೂರಿನಲ್ಲಿ ಉಲ್ಲೇಖಿಸಿರುವಂತೆ, ಆರೋಪಿ ವಯಸ್ಸು 20 ರಿಂದ 25 ಇರಬಹುದೆಂದು ಅಂದಾಜಿಸಲಾಗಿದ್ದು, ಘಟನೆ ವೇಳೆ ನೀಲಿ ಬಣ್ಣದ ಶರ್ಟ್ ಧರಿಸಿದ್ದಾನೆ ಎಂದು ತಿಳಿದು ಬಂದಿದೆ. ಆದರೆ ಆರೋಪಿ ಮುಖವನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯ ವಾಗಿಲ್ಲ ಎಂದು ತಿಳಿಸಲಾಗಿದೆ. ಘಟನೆ ಸಂಬಂಧ ಪಟ್ಟಣ ಪೊಲೀಸ್ ಠಾಣೆ ಎಸ್‌ಐ ಎನ್.ಎಂ. ಮಲ್ಲೇಶಯ್ಯ ಪ್ರಕರಣ ದಾಖಲಿಸಿ ಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ವಿದ್ಯಾರ್ಥಿಗಳು ಉನ್ನತ ಹುದ್ದೆ ಪಡೆಯಲು ಪ್ರಯತ್ನಿಸಿ



ಕೆ.ಆರ್.ನಗರ, ಜೂ.19– ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅಂಕ ಗಳಿಸಿದ್ದಕ್ಕೆ ಬೀಗದೆ ಆಡಳಿತಾತ್ಮಕ ಹುದ್ದೆ ಪಡೆಯುವವರೆಗೂ ಪ್ರಯತ್ನ ಮಾಡಬೇಕು ಎಂದು ಎಂದು ಆಲ್ಫಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎಸ್.ನವೀನ್ ತಿಳಿಸಿದರು.

ಪಟ್ಟಣದ ಅರ್ಕನಾಥ ರಸ್ತೆಯಲ್ಲಿರುವ ಬಳಗದ ಕಚೇರಿಯಲ್ಲಿ ಎಸ್‌ಟಿಎಂ ಗೆಳೆಯರ ಬಳಗ ಚಾರಿಟಬಲ್ ಟ್ರಸ್ಟ್ ವತಿಯಿಂದ ನಡೆದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಸದಸ್ಯರ ಮಕ್ಕಳಿಗೆ ಆಯೋಜಿಸಲಾಗಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ವಿದ್ಯೆ ಎಂಬುದು ಹುಲಿ ಹಾಲು ಕುಡಿದಷ್ಟೇ ಕಠಿಣ ಎಂಬುದನ್ನು ಮಕ್ಕಳು ಅರಿಯಬೇಕು ಎಂದರು.

ವಿದ್ಯಾರ್ಥಿಗಳು ಶಿಕ್ಷಣ ಪಡೆಯುವ ಅವಧಿಯಲ್ಲಿ ಶ್ರಮವಹಿಸಿ ಐಎಎಸ್, ಐಪಿಎಸ್, ಕೆಎಎಸ್‌ನಂತಹ ಉನ್ನತ ಮಟ್ಟದ ಪರೀಕ್ಷೆಗಳನ್ನು ಎದುರಿಸಿ ನೌಕರಿ ಪಡೆಯಬೇಕು. ಆಗ ಸಮಾಜಕ್ಕೆ ಒಳ್ಳೆಯ ಹೆಸರು ಬರಲಿದೆ ಎಂದು ಕಿವಿಮಾತು ಹೇಳಿದ ಅವರು ಹುದ್ದೆ ಪಡೆದ ನಂತರ ನೀವು ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಬೇಕೆಂದು ಸಲಹೆ ನೀಡಿದರು.

ಈ ವೇಳೆ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಟ್ರಸ್ಟ್ ಅಧ್ಯಕ್ಷ ರಾಘವೇಂದ್ರ, ಸಂಘಟನಾ ಕಾರ್ಯದರ್ಶಿ ಲೋಕೇಶ್, ಪದಾಧಿಕಾರಿಗಳಾದ ಮಂಜುನಾಥ್, ನಿರಂಜನ್, ಯೋಗೇಶ್, ಪ್ರಶಾಂತ್, ಶಂಕರ್, ನಟರಾಜು, ಸೋಮೇಶ್, ಜಗದೀಶ್ ಇತರರಿದ್ದರು.


ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ಕೆ.ಆರ್.ನಗರ, ಜೂ.19– ಪ್ರಸಕ್ತ ಸಾಲಿನಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕಿ ಹೆಚ್.ಎಲ್.ಗೀತಾ ತಿಳಿಸಿದ್ದಾರೆ.

ರಾಷ್ಟ್ರೀಯ ಎಣ್ಣೆ ತಾಳೆ ಅಭಿಯಾನ ಯೋಜನೆಯಡಿ ಹೊಸದಾಗಿ ಪ್ರದೇಶ ವಿಸ್ತರಣೆ, ನಿರ್ವಹಣೆ ಮತ್ತು ಅಂತರ ಬೆಳೆ ಬೆಳೆಯಲು ಸಹಾಯಧನ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ತಂಬಾಕು ಪರ್ಯಾಯ ಬೆಳೆ ಕಾರ್ಯಕ್ರಮದಡಿ ತಂಬಾಕು ಪರವಾನಿಗೆ ಹೊಂದಿರುವ ರೈತರು ತಂಬಾಕಿಗೆ ಬದಲಾಗಿ ಅಂಗಾಂಶ ಬಾಳೆ, ಕಂದು ಬಾಳೆ, ತರಕಾರಿ ಬೆಳೆ ಬೆಳೆಯಲು ಸಹಾಯಧನ ನೀಡಲಾಗುವುದು ಎಂದು ತಿಳಿಸಿದ್ದಾರೆ.

ರಿಯಾಯಿತಿ ದರದಲ್ಲಿ ಲಘು ಪೋಷಕಾಂಶ ವಿತರಣೆ, ಪ್ರಧಾನಮಂತ್ರಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿಗೆ ಸಹಾಯಧನ, ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ಹೊಸದಾಗಿ ತೆಂಗಿನ ಸಸಿಗಳನ್ನು ನಾಟಿ ಮಾಡಲಾಗಿರುವ ರೈತರಿಗೆ ಒಂದು ಸಸಿಗೆ 350 ರೂ.ನಂತೆ ಮೊದಲ ವರ್ಷ 175 ಮತ್ತು 2ನೇ ವರ್ಷ 175 ರೂ.ನಂತೆ ಸಹಾಯಧನ ನೀಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೂತನ ಎಂಎಲ್‌ಸಿ ಕೌಟಿಲ್ಯ ರಘುಗೆ ಅಭಿನಂದನೆ



ನಂಜನಗೂಡು, ಜೂ.19– ನೂತನ ವಿಧಾನ ಪರಿಷತ್ ಸದಸ್ಯ ಕೌಟಿಲ್ಯ ರಘು ಅವರನ್ನು ಹಿರಿಯ ಬಿಜೆಪಿ ಮುಖಂಡ ಹದಿನಾರು ಗುರುಪಾದಸ್ವಾಮಿ ಬೆಂಗಳೂರಿನ ಶಾಸಕರ ಭವನದಲ್ಲಿ ಸನ್ಮಾನಿಸಿ ಅಭಿನಂದನೆ ಸಲ್ಲಿಸಿದರು.

ನಂತರ ಅವರು ಮಾತನಾಡಿದ ಅವರು, ಕೌಟಿಲ್ಯ ರಘು ಅವರು ಹಿಂದುಳಿದ ವರ್ಗದ ಬಿಜೆಪಿ ರಾಜ್ಯ ಸಮಿತಿ ಅಧ್ಯಕ್ಷ, ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆ ಅಧ್ಯಕ್ಷ ಮತ್ತು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಪಕ್ಷದ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರ ಸೇವೆ ಗುರುತಿಸಿ ಪಕ್ಷದ ವರಿಷ್ಠರು ಅವರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡಿರುವುದು ಸಂತಸದ ಸಂಗತಿ. ಅವರ ಆಯ್ಕೆಗೆ ಸಹಕಾರ ನೀಡಿದ ಪ್ರಧಾನಿ ನರೇಂದ್ರ ಮೋದಿ, ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಸಂತೋಷ್, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜೇಂದ್ರ, ವಿಪಕ್ಷ ನಾಯಕ ಆರ್.ಅಶೋಕ್ ಸೇರಿದಂತೆ ಪಕ್ಷದ ಎಲ್ಲಾ ಮುಖಂಡರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಕೂಸಿನ ಮನೆಗೆ ಮಕ್ಕಳ ಆಟಿಕೆ ಪರಿಕರ ವಿತರಣೆ



ಮೈಸೂರು ತಾಲೂಕಿನ ಜಯಪುರ ಗ್ರಾಪಂ ಸಹಯೋಗದಲ್ಲಿ ಆರಂಭಿಸಿರುವ ಕೂಸಿನ ಮನೆಗೆ ಸಮಾಜ ಸೇವಕ ಎಸ್.ಶ್ರೀಕಾಂತ್ 8 ಸಾವಿರ ರೂ. ಮೌಲ್ಯದ ಮಕ್ಕಳ ಆಟಿಕೆ ಪರಿಕರಗಳನ್ನು ವಿತರಿಸಿದರು. ಈ ವೇಳೆ ಪಿಡಿಓ ಬಸವಣ್ಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮೇಲ್ವಿಚಾರಕಿ ಅನುಪಮಾ, ಲೆಕ್ಕ ಸಹಾಯಕ ಆನಂದೇಗೌಡ, ಮುಖಂಡರಾದ ಮಹದೇವಯ್ಯ, ಮಂಜುನಾಥ್, ಜಯಪುರ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಕೂಸಿನ ಮನೆ ಸಿಬ್ಬಂದಿ ಉಪಸ್ಥಿತರಿದ್ದರು.

ಡಿ.ಎಸ್.ಚಿಕ್ಕಮಾದು ಅಭಿಮಾನಿ ಬಳಗದಿಂದ

ಜನಸಾಮಾನ್ಯರು ಸೇರಿದಂತೆ ಎಲ್ಲಾ ವರ್ಗದವರಿಗೂ ಅನುಕೂಲ

ಬಳಗದ ಜಿಲ್ಲಾಧ್ಯಕ್ಷ ಕ್ಯಾತನಹಳ್ಳಿ ನಾಗರಾಜು ಅಭಿಪ್ರಾಯ



ಎಸ್.ಚಿಕ್ಕಮಾದು ಅಭಿಮಾನಿ ಬಳಗದ ಅಧ್ಯಕ್ಷ ಕ್ಯಾತನಹಳ್ಳಿ ನಾಗರಾಜ್ ಅವರನ್ನು ಸನ್ಮಾನಿಸಲಾಯಿತು.

ಹೆಚ್.ಡಿ.ಕೋಟೆ, ಜೂ.19– ನಾಯಕ ಸಮುದಾಯದ ಪ್ರಭಾವಿ ನಾಯಕ ದಿ.ಎಸ್.ಚಿಕ್ಕಮಾದು ಹೆಸರಿನಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿ ಅಭಿಮಾನಿ ಬಳಗ ಸ್ಥಾಪಿಸಿರುವುದರಿಂದ ಜನಸಾಮಾನ್ಯರು, ನೊಂದವರು, ಬಡವರು, ರೈತರು, ವಿದ್ಯಾರ್ಥಿಗಳಿಗೆ ಬಹಳಷ್ಟು ಅನುಕೂಲವಾಗಲಿದೆ ಎಂದು ಜಿಲ್ಲಾಧ್ಯಕ್ಷ ಮತ್ತು ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು ತಿಳಿಸಿದರು.

ಪಟ್ಟಣದ ಶ್ರೀಮಹರ್ಷಿ ವಾಲ್ಮೀಕಿ ಸಮುದಾಯ ಭವನದಲ್ಲಿ ಬಳಗದ ನೂತನ ಪದಾಧಿಕಾರಿಗಳಿಗೆ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದಿ.ಎಸ್.ಚಿಕ್ಕಮಾದು ಅವರು ಹೋರಾಟಗಾರರಾಗಿ, ಸಮಾಜದ ಏಳಿಗೆಗೆ ಶ್ರಮಿಸಿದ್ದರು. ಶಾಸಕ, ವಿಧಾನ ಪರಿಷತ್ ಸದಸ್ಯರಾಗಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಅವರ ಹೆಸರನ್ನು ಉಳಿಸುವ ಉದ್ದೇಶದಿಂದ ಮತ್ತು ಅವರ ಹೆಸರಿನಲ್ಲಿ ಸಮಾಜ ಸೇವೆ ಮಾಡುವ ನಿಟ್ಟಿನಲ್ಲಿ ಪಕ್ಷಾತೀತ ಮತ್ತು ಜಾತ್ಯತೀತವಾಗಿ ಎಲ್ಲರೂ ಒಗ್ಗೂಡಿ ಎರಡೂ ಜಿಲ್ಲೆಗಳ ವ್ಯಾಪ್ತಿಯಲ್ಲಿ ಅಭಿಮಾನಿ ಬಳಗ ಸ್ಥಾಪನೆ ಮಾಡಲಾಗಿದೆ ಎಂದರು.

ಸಂಘದ ಗೌರವಾಧ್ಯಕ್ಷ ಹೆಡತಲೆ ದೊರೆಸ್ವಾಮಿ ನಾಯಕ ಮಾತನಾಡಿ, ಅಧ್ಯಕ್ಷ ಕ್ಯಾತನಹಳ್ಳಿ ನಾಗರಾಜು ಅವರು ದಿ.ಎಸ್.ಚಿಕ್ಕಮಾದು ಅವರ ಅಪ್ಪಟ ಶಿಷ್ಯರಾಗಿದ್ದು, ಅವರ ಹೋರಾಟವನ್ನು ಹತ್ತಿರದಿಂದ ಬಲ್ಲವರು. ಹಾಗಾಗಿ ನಮ್ಮ ಸಂಘದ ನಿರ್ದೇಶಕರು ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದೇವೆ. ಒಟ್ಟು 36 ಮಂದಿ ಪದಾಧಿಕಾರಿಗಳು ಇದ್ದೇವೆ ಎಂದರು.

ಚಿಕ್ಕಮಾದು ಹೆಸರಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಬೇಕು. ಆ ನಿಟ್ಟಿನಲ್ಲಿ ಅಧ್ಯಕ್ಷರು ಕಾರ್ಯ ಪ್ರವೃತ್ತರಾಗಬೇಕು. ಸಂಘದ ಸರ್ವತೋಮುಖ ಅಭಿವೃದ್ಧಿಗೆ ಶಾಸಕ ಅನಿಲ್ ಸಹಕಾರ ಮತ್ತು ಬೆಂಬಲ ನೀಡಬೇಕು. ಚಿಕ್ಕಮಾದು ಸ್ನೇಹಿತರು ಮತ್ತು ಅಭಿಮಾನಿಗಳು ಸಾವಿರಾರು ಸಂಖ್ಯೆಯಲ್ಲಿ ಬೆಂಬಲಕ್ಕೆ ನಿಲ್ಲಬೇಕು ಎಂದು ಕೋರಿದರು.

ನಾಯಕ ಜನಾಂಗದ ಪರ್ಯಾಯ ಪದಗಳಾದ ಪರಿವಾರ ಮತ್ತು ತಳವಾರಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಚಿಕ್ಕಮಾದು ಅವರ ಹೋರಾಟವೂ ಕಾರಣ. ಇದನ್ನು ನಾವೆಲ್ಲರೂ ಮರೆಯಬಾರದು ಎಂದರು.

ಈ ವೇಳೆ ತಾಲೂಕು ನಾಯಕರ ಸಂಘದ ಗೌರವಾಧ್ಯಕ್ಷ ಮರಿತಿಮ್ಮ ನಾಯಕ, ಸಂಘದ ಕಾರ್ಯದರ್ಶಿ ಕೆ.ಎನ್.ಮಹೇಶ್ ನಾಯಕ, ಉಪಾಧ್ಯಕ್ಷ ಆಗತ್ತೂರು ಅಂಕನಾಯಕ, ತಾಪಂ ಮಾಜಿ ಸದಸ್ಯ ಟಿ.ಅಂಕನಾಯಕ, ನಿರ್ದೇಶಕರಾದ ಬೆಟ್ಟನಾಯಕ, ಭೈರನಾಯಕ, ಬಿ.ಪಿ.ಸಿದ್ದನಾಯಕ, ಪತ್ರಿಕಾ ಕಾರ್ಯದರ್ಶಿ ಮಣಿ, ಮೈಸೂರು ಜಿಲ್ಲಾ ಎಸ್ಸಿ, ಎಸ್ಟಿ ಜಾಗೃತಿ ಸಮಿತಿ ಸದಸ್ಯ ವೇಣು, ರತ್ನಾಕರ, ಸಂಘದ ಅಧ್ಯಕ್ಷ ಸಣ್ಣಸ್ವಾಮಿ ನಾಯಕ, ಶ್ರೀನಿವಾಸ್, ತಾಪಂ ಮಾಜಿ ಅಧ್ಯಕ್ಷ ಸುಂದರನಾಯಕ, ರಾಮ ನಾಯಕ, ರವಿಶಂಕರ, ಸುರೇಶ, ಯಜಮಾನ ನಾಗರಾಜು, ಕಮಲಾಕ್ಷ, ಟೈಲರ್ ನಾಗನಾಯಕ, ನಿಂಗನಾಯಕ, ಮಧು, ಕುಮಾರ, ಗೋಪಾಲ, ಅಂಕನಾಯಕ, ನಿಂಗನಾಯಕ, ಜಿನ್ನಳ್ಳಿ ಶ್ರೀನಿವಾಸ್, ತಿಮ್ಮನಾಯಕ, ಮಲ್ಲೇಶ, ಜವರನಾಯಕ, ಮಹದೇವ, ಕಾಳಿಂಗನಾಯಕ, ನಿಂಗರಾಜು, ಪಿ.ನಾಗರಾಜು, ಸೋಮಣ್ಣ, ಗೋವಿಂದ ನಾಯಕ, ಎಸ್.ಶಿವರಾಜು ಇತರರಿದ್ದರು.

ರಂಗಧಾಮ ನಿಧನ



ಸರಗೂರು, ಜೂ.19– ಪಟ್ಟಣದ 10ನೇ ವಾರ್ಡ್ ನಿವಾಸಿ, ತೊಗಟವೀರ ಸಮಾಜದ ಮುಖಂಡ ಹಾಗೂ ವರ್ತಕ ರಂಗಧಾಮ (70) ಗುರುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಪಟ್ಟಣದ ತೊಗಟವೀರ ಸಮಾಜದ ರುದ್ರಭೂಮಿಯಲ್ಲಿ ನಡೆಯಿತು.

ಶಂಕರ್



ಬೆಟ್ಟದಪುರ, ಜೂ.19– ಬೆಟ್ಟದಪುರ ಪೊಲೀಸ್ ಠಾಣೆಯ ಮುಖ್ಯಪೇದೆ ಶಂಕರ್(43) ಶುಕ್ರವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಾಲಿಗ್ರಾಮದಲ್ಲಿ ಸಂಜೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಮ್ಮಣ್ಣೇಗೌಡ



ಹನಗೋಡು, ಜೂ.19– ಹನಗೋಡು ಗ್ರಾಪಂ ಮಾಜಿ ವೈಸ್ ಛೇರ್‌ಮನ್ ತಮ್ಮಣ್ಣೇಗೌಡ (85) ಶುಕ್ರವಾರ ಸಂಜೆ ನಿಧನರಾದರು. ಮೃತರು ಚಿಲ್ಕುಂದ ಆರೋಗ್ಯ ಕೇಂದ್ರದ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ನಂಜಪ್ಪ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ಹನಗೋಡಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಕಟ್ಟಡಗಳ ಮಹಡಿಯಲ್ಲಿ ತಾತ್ಕಾಲಿಕ ಛಾವಣಿಯಡಿ ಸುರಕ್ಷತಾ ಕ್ರಮವಿಲ್ಲದೆ

ಬಾರ್ ಅಂಡ್ ರೆಸ್ಟೋರೆಂಟ್ ನಡೆಸುವವರ ಟ್ರೇಡ್ ಲೈಸೆನ್ಸ್ ರದ್ದು

●ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ಎಚ್ಚರಿಕೆ ●ಅಧಿಕಾರಿಗಳು ಖುದ್ದು ಪರಿಶೀಲನೆಗೆ ಆದೇಶ ●ಸುರಕ್ಷತಾ ಕ್ರಮ ಇಲ್ಲದೆ ಇದ್ದಲ್ಲಿ ಟ್ರೇಡ್ ಲೈಸೆನ್ಸ್ ರದ್ದು

ಮೈಸೂರು, ಜೂ.19(ಎಂಕೆ)– ಮೈಸೂರಿನ ದಟ್ಟಗಳ್ಳಿಯ ರಿಂಗ್‌ರಸ್ತೆಯಲ್ಲಿರುವ 'ಮಾರಾ' ರೆಸ್ಟೋಬಾರ್‌ನಲ್ಲಿ ನಡೆದ ಅಗ್ನಿ ದುರಂತವನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿದ್ದು, ಜಿಲ್ಲೆಯಲ್ಲಿ ಎರಡು ಅಥವಾ ಮೂರನೇ ಅಂತಸ್ತಿನಲ್ಲಿ ತಾತ್ಕಾಲಿಕವಾಗಿ ಛಾವಣಿ ನಿರ್ಮಿಸಿಕೊಂಡು ಅಗ್ನಿ ಸುರಕ್ಷತಾ ಕ್ರಮ ಕೈಗೊಳ್ಳದೇ ಬಾರ್ ಅಂಡ್ ರೆಸ್ಟೋರೆಂಟ್ ನಡೆಸುತ್ತಿರುವವರ ವಿರುದ್ಧ ಕ್ರಮ ಕೈಗೊಂಡು ಒಂದು ವಾರದೊಳಗೆ ವರದಿ ನೀಡುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ತಮ್ಮ ಕಚೇರಿ ಸಭಾಂಗಣದಲ್ಲಿ ಪೊಲೀಸ್, ಅಬಕಾರಿ ಹಾಗೂ ಇನ್ನಿತರೆ ಇಲಾಖೆ ಅಧಿಕಾರಿಗಳ ಸಭೆ ನಡೆಸಿದ ಅವರು, ರೂಫ್ ಟಾಪ್ ಪಬ್, ರೆಸ್ಟೋರೆಂಟ್‌ಗಳಲ್ಲಿ ಹುಲ್ಲು, ನಾನಾ ರೀತಿಯ ಅಲಂಕಾರಿಕ ವಿದ್ಯುತ್ ದೀಪ ಬಳಸುವುದು ಹಾಗೂ ಯಾವುದೇ ಅಗ್ನಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದಿರುವುದನ್ನು ಮೈಸೂರು ಮಹಾನಗರ ಪಾಲಿಕೆ ವಲಯ ಅಧಿಕಾರಿಗಳು ಹಾಗೂ ನಗರ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಪರಿಶೀಲಿಸಿ ಒಂದು ವಾರದೊಳಗೆ ಟ್ರೇಡ್ ಲೈಸೆನ್ಸ್ ರದ್ದು ಪಡಿಸಲು ಕ್ರಮ ವಹಿಸಬೇಕು ಎಂದು ತಿಳಿಸಿದರು.



ಪೊಲೀಸ್, ಅಬಕಾರಿ ಹಾಗೂ ಇನ್ನಿತರೆ ಇಲಾಖೆ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಶುಕ್ರವಾರ ಸಭೆ ನಡೆಸಿದರು

ಅಬಕಾರಿ ಇಲಾಖೆಯಿಂದ ಸಿ.ಎಲ್–7, ಸಿ.ಎಲ್–2, ಸಿ.ಎಲ್–5 ಪರವಾನಗಿ ಪಡೆಯದೇ ಮದ್ಯ ಮಾರಾಟ ಮಾಡುವುದು, ಪರವಾನಗಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸದೇ ಇರುವ ಬಾರ್ ಮತ್ತು ಪಬ್‌ಗಳು ಹೆಚ್ಚಾಗಿ ಮೈಸೂರು ನಗರ ಹಾಗೂ ನಗರದ ಹೊರವಲಯಗಳಲ್ಲಿವೆ. ಆದ್ದರಿಂದ ಅಬಕಾರಿ ಇಲಾಖೆ ಅಧಿಕಾರಿಗಳು, ನಿರಂತರವಾಗಿ ತಪಾಸಣೆ ನಡೆಸಿ ನಿಯಮಾನುಸಾರ ಕ್ರಮ ಕೈಗೊಳ್ಳಬೇಕು. ಹಾಗೆಯೇ ಕರ್ತವ್ಯ ಲೋಪ ಕಂಡುಬಂದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಅಬಕಾರಿ ಇಲಾಖೆಯ ನಿಯಮಾನುಸಾರ ಪರವಾನಗಿ ಪಡೆಯದೇ ಕೆಲ ಬಾರ್ ಅಂಡ್ ರೆಸ್ಟೋರೆಂಟ್‌ಗಳು ಆನ್‌ಲೈನ್ ಮೂಲಕ ಮದ್ಯ ಮಾರಾಟ ಕುರಿತು ಜಾಹೀರಾತು ನೀಡುವುದು ಹಾಗೂ ಜಾಹೀರಾತು ಫಲಕಗಳಲ್ಲಿ ಪ್ರಚಾರ ಮಾಡುತ್ತಿರುವುದು ಕಂಡುಬಂದಿದ್ದು, ಅಧಿಕಾರಿಗಳು ಕೂಡಲೇ ಅಂತಹ ಬಾರ್ ಅಂಡ್ ರೆಸ್ಟೋರೆಂಟ್‌ಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ತಾಕೀತು ಮಾಡಿದರು.

ರದ್ದು ಮಾಡಿ: ಮೈಸೂರು ಮಹಾನಗರ ಪಾಲಿಕೆ ಮತ್ತು ಅಬಕಾರಿ ಅಧಿಕಾರಿಗಳು ಲೈಸೆನ್ಸ್ ನೀಡುವ ಸಂದರ್ಭದಲ್ಲಿ ಅಗ್ನಿ ಸುರಕ್ಷತೆ ಕುರಿತು ವಹಿಸಬೇಕಾದ ಕ್ರಮಗಳ ಬಗ್ಗೆ ಅಗ್ನಿಶಾಮಕ ಇಲಾಖೆ ಅಧಿಕಾರಿಗಳು ಒಂದು ದಿನದ ತರಬೇತಿ ನೀಡಿ, ಅಗ್ನಿ ಸುರಕ್ಷತಾ ಕ್ರಮಗಳ ಕುರಿತು ನೀಡುವ ಲೈಸೆನ್ಸ್ ಅದರಲ್ಲಿ ಇಲ್ಲದಿದ್ದಲ್ಲಿ ಅಂತಹ ಅರ್ಜಿ ಬಂದ ಸಂದರ್ಭದಲ್ಲೇ ರದ್ದು ಮಾಡಿ ಎಂದು ಸೂಚಿಸಿದರು.

ಸಹಕಾರ ನೀಡಲಾಗುವುದು: ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮಾತನಾಡಿ, ಅಬಕಾರಿ ಹಾಗೂ ಮಹಾನಗರ ಪಾಲಿಕೆ ಅಧಿಕಾರಿಗಳು ರೇಡ್ ಮಾಡುವ ಸಂದರ್ಭದಲ್ಲಿ ಪೊಲೀಸ್ ಇಲಾಖೆಯಿಂದ ಅಗತ್ಯ ಸಹಕಾರ ನೀಡಲಾಗುವುದು ಎಂದು ತಿಳಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ಅಗ್ನಿಶಾಮಕ ಅಧಿಕಾರಿ ಗುರುರಾಜ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹಂಟೆಡ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಲಾಸಿ ಪಾಳ್ಯ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಬಾಲನ್ (ತ+ಮ)	2+2 ಪ್ರದರ್ಶನಗಳು
ಸಂಗಂ	
ನೂರ್ ಸ್ವಾಮಿ	4 ಪ್ರದರ್ಶನಗಳು
ಲಿಡೋ	
ಕೆಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಲಘಟ್ಟ (ಕ)	4 ಪ್ರದರ್ಶನಗಳು

ಮೈಸೂರು ಜಿಲ್ಲೆಯಲ್ಲಿ ಒಟ್ಟು 17 ರೌಡಿ ನಿಗ್ರಹ ದಳಗಳ ರಚನೆ

ಮೈಸೂರು, ಜೂ.19(ಎಂಕೆ)– ರೌಡಿಗಳ ದಮನಕ್ಕೆ ಮೈಸೂರು ಜಿಲ್ಲೆಯ ಆಯಾ ಠಾಣಾ ಮಟ್ಟದಲ್ಲಿ ರೌಡಿ ನಿಗ್ರಹ ದಳಗಳ ರಚನೆ ಮಾಡಲಾಗಿದೆ.

ರೌಡಿಗಳ ಚಟುವಟಿಕೆಗಳ ಮೇಲೆ ನಿಗಾವಹಿಸಿ, ಅವರ ಮನ ಪರಿವರ್ತಿಸಿ ಸಮಾಜದ ಮುಖ್ಯವಾಹಿನಿಗೆ ತರುವ ಸದುದ್ದೇಶದೊಂದಿಗೆ ಜಿಲ್ಲೆಯ ವೃತ್ತ ಮಟ್ಟದಲ್ಲಿ 4 ಹಾಗೂ ಠಾಣಾ ಮಟ್ಟದಲ್ಲಿ 13 ಸೇರಿ ಒಟ್ಟು 17 ರೌಡಿ ನಿಗ್ರಹ ದಳಗಳನ್ನು ರಚನೆ ಮಾಡಲಾಗಿದೆ.

ಉಪ ವಿಭಾಗದ ಡಿವೈಎಸ್‌ಪಿಗಳ ಮೇಲ್ವಿಚಾರಣೆಯಲ್ಲಿ ವೃತ್ತ ಮಟ್ಟದ ರೌಡಿ ನಿಗ್ರಹ ದಳದಲ್ಲಿ ಪೊಲೀಸ್ ವೃತ್ತ ನಿರೀಕ್ಷಕರು ಹಾಗೂ ಠಾಣಾ ಮಟ್ಟದಲ್ಲಿನ ರೌಡಿ ನಿಗ್ರಹ ದಳಗಳಿಗೆ ಆಯಾ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್‌ಗಳನ್ನು ಪೊಲೀಸ್ ದಳದ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ.

ವ್ಯಕ್ತಿಗಳ ಮೇಲಿರುವ ಹಳೇ ಕ್ರಿಮಿನಲ್ ಪ್ರಕರಣಗಳನ್ನು ಪರಿಶೀಲಿಸಿ, ಪದೇ ಪದೇ ಅಪರಾಧವೆಸಗುವವರ ವಿರುದ್ಧ ರೌಡಿ ಶೀಟ್ ತೆರೆಯುವುದು. ರೌಡಿಸಂ ಚಟುವಟಿಕೆಗಳಲ್ಲಿ ಭಾಗವಹಿಸುವವರ ಮೇಲೆ ನಿಗಾ ವಹಿಸಿ, ಪಾಲ್ಗೊಳ್ಳದಂತೆ ನಿಯಂತ್ರಿಸುವುದು. ಜೈಲಿನಿಂದ ಬಿಡುಗಡೆಯಾಗುವ ರೌಡಿಗಳ ಚಲನವಲನ ಗಮನಿಸುವುದು. ಠಾಣಾ ವ್ಯಾಪ್ತಿಯಲ್ಲಿ ಕರೆಸಿ ಎಚ್ಚರಿಕೆ ನೀಡಿ, ಶಾಂತಿ ಕಾಪಾಡುವಂತೆ ಬಾಂಡ್ ಬರೆಸಿಕೊಳ್ಳುವುದು ರೌಡಿ ನಿಗ್ರಹ ದಳಗಳ ಪ್ರಮುಖ ಚಟುವಟಿಕೆಯಾಗಿದೆ.

ದೂರು ನೀಡಲು ಮನವಿ: ಸಾರ್ವಜನಿಕರು ತಮ್ಮ ಆಸುಪಾಸಿನಲ್ಲಿ ಯಾವುದೇ ರೌಡಿಸಂ, ಸುಲಿಗೆ ಅಥವಾ ಬೆದರಿಕೆ ಚಟುವಟಿಕೆಗಳು ಕಂಡುಬಂದಲ್ಲಿ ತಕ್ಷಣವೇ '112' ತುರ್ತು ಸಹಾಯವಾಣಿಗೆ ಕರೆ ಮಾಡಿ ಅಥವಾ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡಿ ದೂರು ದಾಖಲಿಸಬಹುದಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಲೆಯನ್ಸ್ ಗ್ರೀನ್ ಅವಾರ್ಡ್ ಚಿತ್ರಕಲಾ ಸ್ಪರ್ಧೆ

ನೂರಾರು ವಿದ್ಯಾರ್ಥಿಗಳು ಭಾಗಿ; ಪರಿಸರ ಸಂರಕ್ಷಣೆಯ ಅರಿವು



ಮೈಸೂರಿನ ವಿಜಯನಗರದ ಶ್ರೀ ಕಲಾನಿಕೇತನ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಶುಕ್ರವಾರ ಏರ್ಪಡಿಸಿದ್ದ ಅಲೆಯನ್ಸ್ ಗ್ರೀನ್ ಅವಾರ್ಡ್ ಚಿತ್ರಕಲಾ ಸ್ಪರ್ಧೆಯನ್ನು ಅಲೆಯನ್ಸ್ ಕ್ಲಬ್ ಅಂತಾರಾಷ್ಟ್ರೀಯ ಕಾರ್ಯದರ್ಶಿ ನಾಗರಾಜ ವಿ. ಬೈರಿ ಉದ್ಘಾಟಿಸಿದರು.

ಮೈಸೂರು, ಜೂ.19– ಅಸೋಸಿಯೇಷನ್ ಆಫ್ ಅಲೆಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್ ವತಿಯಿಂದ ಮೈಸೂರಿನ ವಿಜಯನಗರದ ಶ್ರೀ ಕಲಾನಿಕೇತನ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಶುಕ್ರವಾರ ಶಾಲಾ ಮಕ್ಕಳಿಗಾಗಿ 'ಅಲೆಯನ್ಸ್ ಗ್ರೀನ್ ಅವಾರ್ಡ್' ಅಂತಾರಾಷ್ಟ್ರೀಯ ಗ್ರೀನ್ ಪೋಸ್ಟರ್ ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿತ್ತು.

ನಿರೀಕ್ಷೆಗೂ ಮೀರಿ ನಗರದ ವಿವಿಧ ಶಾಲೆಗಳ ನೂರಾರು ಮಕ್ಕಳು ಆಗಮಿಸಿದ್ದರಿಂದ ಕಲಾನಿಕೇತನ ಕಲಾ ಶಾಲೆ ಜೊತೆಗೆ ಪಕ್ಕದ ದಿವ್ಯರೂಪಾ ಕಲ್ಯಾಣ ಮಂಟಪದಲ್ಲೂ ಚಿತ್ರ ರಚನೆಗೆ ಸ್ಥಳಾವಕಾಶ ಕಲ್ಪಿಸಿಕೊಡಲಾಗಿತ್ತು. ಮೊದಲ ನಾಲ್ಕು ವಿಜೇತರಿಗೆ ಕ್ರಮವಾಗಿ ಐದು, ಮೂರು, ಎರಡು ಹಾಗೂ ಒಂದು ಸಾವಿರ ರೂ. ಬಹುಮಾನ, ನಂತರದ ನಾಲ್ಕು ಸ್ಥಾನ ಪಡೆದವರಿಗೆ ತಲಾ ಐದುನೂರು ರೂ. ಸಮಾಧಾನಕರ ಬಹುಮಾನ ನೀಡಿ, ಪ್ರೋತ್ಸಾಹಿಸಲಾಯಿತು.


ಕಾರ್ಯಕ್ರಮ ಉದ್ಘಾಟಿಸಿದ ಅಲೆಯನ್ಸ್ ಕ್ಲಬ್ ಅಂತಾರಾಷ್ಟ್ರೀಯ ಕಾರ್ಯದರ್ಶಿ ನಾಗರಾಜ ವಿ.ಬೈರಿ ಮಾತನಾಡಿ, ನಾವು ಮುಂದಿನ ಪೀಳಿಗೆಗೆ ಪರಿಶುದ್ಧ ವಾತಾವರಣ ಬಿಟ್ಟುಕೊಡಬೇಕೇ ಹೊರತು ಕಲುಷಿತ ವಾತಾವರಣವನ್ನಲ್ಲ. ಪೋಷಕರು ಮಕ್ಕಳಿಗೆ ಹಣ, ಆಸ್ತಿ, ಅಂತಸ್ತು ಒದಗಿಸುವುದಕ್ಕಿಂತ ಮುಖ್ಯವಾಗಿ ಪರಿಸರ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸಬೇಕು ಎಂದು ಸಲಹೆ ನೀಡಿದರು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಲೆಯನ್ಸ್ ಕ್ಲಬ್ ಆರಂಭವಾಗಿ 16 ವರ್ಷಗಳಾಗಿದ್ದು, ಇದೇ ಮೊದಲ ಬಾರಿಗೆ ಮಕ್ಕಳಿಗೆ ಪರಿಸರ ಕುರಿತು ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿದೆ. ರಾಜ್ಯದ ಮೈಸೂರು, ಬೆಂಗಳೂರು, ಉಡುಪಿ, ಮಂಡ್ಯ ಸೇರಿದಂತೆ 5 ಜಿಲ್ಲೆಗಳು ಸೇರಿದಂತೆ ದೇಶದ 45 ಜಿಲ್ಲೆಗಳು, ವಿಶ್ವದ 28 ದೇಶಗಳಲ್ಲಿ ಸ್ಪರ್ಧೆ ನಡೆಯುತ್ತಿದೆ. ಸುಮಾರು 15 ಸಾವಿರ ಮಕ್ಕಳು ಸ್ಪರ್ಧೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ವಿಜೇತರಿಗೆ ಬಹುಮಾನದ ಜೊತೆಗೆ ಭಾಗವಹಿಸುವ ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಗುವುದು. ವಿಜೇತರನ್ನು ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆ ಎಲ್ಲಿಯೇ ನಡೆದರೂ ಅಲೆಯನ್ಸ್ ಕ್ಲಬ್ ವತಿಯಿಂದಲೇ ಮಕ್ಕಳನ್ನು ಪೋಷಕರ ಜೊತೆ ಕಳುಹಿಸಿಕೊಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ಸ್ ಕಾರ್ಯದರ್ಶಿ ಬಾಬುರಾವ್, ಶ್ರೀ ಕಲಾನಿಕೇತನ ದೃಶ್ಯಕಲಾ ಮಹಾವಿದ್ಯಾಲಯ ಪ್ರಾಚಾರ್ಯ ಕೆ.ಸಿ.ಮಹದೇವಶೆಟ್ಟಿ, ಅಲೆಯನ್ಸ್ ಕ್ಲಬ್ ಜಿಲ್ಲಾ ಮಾಜಿ ಗವರ್ನರ್‌ಗಳಾದ ಸಿರಿ ಬಾಲು, ಎಸ್.ವೆಂಕಟೇಶ್, ಡೆಪ್ಯೂಟಿ ಗವರ್ನರ್ ನ.ಗಂಗಾಧರಪ್ಪ, ಶಾಲಿನಿ ಬೈರಿ, ಸ್ಪರ್ಧೆಯ ಮುಖ್ಯ ಸಂಚಾಲಕ ಸಿ.ಚಿಕ್ಕಣ್ಣ, ಸಂಯೋಜಕಿ ಶ್ವೇತಾ ದಿನೇಶ್, ಇಂದಿರಾ ವೆಂಕಟೇಶ್, ಶೋಭಾ ಸಿರಿಬಾಲು, ಹರವು ಲೋಕೇಶ್, ಎನ್.ಬೆಟ್ಟೇಗೌಡ, ಶ್ರೀಧರ್, ಸ್ಪರ್ಧೆಯ ತೀರ್ಪುಗಾರರಾದ ವಿಠಲ್ ಝಳಕಿ, ಕೆ. ಪರಮೇಶ್ವರ್ ಮತ್ತಿತರರು ಉಪಸ್ಥಿತರಿದ್ದರು.

ಕೆಪಿಎಸ್‌ಗಳಲ್ಲಿ ಆಂಗ್ಲ ಭಾಷಾ ಮಾಧ್ಯಮದವರಿಗೆ 8ನೇ ತರಗತಿ ನಂತರ ಶಿಕ್ಷಕರ ಸಮಸ್ಯೆ

ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಸಿ.ಪುಟ್ಟಸಿದ್ದಶೆಟ್ಟಿ ಕಳವಳ



ಮೈಸೂರು, ಜೂ.19(ಎಂಕೆ)– ಕರ್ನಾಟಕ ಪಬ್ಲಿಕ್ ಶಾಲೆ(ಕೆಪಿಎಸ್)ಗಳಲ್ಲಿ 1 ರಿಂದ 7ನೇ ತರಗತಿವರೆಗೆ ಆಂಗ್ಲ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ 8ನೇ ತರಗತಿಯಿಂದ ಬೋಧನೆ ಮಾಡಲು ಶಿಕ್ಷಕರಿಲ್ಲದೆ ವಿದ್ಯಾರ್ಥಿಗಳ ಭವಿಷ್ಯ ಅತಂತ್ರ ಸ್ಥಿತಿಯಲ್ಲಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಸಿ.ಪುಟ್ಟಸಿದ್ದಶೆಟ್ಟಿ ಕಳವಳ ವ್ಯಕ್ತಪಡಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, 2018 ರಿಂದ ಆರಂಭವಾದ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ಕಲಿತ ಮಕ್ಕಳಿಗೆ, 8ನೇ ತರಗತಿಯಿಂದ ಪಾಠ ಮಾಡಲು ಶಿಕ್ಷಕರೇ ಇಲ್ಲದಂತಾಗಿದೆ. ಸುಮಾರು 30 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳ ಭವಿಷ್ಯ ಬೀದಿ ಪಾಲಾಗುವ ಸಾಧ್ಯತೆ ಇದೆ ಎಂದು ದೂರಿದರು.

ಈಗಾಗಲೇ ಶಾಲೆಗಳು ಆರಂಭಗೊಂಡು ತಿಂಗಳು ಕಳೆಯುತ್ತಿದ್ದರೂ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಸಮಸ್ಯೆ ಬಗೆಹರಿದಿಲ್ಲ. ಅಲ್ಲದೆ ಬೆರಳೆಣಿಕೆಯಷ್ಟು ಶಾಲೆಗಳಲ್ಲಿ ಮಾತ್ರವೇ ಪೂರ್ಣ ಪ್ರಮಾಣದ ಶಿಕ್ಷಕರಿದ್ದು, ಉಳಿದ ಬಹುತೇಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ. ಸರ್ಕಾರಿ ಶಾಲೆಗಳನ್ನೇ ನಂಬಿರುವ ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ಸಮುದಾಯದ ಮಕ್ಕಳು ಶಿಕ್ಷಣದಿಂದ ವಂಚಿತರಾಗುವ ಆತಂಕ ಎದುರಾಗಿದೆ. ಇದರ ಬಗ್ಗೆ ಜನಪ್ರತಿನಿಧಿಗಳಿಗೆ ತಿಳಿಸೋಣವೆಂದರೂ ಶಿಕ್ಷಣ ಸಚಿವರು ಯಾರೆಂಬುದೇ ಗೊತ್ತಿಲ್ಲ. ಅಕಸ್ಮಾತ್ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆಯಾದಲ್ಲಿ ಕಾಯಕ ಸಮಾಜಗಳ ಒಕ್ಕೂಟದಿಂದ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು, ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಸಿದರು.

ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ವಿವಿಧ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಮೈಸೂರು, ಜೂ.19– ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ, ಅರೆ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಂದ 2026–2027ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಮೆಟ್ರಿಕ್ ನಂತರದ ಅರ್ಹತಾ ವಿದ್ಯಾರ್ಥಿ ವೇತನ, ಶುಲ್ಕ ಮರುಪಾವತಿ ಮತ್ತು ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ.

ಆಸಕ್ತ ವಿದ್ಯಾರ್ಥಿಗಳು ಆಗಸ್ಟ್ 31 ರೊಳಗೆ https:ssp.postmatric.karnataka.gov.in/ ವೆಬ್‌ಸೈಟ್‌ನ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ https://bcwd.karnataka.gov.in ವೆಬ್‌ಸೈಟ್ ಅನ್ನು ಸಂಪರ್ಕಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ bcwdhelpline@gmail.com ಇ–ಮೇಲ್ ಹಾಗೂ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾಯವಾಣಿ ಇ–ಮೇಲ್ post matrichelp@karnataka.gov.in ಅಥವಾ ದೂರವಾಣಿ ಸಂಖ್ಯೆ: 80507 70004 ಮತ್ತು ದೂರವಾಣಿ ಸಂಖ್ಯೆ: 1902 ನ್ನು ಸಂಪರ್ಕಿಸಬಹುದೆಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಜಯದೇವ ಆಸ್ಪತ್ರೆಯಲ್ಲಿ ಸರಣಿ ಸಾವು; ಆಡಳಿತ ವರ್ಗದ ವಿರುದ್ಧ ಧರಣಿ



ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆ ಎದುರು ಶುಕ್ರವಾರ ವಕೀಲ ಎನ್.ಪಿ.ಅಮೃತೇಶ್ ಪ್ರತಿಭಟನೆ ನಡೆಸಿದರು

ಮೈಸೂರು, ಜೂ.19(ಎಂಕೆ)– ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಾಗಿರುವ ಸರಣಿ ಸಾವಿಗೆ ಆಸ್ಪತ್ರೆಯ ವೈದ್ಯರು, ಆಡಳಿತ ವರ್ಗವೇ ಕಾರಣ ಎಂದು ದೂರಿ ವಕೀಲ ಎನ್.ಪಿ.ಅಮೃತೇಶ್ ನೇತೃತ್ವದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಜಯದೇವ ಹೃದ್ರೋಗ ಆಸ್ಪತ್ರೆಗಿರುವ ಒಳ್ಳೆಯ ಹೆಸರನ್ನು ಹಾಳು ಮಾಡಿ, ಖಾಸಗಿ ಆಸ್ಪತ್ರೆಗಳಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಆಸ್ಪತ್ರೆಯ ವೈದ್ಯರು ಕರ್ತವ್ಯ ಲೋಪವೆಸಗುತ್ತಿದ್ದಾರೆ. ಏನಾದರೂ ಆರೋಗ್ಯ ಸಮಸ್ಯೆ ಎಂದು ಆಸ್ಪತ್ರೆಗೆ ಭೇಟಿ ನೀಡಿದರೆ ದುರಹಂಕಾರದಿಂದ ವರ್ತಿಸುತ್ತಾರೆ. ಆಂಜಿಯೋಗ್ರಾಫ್ ಚಿಕಿತ್ಸೆಗೆಂದು ಬಂದರೆ ದಿನಪೂರ್ತಿ ಕಾಯಿಸಿ ನಂತರ ನಾಳೆ ಬನ್ನಿ ಎನ್ನುತ್ತಾರೆ ಎಂದು ದೂರಿದರು.

ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಾದ ದುರಂತ ಮಾದರಿ ಜಯದೇವ ಆಸ್ಪತ್ರೆಯಲ್ಲೂ ನಡೆಯುವ ಹುನ್ನಾರವನ್ನು ನಡೆಸಲಾಗುತ್ತಿದೆ. ಸೂಕ್ತ ಸಂದರ್ಭದಲ್ಲಿ ಚಿಕಿತ್ಸೆ ನೀಡದೆ ನಿರ್ಲಕ್ಷ್ಯ ವಹಿಸುತ್ತಾರೆ ರೋಗಿಗಳ ಸಾವಿಗೆ ಕಾರಣರಾಗುತ್ತಿದ್ದಾರೆ. ಆದ್ದರಿಂದ ಕೂಡಲೇ ಕರ್ತವ್ಯಕ್ಕೆ ದ್ರೋಹವೆಸಗುತ್ತಿರುವ ವೈದ್ಯರು, ಆಡಳಿತ ಸಿಬ್ಬಂದಿಯನ್ನು ಕೆಲಸದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

66 ಕೆ.ವಿ ವಿದ್ಯುತ್ ಮಾರ್ಗ ಚಾಲನೆ; ಸಾರ್ವಜನಿಕರಿಗೆ ಎಚ್ಚರಿಕೆ

ಮೈಸೂರು, ಜೂ.19– ಮೈಸೂರು ಯೋಜನೆ ವಿಭಾಗದ ನಗರದ ವಸಂತನಗರದಲ್ಲಿ ನೂತನವಾಗಿ 66/11 ಕೆ.ವಿ ವಿದ್ಯುತ್ ಉಪಕೇಂದ್ರ ಹಾಗೂ 66 ಕೆ.ವಿ ವಿದ್ಯುತ್ ದ್ವಿಮುಖ ಪ್ರಸರಣ ಮಾರ್ಗವನ್ನು ನಿರ್ಮಾಣ ಮಾಡುತ್ತಿದ್ದು, ಸದರಿ ವಿದ್ಯುತ್ ಮಾರ್ಗಗಳನ್ನು ಜೂನ್ 30 ರ ನಂತರ ಯಾವುದೇ ದಿನಾಂಕದಂದು ಚಾಲನೆಗೊಳಿಸಲು ಉದ್ದೇಶಿಸಲಾಗಿದೆ.


ಸದರಿ 66 ಕೆ ವಿ ದ್ವಿಮುಖ ವಿದ್ಯುತ್ ಮಾರ್ಗವು ಸುಮಾರು 0.08 ಕಿ.ಮೀ ವರೆಗೆ ವಿಸ್ತಾರಗೊಂಡಿದ್ದು, ಹಾಲಿ ಇರುವ 66 ಕೆ.ವಿ. ವಾಜಮಂಗಲ–ದೇವನೂರು (ಮೈಸೂರು) ವಿದ್ಯುತ್ ಮಾರ್ಗದಿಂದ ಸಂಪರ್ಕಗೊಂಡು ವಸಂತನಗರದಲ್ಲಿ ಹಾದು ಹೋಗಿ ನೂತನವಾಗಿ ನಿರ್ಮಾಣವಾಗಿರುವ 66/11 ವಸಂತನಗರ ವಿದ್ಯುತ್ ವಿತರಣಾ ಕೇಂದ್ರಕ್ಕೆ ಪ್ರವಹಿಸಲಾಗುತ್ತದೆ.

ಆದ್ದರಿಂದ ಸಾರ್ವಜನಿಕರು ವಿದ್ಯುತ್ ಗೋಪುರಗಳಿಗೆ ದನಕರುಗಳನ್ನು ಕಟ್ಟುವುದಾಗಲಿ, ಲೋಹದ ಪಟ್ಟಿಯನ್ನು ತೆಗೆಯುವುದಾಗಲಿ, ಗೋಪುರಗಳನ್ನು ಹತ್ತುವುದಾಗಲಿ, ತಂತಿಗಳನ್ನು ಮುಟ್ಟುವುದಾಗಲಿ, ಗೋಪುರಗಳ ಕೆಳಗಡೆ ಮರಗಿಡಗಳನ್ನು ನೆಡುವುದಾಗಲಿ ಗೋಪುರಗಳಿಗೆ ಬೆಳ್ಳಿ ಮತ್ತು ಹಗ್ಗ ಮುಂತಾದವುಗಳನ್ನು ಎಸೆಯುವುದಾಗಲಿ, ಗಾಳಿಪಟವನ್ನು ಗೋಪುರದ ಹತ್ತಿರ ಹಾರಿಸುವುದಾಗಲಿ ಮಾಡುವುದು ತುಂಬಾ ಅಪಾಯಕಾರಿ ಹಾಗೂ ಪ್ರಾಣ ಹಾನಿಯಾಗುತ್ತದೆಂದು ಎಚ್ಚರಿಸಲಾಗಿದೆ.

ಈ ಸೂಚನೆಯನ್ನು ಉಲ್ಲಂಘಿಸಿದಲ್ಲಿ ಉಂಟಾಗುವ ಯಾವುದೇ ತರಹದ ಅಪಘಾತ ಅಥವಾ ಪ್ರಾಣ ಹಾನಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಜವಾಬ್ದಾರರಲ್ಲ ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಯೋಜನೆಗಳು ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನ್ಯಾಯಬೆಲೆ ಅಂಗಡಿಗಳಿಗೆ 'ಗೃಹಜ್ಯೋತಿ'ಯಡಿ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡಿ

ಆಹಾರ ಸಚಿವ ಕೆ.ಹೆಚ್.ಮುನಿಯಪ್ಪರಲ್ಲಿ ಪುಷ್ಪವಲ್ಲಿ ಮನವಿ



ಕಾರ್ಯಕ್ರಮದಲ್ಲಿ ಮೈಸೂರು ನಗರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷೆ ಪುಷ್ಪವಲ್ಲಿ ಮಾತನಾಡಿದರು.

ಮೈಸೂರು, ಜೂ.19(ವಿವಿಹೆಚ್)– ನ್ಯಾಯಬೆಲೆ ಅಂಗಡಿಗಳಿಗೆ ಗೃಹ ಜ್ಯೋತಿ ಯೋಜನೆಯಡಿ 200 ಯುನಿಟ್ ವಿದ್ಯುತ್ ಉಚಿತವಾಗಿ ನೀಡುವಂತೆ ನಿಯೋಗದೊಂದಿಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವರಾದ ಕೆ.ಹೆಚ್.ಮುನಿಯಪ್ಪ ಅವರನ್ನು ಭೇಟಿಯಾಗುವುದಾಗಿ ಮೈಸೂರು ನಗರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷೆ ಪುಷ್ಪವಲ್ಲಿ ತಿಳಿಸಿದರು.

ನಗರದ ಮಹಾನಗರ ಪಾಲಿಕೆ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಮಂಗಳವಾರ ನಡೆದ ಕೆ.ಆರ್.ಕ್ಷೇತ್ರ ಪಂಚ ಗ್ಯಾರಂಟಿಗಳ ಸಮರ್ಪಕ ಅನುಷ್ಠಾನ ಸಭೆಯಲ್ಲಿ ಅವರು ಮಾತನಾಡಿದರು.

ನ್ಯಾಯಬೆಲೆ ಅಂಗಡಿಗಳಲ್ಲಿ ಕಾರ್ಡ್ ಎಂಟ್ರಿಗಾಗಿ ಹೆಚ್ಚುವರಿ ಡೇಟಾ, ಅತಿಯಾದ ವಿದ್ಯುತ್ ಬಳಕೆಯಾಗುತ್ತಿದೆ. ಬೆಳಗ್ಗೆಯಿಂದ ರಾತ್ರಿವರೆಗೂ ಕರ್ತವ್ಯ ನಿರ್ವಹಿಸಿದರೂ ಜನರಿಗೆ ಪಡಿತರ ವಿತರಣೆ ಮಾಡಲಾಗುತ್ತಿಲ್ಲ ಎಂದು ಸಮಸ್ಯೆಗಳನ್ನು ಬೆಳಕು ಚೆಲ್ಲಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅಧ್ಯಕ್ಷರು, ಸೊಸೈಟಿಗೆ ಬರುವಂತಹ ಗ್ರಾಹಕರಿಗೆ ಯಾವುದೇ ರೀತಿ ತೊಂದರೆ ಉಂಟಾಗದಂತೆ ಕಾರ್ಯ ನಿರ್ವಹಿಸಬೇಕು. ಪಡಿತರ ವಿತರಣೆ ಹಾಗೂ ಖರೀದಿ ವೇಳೆ ಏನಾದರೂ ಸಮಸ್ಯೆಗಳಾದರೂ ನಮ್ಮ ಬಳಿ ಹೇಳಿ, ತಕ್ಷಣ ಸ್ಪಂದಿಸಿ, ಅಗತ್ಯ ಕ್ರಮ ಕೈಗೊಳ್ಳುತ್ತೇವೆ ಎಂದರು.

ಆರೋಗ್ಯ ಸಮಸ್ಯೆ(ಕ್ಯಾನ್ಸರ್, ಹೃದಯ ರೋಗ ಹಾಗೂ ಕಿಡ್ನಿ ಸಮಸ್ಯೆ) ಇರುವವರಿಗೆ ಬಿಪಿಎಲ್ ತ್ವರಿತ ಕಾರ್ಡ್ ಮಾಡಿಕೊಳ್ಳಲು ಅವಕಾಶ ಮಾಡಿಕೊಡಿ. ಇದಕ್ಕೆ ನಮ್ಮ ಹಸ್ತಕ್ಷೇಪವಿಲ್ಲ. ಆದರೆ, ಅದರ ದುರ್ಬಳಕೆಯಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕೇಂದ್ರ ಸರ್ಕಾರದ 'ಒನ್ ನೇಷನ್ ಒನ್ ಕಾರ್ಡ್' ಯೋಜನೆಯಿಂದ ರಾಜ್ಯಾದ್ಯಂತ ಎಲ್ಲಾದರೂ ಅಕ್ಕಿ ಪಡೆಯಬಹುದು ಎಂದು ಕಾನೂನು ಜಾರಿಯಾಗಿರುವುದು ಬಹಳ ಗೊಂದಲಕ್ಕೆ ಎಡೆಮಾಡಿಕೊಟ್ಟಿದೆ. ಜಿಲ್ಲೆಯ ಇತರೆ ಭಾಗಗಳಿಂದ ಮೈಸೂರು ನಗರಕ್ಕೆ ವಾಸಿಸಲು ಬರುವವರು ಸ್ಥಳೀಯ ಅಂಗಡಿಗಳಲ್ಲಿ ಪಡಿತರ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ಸ್ಥಳೀಯರಿಗೆ ಪಡಿತರ ಸರಿಯಾಗಿ ಸಿಗುತ್ತಿಲ್ಲ ಎಂದು ನ್ಯಾಯಬೆಲೆ ಅಂಗಡಿ ಮಾಲೀಕರೊಬ್ಬರು ದೂರಿದರು.

ಇದಕ್ಕೆ, ಪೋರ್ಟಬಲ್ ಕಾರ್ಡ್ ಸಮಸ್ಯೆಗೆ 3 ತಿಂಗಳಿಗೂ ಅಧಿಕ ಒಂದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಕೊಂಡುಕೊಳ್ಳುವ ಹೊರಭಾಗದ ಗ್ರಾಹಕರ ಪಟ್ಟಿ ಸಿದ್ಧಪಡಿಸಿ, ನಮಗೆ ಒದಗಿಸಿದ್ದಲ್ಲಿ, ಮುಂದಿನ ದಿನಗಳಲ್ಲಿ ಹೆಚ್ಚುವರಿ ಪಡಿತರ ನೀಡುವಂತೆ ತಿಳಿಸಲಾಗುವುದು ಎಂದರು.

ಈ ವೇಳೆ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಜೆ.ವಿನಯ್ ಕುಮಾರ್, ಸಮಿತಿಯ ಸದಸ್ಯರಾದ ಡೈರಿ ವೆಂಕಟೇಶ್, ಕಲೀಂ ಷರೀಫ್, ಜಗನ್ನಾಥ್ ಭೋವಿ, ಸಿದ್ದಲಿಂಗಯ್ಯ, ಬಾಲಕೃಷ್ಣ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಅಧಿಕಾರಿಗಳಾದ ಅನಿಲ್ ಕುಮಾರ್, ಶ್ರೀಧರ್, ಶಶಿಧರ್ ಹಾಗೂ ಮೈಸೂರು ನಗರದ ಆಹಾರ ಮತ್ತು ನಾಗರಿಕ ಪೂರೈಕೆ ಸರಬರಾಜು ಇಲಾಖೆಯ ನ್ಯಾಯಬೆಲೆ ಅಂಗಡಿಯ ಮಾಲೀಕರುಗಳು ಉಪಸ್ಥಿತರಿದ್ದರು.

ಮೈಸೂರು ಲೇಡೀಸ್ ಅಸೋಸಿಯೇಷನ್ ಬೆಳ್ಳಿ ಹಬ್ಬದ ಹಿನ್ನೆಲೆ

ನಾಳೆ ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳಾ ಸಮಾವೇಶ



ಮೈಸೂರಿನ ಕಲಾಮಂದಿರದಲ್ಲಿ ಜೂ.21ರಂದು ನಡೆಯುವ ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳಾ ಸಮಾವೇಶದ ಪೋಸ್ಟರ್ ಅನ್ನು ಮೈಸೂರು ಲೇಡೀಸ್ ಅಸೋಸಿಯೇಷನ್ ಅಧ್ಯಕ್ಷೆ ಮಲ್ಲಿಗೆ ವೀರೇಶ್ ಬಿಡುಗಡೆ ಮಾಡಿದರು.

ಮೈಸೂರು,ಜೂ.19(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಜೂ.21ರಂದು ಬೆಳಗ್ಗೆ 10.30ಕ್ಕೆ 'ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳಾ ಸಮಾವೇಶ' ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ ಆದ ಮೈಸೂರು ಲೇಡೀಸ್ ಅಸೋಸಿಯೇಷನ್ ಅಧ್ಯಕ್ಷೆ ಮಲ್ಲಿಗೆ ವೀರೇಶ್ ತಿಳಿಸಿದ್ದಾರೆ.

ಮೈಸೂರಿನ ಸಿದ್ಧಾರ್ಥ ಹೋಟೆಲ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಭಾಗದಲ್ಲಿ ಕಳೆದ 25 ವರ್ಷದಿಂದ ಅನೇಕ ಸಮಾಜಮುಖಿ ಸೇವಾ ಕಾರ್ಯ ನಡೆಸುತ್ತಾ ಬಂದಿರುವ ಮೈಸೂರು ಲೇಡೀಸ್ ಅಸೋಸಿಯೇಷನ್ ಬೆಳ್ಳಿಹಬ್ಬದ ಅಂಗವಾಗಿ ಮಹಿಳಾ ಸಮಾವೇಶ ಆಯೋಜಿಸಲಾಗಿದೆ. ಪಕ್ಷಾತೀತವಾಗಿ, ಎಲ್ಲಾ ಮಹಿಳಾಪರ ಸಂಘಟನೆಗಳ ಪಾಲ್ಗೊಳ್ಳುವಿಕೆಯಲ್ಲಿ ಸಮಾವೇಶ ನಡೆಸಲಾಗುತ್ತಿದೆ ಎಂದರು.

ಮೈಸೂರಿನ ಕಲಾಮಂದಿರದಲ್ಲಿ ಜೂ.21ರಂದು ಬೆಳಗ್ಗೆ 10.30ಕ್ಕೆ ಶಾಸಕ ಕೆ.ಹರೀಶ್‌ಗೌಡ ಸಮಾವೇಶವನ್ನು ಉದ್ಘಾಟಿಸಲಿದ್ದಾರೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಟಿ. ದೇವೇಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಸಮಾವೇಶದಲ್ಲಿ ಮಹಿಳಾ ಸಬಲೀಕರಣ ಹಾಗೂ ಮಹಿಳೆಯರಿಗೆ ಕಾನೂನು ಅರಿವು ಕುರಿತು ಹಿರಿಯ ನ್ಯಾಯವಾದಿ ಪ್ರೊ.ರವಿವರ್ಮ ಕುಮಾರ್ ಹಾಗೂ ವಕೀಲರಾದ ಸುಮನ ಮುಖ್ಯ ಭಾಷಣ ಮಾಡಲಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಗೀತಾ ಮಹದೇವಪ್ರಸಾದ್, ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾದ ಅರ್ಚನ, ಅಪರ ಜಿಲ್ಲಾಧಿಕಾರಿ ಐಶ್ವರ್ಯ, ಮೈಸೂರು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕಿ ಪಿ.ಅನುಷಾ, ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಎಂ.ಕೆ.ಸವಿತಾ ಅವರನ್ನು ಸನ್ಮಾನಿಸಲಾಗುತ್ತಿದೆ ಎಂದರು.

ಸಮಾವೇಶದಲ್ಲಿ ಬೆಳಗ್ಗೆ 10ರಿಂದ 11 ಗಂಟೆವರೆಗೆ ಜಾನಪದ ಗಾಯಕ ಅಮ್ಮ ರಾಮಚಂದ್ರ ಮತ್ತು ತಂಡದಿಂದ ಗೀತಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಮಧ್ಯಾಹ್ನ 1 ಗಂಟೆಗೆ ಭೋಜನದ ಬಳಿಕ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಬೆಂಕಿ ರಹಿತ ಅಡುಗೆ ಸ್ಪರ್ಧೆ, ಭಾರತೀಯ ಸಾಂಪ್ರದಾಯಿಕ ಮಧುಮಗಳ ಸ್ಪರ್ಧೆ, ಗೀತಗಾಯನ ಸ್ಪರ್ಧೆ, ಲಕ್ಕಿ ಲೇಡಿ ಸ್ಪರ್ಧೆ ನಡೆಸಿದ ಬಳಿಕ ಬಹುಮಾನ ವಿತರಿಸಲಾಗುವುದು. ಸಮಾವೇಶದ ಉದ್ದೇಶ ಮಹಿಳಾ ಸಬಲೀಕರಣದೊಂದಿಗೆ ಸರ್ಕಾರದ ವಿವಿಧ ಸೌಲಭ್ಯ ಪಡೆದು ಸಮಾಜದಲ್ಲಿ ಹೇಗೆ ಮುಂದುವರೆಯಬಹುದು. ಕೌಟುಂಬಿಕ ಕಲಹ, ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಸಂಬಂಧಿಸಿದಂತೆ ಕಾನೂನು ನೆರವು ಪಡೆದುಕೊಳ್ಳುವ ವಿಧಾನ ವಿವರಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಲೇಡೀಸ್ ಅಸೋಸಿಯೇಷನ್ ಉಪಾಧ್ಯಕ್ಷೆ ಪವಿತ್ರ ಮಲ್ಲಿಕಾರ್ಜುನ್, ಪೂರ್ಣಿಮಾ ರಮೇಶ್, ಪುಷ್ಪಾ ನಾಗರಾಜ್, ವಿದ್ಯಾ ಶಿವಕುಮಾರ್, ಚಂದ್ರಕಲಾ ಶಿವರಾಜ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ವಿಧಾನ ಪರಿಷತ್ ಚುನಾವಣೆಯಲ್ಲಿ ಗೆಲುವು ಬೆನ್ನಲ್ಲೇ

ತಿರುಪತಿ ತಿಮ್ಮಪ್ಪನ ದರ್ಶನ ಪಡೆದ ಸಿಎಂ ಡಿ.ಕೆ ಶಿವಕುಮಾರ್



ತಿರುಪತಿ: ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಇಂದು ಬೆಳಗ್ಗೆ ಕುಟುಂಬಸ್ಥರ ಜೊತೆ ಆಂಧ್ರ ಪ್ರದೇಶದ ಪ್ರಸಿದ್ಧ ತಿರುಪತಿ ಬಾಲಾಜಿ ದೇವಸ್ಥಾನಕ್ಕೆ ಭೇಟಿ ನೀಡಿ ತಿಮ್ಮಪ್ಪನ ದರ್ಶನ ಪಡೆದರು. ತಮ್ಮ ಪತ್ನಿ, ಪುತ್ರ, ಅಳಿಯ ಹಾಗೂ ಶಾಸಕ ಆಪ್ತ ಡಾ.ಹೆಚ್ ರಂಗನಾಥ್ ಜೊತೆ ಆಗಮಿಸಿದ ಅವರು, ಕರ್ನಾಟಕ ವಿಧಾನ ಪರಿಷತ್ ಚುನಾವಣೆಯಲ್ಲಿ ದೊರೆತ ರಾಜಕೀಯ ಜಯದ ಹಿನ್ನೆಲೆಯಲ್ಲಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಡಿ ಕೆ ಶಿವಕುಮಾರ್ ಅವರು ಮುಂಜಾನೆ ನಡೆಯುವ ದೇವಾಲಯದ ಸೇವೆಗಳು ಮತ್ತು ವಿಶೇಷ ಪೂಜೆಗಳಲ್ಲಿ ಭಾಗವಹಿಸಿದರು. ಅವರು ಮಹಾದ್ವಾರಂ ತಲುಪಿದ ವೇಳೆ, ತಿರುಮಲ ತಿರುಪತಿ ದೇವಸ್ಥಾನ ಅಧಿಕಾರಿಗಳು ಹಾಗೂ ಅರ್ಚಕರು ಅವರಿಗೆ ಅಧಿಕೃತವಾಗಿ ಸ್ವಾಗತ ಕೋರಿದರು.

ರಂಗನಾಯಕುಲ ಮಂಟಪದಲ್ಲಿ ವೇದ ಪಂಡಿತರು ಅವರಿಗೆ ವೇದಾಶೀರ್ವಚನ, ಶೇಷವಸ್ತ್ರ ಮತ್ತು ತೀರ್ಥ ಪ್ರಸಾದವನ್ನು ನೀಡಿದರು. ಡಿ ಕೆ ಶಿವಕುಮಾರ್ ಅವರು ಮೊದಲು ರೇಣಿಗುಂಟಾ ವಿಮಾನ ನಿಲ್ದಾಣಕ್ಕೆ ಆಗಮಿಸಿದರು. ಅಲ್ಲಿ ಡಾ ವಿ ವೆಂಕಟೇಶ್ವರ ಹಾಗೂ ಬೊಜ್ಜಲ ಸುಧೀರ್ ರೆಡ್ಡಿ ಸೇರಿದಂತೆ ಸ್ಥಳೀಯ ಗಣ್ಯರು ಅವರನ್ನು ಸ್ವಾಗತಿಸಿದರು.

ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಸೇವನೆ; ಐವರು ವಶಕ್ಕೆ


ಮೈಸೂರು, ಜೂ.19(ವಿವಿಹೆಚ್)– ಸಾರ್ವಜನಿಕ ಸ್ಥಳದಲ್ಲಿ ಮದ್ಯಪಾನ ಮಾಡುವವರ ವಿರುದ್ಧ ಕಮಿಷನರೇಟ್ ವ್ಯಾಪ್ತಿಯ ವಿವಿಧ ಠಾಣೆಯಲ್ಲಿ ದಾಖಲಾದ ಮೂರು ಪ್ರತ್ಯೇಕ ಪ್ರಕರಣದಲ್ಲಿ ಐವರ ವಿರುದ್ಧ ಪ್ರಕರಣ ದಾಖಲಾಗಿದೆ.


ಹೆಬ್ಬಾಳ ಠಾಣಾ ವ್ಯಾಪ್ತಿಯಲ್ಲಿ ವರ್ತುಲ ರಸ್ತೆಯ ಭಾರತ್ ಕ್ಯಾನ್ಸರ್ ಆಸ್ಪತ್ರೆ ಬಳಿ ಸಾರ್ವಜನಿಕ ಸ್ಥಳದಲ್ಲಿ ಆಟೋದಲ್ಲಿ ಮೂವರು ಮದ್ಯ ಸೇವಿಸುತ್ತಿದ್ದರು. ಅವರನ್ನು ವಶಕ್ಕೆ ಪಡೆದ ಪೊಲೀಸರು, ಎರಡು ಆಟೋ ವಶಪಡಿಸಿಕೊಂಡಿದ್ದಾರೆ.

ಸರಸ್ವತಿಪುರಂ ಠಾಣಾ ವ್ಯಾಪ್ತಿಯ ಬಂಕರ್ಸ್ ಬಾರ್ ಬಳಿ ವ್ಯಕ್ತಿಯೊಬ್ಬರು ಆಟೋದಲ್ಲಿ ಕುಳಿತು ಮದ್ಯಪಾನ ಮಾಡುತ್ತಿದ್ದರು. ಮತ್ತೊಂದು ಪ್ರಕರಣದಲ್ಲಿ ಲೋಬೋಸ್ ಬಾರ್ ಆಂಡ್ ರೆಸ್ಟೋರೆಂಟ್ ಮುಂಭಾಗ ವ್ಯಕ್ತಿಯೊಬ್ಬರು ಕಾರಿನಲ್ಲಿ ಕುಳಿತು ಮದ್ಯ ಸೇವಿಸುತ್ತಿದ್ದರು. ಅವರ ವಿರುದ್ಧವೂ ಪ್ರತ್ಯೇಕ ಪ್ರಕರಣ ದಾಖಲಾಗಿದೆ.









ಮೈಸೂರು ಮಿತ್ರ 47

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ತಿಳುವಳಿಕೆ

ನಮ್ಮ ಕಕ್ಷಿದಾರರಾದ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಭದ್ರೇಗೌಡನಕೊಪ್ಪಲು ಗ್ರಾಮದ ಲೇಟ್ ಬಸವರಾಜೇಗೌಡರವರ ಮಗನಾದ 50 ವರ್ಷ ವಯಸ್ಸುಳ್ಳ ಶ್ರೀ ಮಹದೇವಪ್ಪ.ಬಿ ರವರು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು ಮತ್ತು ಅವರ ಅಣ್ಣತಮ್ಮಂದಿರು ಸೇರಿ ಅವರ ಚಿಕ್ಕಪ್ಪಂದಿರ ವಿರುದ್ಧ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಭಾಗಾಂಶಕ್ಕಾಗಿ ಅಸಲು ದಾವಾ ಸಂಖ್ಯೆ.583/2026ನ್ನು ಮೈಸೂರಿನ ಮಾನ್ಯ 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದು, ಸದರಿ ದಾವೆಯು ವಿಚಾರಣೆಗಾಗಿ ಬಾಕಿ ಇರುತ್ತದೆ. ಈ ಮಧ್ಯೆ ಕೆಲವು ವ್ಯಕ್ತಿಗಳು ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ಸೃಷ್ಟಿಸಿಕೊಂಡು ಕಾನೂನು ಬಾಹಿರವಾಗಿ, ಕ್ರಯ, ವಗೈರೆ, ಇತ್ಯಾದಿಗಳನ್ನು ಮಾಡಲು ಪ್ರಯತ್ನಿಸುತ್ತಿರುತ್ತಾರೆ. ಅಂತಹ ವ್ಯಕ್ತಿಗಳ ಬಳಿ ಯಾವುದೇ ವ್ಯವಹಾರಗಳನ್ನಾಗಲೀ, ಕ್ರಯ, ವಗೈರೆ, ಇತ್ಯಾದಿಗಳನ್ನು ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೆಳವಾಡಿ ಗ್ರಾಮದ ಸರ್ವೆ ನಂ.279/2 ವಿಸ್ತೀರ್ಣ 3 ಎಕರೆ 20 ಗುಂಟೆ ಸ್ವತ್ತು ಈ ಸಾರ್ವಜನಿಕ ಪ್ರಕಟಣೆಗೆ ಒಳಪಟ್ಟ ಸ್ವತ್ತಾಗಿರುತ್ತದೆ.

ಸಹಿ/– ಟಿ.ಜಯರಾಮೇಗೌಡ
ವಕೀಲರು
ನಂ. 2345, 2ನೇ ಮಹಡಿ,
3ನೇ ಕ್ರಾಸ್, ಪಂಪಾಪತಿ ರಸ್ತೆ, ಕೆ.ಜಿ. ಕೊಪ್ಪಲು,
ಮೈಸೂರು–570009. ಮೊ: 9845584235
Date: 18/06/2026

ಕರ್ನಾಟಕಸರ್ಕಾರ
ಉಪನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ,
ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣ, ಮೈಸೂರು.
ಇಮೇಲ್: ddnnpue@gmail.com
ಸಂಖ್ಯೆ: ಶಾಶಿಇ(ಪಪೂ)/ಉನಿ–ಎನ್ಎನ್/ಟೆಂಡರ್–01/ವಾಹನ/2026–27
ದಿನಾಂಕ:15.06.2026

ಕಾಲಮಿತಿ ಟೆಂಡರ್ ಅಧಿಸೂಚನೆ

ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ)ಮೈಸೂರು ಜಿಲ್ಲೆ, ಮೈಸೂರು ಇಲ್ಲಿನ ಕಛೇರಿ ಕೆಲಸ ಕಾರ್ಯಗಳಿಗೆ ವಾಹನ ಚಾಲಕರೊಂದಿಗೆ (4 Wheeler LMV A/C Car)01 ವಾಹನ ಸೇವೆಯನ್ನು ದಿ: 01.07.2026 ರಿಂದ 31.03.2027 ರವರೆಗೆ ಒಂದು ಆರ್ಥಿಕ ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ–1999ರ ನಿಯಮಗಳು 2000ರ ಪ್ರಕಾರ (Manual Technical bid and Financial bid System) ಎರಡು ಲಕೋಟೆಗಳ ಮೂಲಕ ಟೆಂಡರ್ ಕರೆಯಲಾಗಿದೆ. 1) ಟೆಂಡರ್‌ದಾರರ Manual ಮೂಲಕ ಟೆಂಡರ್ ಸಲ್ಲಿಸುವುದು, ಈ ಬಗ್ಗೆ ಟೆಂಡರ್ ದಾರರಿಗೆ ನಿಗದಿ ಪಡಿಸಿರುವ ಅರ್ಹತೆ ಮತ್ತು ಅನುಭವಗಳು ಇರತಕ್ಕದ್ದು. 2) ಟೆಂಡರ್ ದಾಸ್ತಾವೇಜುಗಳನ್ನು ದಿ: 20.06.2026 ರಿಂದ ದಿ: 29.06.2026ರ ಅಪರಾಹ್ನ 3.00 ಗಂಟೆಯವರೆಗೆ ಭೌತಿಕವಾಗಿ ಟೆಂಡರ್ ಲಕೋಟೆಗಳನ್ನು ಸಲ್ಲಿಸಹುದಾಗಿದೆ. 3) ಟೆಂಡರ್ ಮತ್ತು ಇ.ಎಂ.ಡಿ ಮೊತ್ತವನ್ನು ತಪ್ಪದೆ Manual ಮುಖಾಂತರ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು. 4) ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಮೈಸೂರು ಜಿಲ್ಲೆ (ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜು ನಾರಯಣಶಾಸ್ತ್ರಿ ರಸ್ತೆ ಮೈಸೂರು ಆವರಣ) ಇಲ್ಲಿ ಕಛೇರಿಯ ವೇಳೆಯಲ್ಲಿ ಸಂಪರ್ಕಿಸುವುದು. 5) ತಾಂತ್ರಿಕ ಬಿಡ್‌ನೊಂದಿಗೆ ಸಲ್ಲಿಸಬೇಕಾದ ದಾಖಲೆಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸತಕ್ಕದ್ದು.

ಸಹಿ/– ಉಪನಿರ್ದೇಶಕರು,
ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ) ಮೈಸೂರು ಜಿಲ್ಲೆ, ಮೈಸೂರು.
DIPR/DDMYS/346/KSMCA/235/2026-27



ಸ್ಥಾಪನೆ : 1916 RBI License No. UBD KA 844P, Dt.28.01.1987

ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಶಾಖೆಗಳು: 1) ಉದಯಗಿರಿ 2) ರಾಜೀವ್‌ನಗರ 3) ಹುಣಸೂರು
ಮುಖ್ಯ ಶಾಖೆ: ನ್ಯೂ ಸಯ್ಯಾಜಿ ರಾವ್ ರಸ್ತೆ, ಮೈಸೂರು–570001.

ಸ್ಥಿರಾಸ್ತಿ ಬಹಿರಂಗ ಹರಾಜು ಮಾರಾಟ

ಸೆಕ್ಯೂರಿಟೈಜೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್‌ನ 2002 ನಿಯಮ 8(6)ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಪ್ರಕಾರ ಕೆಳಗೆ ಸೂಚಿಸಿರುವ ಸಾಲಗಾರರು ಬ್ಯಾಂಕ್‌ಗೆ ಬರಬೇಕಾದ ಬಾಕಿಯನ್ನು ಪಾವತಿಸುವಲ್ಲಿ ವಿಫಲರಾಗಿರುವುದರಿಂದ ಈ ನೋಟೀಸನ್ನು ನೀಡಲಾಗಿದೆ. ಸೆಕ್ಯೂರಿಟೈಜೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ರ (SARFAESI) ಕಾಯ್ದೆಯಲ್ಲಿ ಸೆಕ್ಷನ್ 13(4) ರ ಅನ್ವಯ ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು–570001 ಅಧಿಕೃತ ಅಧಿಕಾರಿಯವರಿಂದ ಮೇಲ್ಕಂಡ ಕಾಯ್ದೆಯ ಅನ್ವಯ ಬ್ಯಾಂಕ್ ತನ್ನ ಅಧಿಕಾರಗಳನ್ನು ಚಲಾಯಿಸಿ, ಬ್ಯಾಂಕು ತನಗೆ ಬರಬೇಕಾದ ಬಾಕಿ ವಸೂಲಿಗಾಗಿ ಷೆಡ್ಯೂಲ್–1 ಭಾಗ–ಎ ಮತ್ತು ಷೆಡ್ಯೂಲ್– 1 ಭಾಗ–ಬಿ ಯಲ್ಲಿರುವ ಆಸ್ತಿಗಳನ್ನು ಸೂಚಿಸಿರುವಂತೆ ಕೆಳಕಂಡ ನಿಯಮ ಮತ್ತು ಷರತ್ತುಗಳಿಗೆ ಅನುಗುಣವಾಗಿ ಮಾರಾಟ ಮಾಡಲಾಗುತ್ತದೆ.

ಮಾರಾಟದ ದಿನಾಂಕ	ಷೆಡ್ಯೂಲ್–1 ಭಾಗ–ಎ, ಕಲಂ–5 ನ್ನು ಆಧಾರ ಮಾಡಿ
ಮಾರಾಟದ ಸಮಯ	ಷೆಡ್ಯೂಲ್–1 ಭಾಗ–ಎ, ಕಲಂ–5 ನ್ನು ಆಧಾರ ಮಾಡಿ
ಮಾರಾಟದ ಸ್ಥಳ	ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು–570001.
ಸ್ಥಿರಪಡಿಸಿದ ಮೀಸಲು ಬೆಲೆ	ಷೆಡ್ಯೂಲ್–1 ಭಾಗ–ಎ, ಕಲಂ–3 ನ್ನು ಆಧಾರ ಮಾಡಿ
ಮುಂಗಡ ಠೇವಣಿ ಹಣ	ಷೆಡ್ಯೂಲ್–1 ಭಾಗ–ಎ, ಕಲಂ–4 ನ್ನು ಆಧಾರ ಮಾಡಿ

ಷೆಡ್ಯೂಲ್–1, ಭಾಗ–ಎ

ಕ್ರಮ ಸಂಖ್ಯೆ	ಸಾಲಗಾರರು/ಸಹ ಸಾಲಗಾರರ ಹೆಸರು	ಆಸ್ತಿಯ ವಿವರಣೆ	ಮೀಸಲು ಬೆಲೆ ರೂ.ಗಳಲ್ಲಿ	ಮುಂಗಡ ಠೇವಣಿ ರೂ.ಗಳಲ್ಲಿ	ಮಾರಾಟದ ದಿನಾಂಕ ಮತ್ತು ಸಮಯ
	(1)	(2)	(3)	(4)	(5)
1.	1) ಶ್ರೀ ಮುಜೀಬ್ ಉರ್ ರೆಹ್ಮಾನ್ ಬಿನ್ ಅಸ್ಗರ್ ಪಾಷ 2) ಶ್ರೀ ನಜೀಬ್ ಉರ್ ರೆಹ್ಮಾನ್ ಬಿನ್ ಅಸ್ಗರ್ ಪಾಷ 3) ಶ್ರೀ ಮೊಹಮ್ಮದ್ ಜಬೀರ್ ಬಿನ್ ಮೊಹಮ್ಮದ್ ಸಲೀಮ್ ನಂ.2595/I, ಎರೆಕಟ್ಟೆ ಬೀದಿ, ಲಷ್ಕರ್ ಮೊಹಲ್ಲಾ, ಮೈಸೂರು.	ಮೈಸೂರು ಸಿಟಿ, ಲಷ್ಕರ್ ಮೊಹಲ್ಲಾ, ಅಶೋಕ ರಸ್ತೆ, ವೆಸ್ಟ್ ಕ್ರಾಸ್ 23, ಎರೆಕಟ್ಟೆ ಬೀದಿ, ಕಾರ್ಪೊರೇಶನ್ ಮನೆ ನಂ.2595 ಹೊಸ ನಂ. ಎಲ್–82, ಎಲ್–82/I, ವಿಸ್ತೀರ್ಣ: ಪೂರ್ವ–ಪಶ್ಚಿಮ: 17.00 ಅಡಿಗಳು ಮತ್ತು ಉತ್ತರ–ದಕ್ಷಿಣ: 38.00 ಅಡಿಗಳು. ಚಕ್ಕುಬಂದಿ:– ಪೂರ್ವಕ್ಕೆ: ಎಜಾಜ್ ರವರ ಸ್ವತ್ತು, ಪಶ್ಚಿಮಕ್ಕೆ: ನೂರ್ ಅಹ್ಮದ್ ಮತ್ತು ಪಿ.ಕೆ. ಮೂಸಾ ರವರ ಸ್ವತ್ತು, ಉತ್ತರಕ್ಕೆ: ಎಜಾಜ್ ರವರ ಸ್ವತ್ತು, ದಕ್ಷಿಣಕ್ಕೆ: ಅಶೋಕ ವೆಸ್ಟ್ ಕ್ರಾಸ್ 23.	ರೂ.25,00,000/–	ರೂ.2,50,000/–	ದಿನಾಂಕ 09.07.2026 ರಂದು ಬೆಳಗ್ಗೆ 11.00 ಗಂಟೆಯ ನಂತರ

ಷೆಡ್ಯೂಲ್–2, ಭಾಗ–ಬಿ

ಸಾಲಗಾರರು/ಸಹ–ಸಾಲಗಾರರ ಹೆಸರು	ಸಾಲ ಸೌಲಭ್ಯದ ಸ್ವರೂಪ ಮತ್ತು ಖಾತೆ ಸಂಖ್ಯೆ	ಸಾಲದ ಬಾಕಿ (ಮೊಬಲಗು ರೂ.ಗಳಲ್ಲಿ)
1) ಶ್ರೀ ಮುಜೀಬ್ ಉರ್ ರೆಹ್ಮಾನ್, 2) ಶ್ರೀ ನಜೀಬ್ ಉರ್ ರೆಹ್ಮಾನ್ 3) ಶ್ರೀ ಮೊಹಮ್ಮದ್ ಜಬೀರ್	ಅಡಮಾನ ಸಾಲ ಸಾಲದ ಖಾತೆ ಸಂಖ್ಯೆ: ಹೆಚ್‌ಎಲ್–360	ರೂ.14,82,140/– (ರೂಪಾಯಿ ಹದಿನಾಲ್ಕು ಲಕ್ಷದ ಎಂಬತ್ತೆರಡು ಸಾವಿರದ ಒಂದುನೂರ ನಲವತ್ತು ಮಾತ್ರ) + ದಿನಾಂಕ: 17.06.2026 ರಿಂದ ತಗಲುವ ವೆಚ್ಚ ಮತ್ತು ಬಡ್ಡಿ

ಈ ಮೊದಲು ಯಾವುದೇ ಮೊತ್ತವನ್ನು ಪಾವತಿಸಿದ್ದಲ್ಲಿ ಅದನ್ನು ಒಟ್ಟು ಬಾಕಿಯೊಂದಿಗೆ ಹೊಂದಿಸಿಕೊಳ್ಳಲಾಗುವುದು.

ಸಾಲಗಾರರು ತಮ್ಮ ಸಾಲಗಳು ಮತ್ತು ವೆಚ್ಚಗಳನ್ನು ಷೆಡ್ಯೂಲ್–1, ಭಾಗ–ಬಿ ಯಲ್ಲಿರುವಂತೆ **ದಿನಾಂಕ 08.07.2026 ರಂದು ಸಂಜೆ 4.00** ಗಂಟೆಗೆ ಅಥವಾ ಮುಂಚಿತವಾಗಿ ತಮ್ಮ ಸಾಲಗಳು ಮತ್ತು ವೆಚ್ಚಗಳನ್ನು ಪಾವತಿಸಿದ್ದಲ್ಲಿ ಅಧಿಕೃತ ಅಧಿಕಾರಿಯವರು ಮಾರಾಟ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬಹುದು, ಮಾರಾಟ ಪ್ರಕ್ರಿಯೆ ಪೂರ್ಣಗೊಂಡ ನಂತರ ಮಾಹಿತಿಗಳು ಅಥವಾ ಆಫರ್‌ಗಳನ್ನು ನಿಮ್ಮಿಂದ ಸ್ವೀಕರಿಸಲಾಗುವುದಿಲ್ಲ. ಈ ಮೂಲಕ ಸೂಚಿಸುವುದೇನೆಂದರೆ ಷೆಡ್ಯೂಲ್–1 ಭಾಗ–ಎ ಯಲ್ಲಿ ಆಸ್ತಿಯು ಹಾಗೂ ಷೆಡ್ಯೂಲ್ –2 ಭಾಗ–ಬಿ ಯಲ್ಲಿ ನಮೂದಿಸಿರುವ ಸಾಲಗಳಿಗಿಂತ ಕಡಿಮೆ ಇದ್ದಲ್ಲಿ ಬರಬೇಕಾದ ಬಾಕಿ ವಸೂಲಾತಿಗಾಗಿ ಕಾನೂನಿನನ್ವಯ ಬ್ಯಾಂಕ್ ಕ್ರಮ ಕೈಗೊಳ್ಳುತ್ತದೆ.

ಮಾರಾಟದ ನಿಯಮಗಳು:

1. ಮಾರಾಟವನ್ನು **ಎಲ್ಲಿ ಹೇಗಿದೆಯೋ ಹಾಗೆ** ಮತ್ತು ಯಾವುದೇ ಆಧಾರವನ್ನು ಪಡೆಯದೆ ಮತ್ತು ಯಾವುದೇ ಸ್ಥಿತಿಯಲ್ಲಿ ಅಥವಾ ಇತರೆ ಯಾವುದೇ ಕಾರಣಗಳು ಆಸ್ತಿಗೆ ಧಕ್ಕೆಯಾಗದಂತೆ ಮಾರಾಟ ಮಾಡಲಾಗುವುದು. ಬ್ಯಾಂಕ್ ಆಸ್ತಿಗೆ ಧಕ್ಕೆ ಬರಬಹುದಾದ ಯಾವುದೇ ಸ್ಥಿತಿಗೆ ಅಥವಾ ಯಾವುದೇ ಹಕ್ಕುಗಳಿಗೆ ಜವಾಬ್ದಾರರಾಗಿರುವುದಿಲ್ಲ.
2. ಷೆಡ್ಯೂಲ್–1, ಭಾಗ–ಬಿ ರಲ್ಲಿ ನಿರ್ದಿಷ್ಟವಾಗಿ ನಮೂದಿಸಲಾಗಿರುವ ವಿವರಗಳು ಬ್ಯಾಂಕ್‌ಗೆ ತಿಳಿದಿರುವ ನಿಖರವಾದ ವಿವರಗಳಾಗಿರುತ್ತವೆ ಮತ್ತು ಇದರಲ್ಲಿನ ಯಾವುದೇ ತಪ್ಪುಗಳಿಗೆ, ತಪ್ಪು ಹೇಳಿಕೆ ಅಥವಾ ತೆಗೆದು ಹಾಕಿರುವ ವಿವರಗಳಿಗೆ ಬ್ಯಾಂಕ್ ಉತ್ತರದಾಯಿತ್ವವಲ್ಲ.
3. ದಾಖಲಾದ ಕಾರಣಗಳಿಗೆ ಮಾರಾಟವನ್ನು ರದ್ದುಗೊಳಿಸುವ/ಮುಂದೂಡುವ ಮತ್ತು ಸಲ್ಲಿಸಲಾದ ಬಿಡ್‌ಗಳನ್ನು ವಾಪಸ್ ಮಾಡುವ ಹಕ್ಕನ್ನು ಅಧಿಕೃತ ಅಧಿಕಾರಿಯವರ ನಿರ್ಣಯಕ್ಕೆ ಬಿಟ್ಟದ್ದು ಮತ್ತು ಈ ಕುರಿತು ಬಿಡ್‌ದಾರರಿಂದ ಯಾವುದೇ ಕ್ಲೈಮನ್ನು ಅಥವಾ ಯಾವುದೇ ಪ್ರತಿನಿಧಿಗೆ ಬ್ಯಾಂಕ್ ಅವಕಾಶ ನೀಡುವುದಿಲ್ಲ.
4. ಸ್ಥಿರಾಸ್ತಿಯ ಮಾರಾಟದಲ್ಲಿ ಯಶಸ್ವಿ ಬಿಡ್‌ದಾರರೆಂದು ನಿಗದಿಯಾದ ವ್ಯಕ್ತಿಯ 25% ಮೊತ್ತವನ್ನು ಸ್ಥಳದಲ್ಲೇ ಕೂಡಲೇ ಪಾವತಿಸಬೇಕು ಮತ್ತು ಬಾಕಿ ಮೊತ್ತವನ್ನು ಬ್ಯಾಂಕ್‌ನಿಂದ ಮಾರಾಟವು ದೃಢೀಕರಣಗೊಳಿಸಿ, 15 ದಿನಗಳೊಳಗೆ ಪಾವತಿಸಬೇಕು. ಸದರಿ ಮೊತ್ತವನ್ನು ನಿಗದಿಪಡಿಸಿದ ದಿನಾಂಕದ ಒಳಗೆ ಪಾವತಿಸಲು ವಿಫಲರಾದಲ್ಲಿ ಖರೀದಿದಾರರೆಂದು ನಿರ್ಧರಿಸಿದ ವ್ಯಕ್ತಿಯು ಈವರೆಗೆ ಪಾವತಿಸಿದ ಇಎಂಡಿಯೂ ಒಳಗೊಂಡಂತೆ ಪೂರ್ತಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆ ಆಸ್ತಿಯನ್ನು ಮರು ಮಾರಾಟ ಮಾಡಲಾಗುವುದು ಹಾಗೂ ಈ ಸುಸ್ತಿದಾರರಿಂದ ಖರೀದಿದಾರರಿಗೆ ಆಸ್ತಿಯ ಮೇಲೆ ಯಾವುದೇ ಮೊತ್ತದ ಮೇಲೆ ಯಾವುದೇ ಕ್ಲೇಮುಗಳು ಇರುವುದಿಲ್ಲ.
5. ಮಾರಾಟ ಪತ್ರವನ್ನು ನೀಡಿದ ನಂತರ ಮಾರಾಟವನ್ನು ಪೂರ್ಣಗೊಳಿಸಲಾಗುವುದು ಮತ್ತು ಆ ಕುರಿತು ಯಾವುದೇ ಕ್ಲೈಮುಗಳಿಗೆ ಬ್ಯಾಂಕ್ ಅವಕಾಶ ನೀಡುವುದಿಲ್ಲ.
6. ಆಸ್ತಿಯನ್ನು ಮಾರಾಟ ಮಾಡಲು ಬ್ಯಾಂಕ್ ಯಾರನ್ನೂ ನಿಯೋಜಿಸುವುದಿಲ್ಲ ಅಥವಾ ನಿಯೋಜಿಸುವ ಒಪ್ಪಂದವಾಗಲಿ ಪ್ರತಿನಿಧಿಯನ್ನಾಗಲಿ ಸೂಚಿಸುವುದಿಲ್ಲ. ಮಾರಾಟವನ್ನು ಯಾವುದೇ ಸೂಕ್ತ ಕಾರಣಗಳಿಂದ ರದ್ದುಗೊಳಿಸುವ/ ಮುಂದೂಡುವ ಅಥವಾ ಯಾವುದೇ ಕಾರಣಗಳನ್ನು ನೀಡದೆ ರದ್ದುಗೊಳಿಸುವ ಅಧಿಕಾರವನ್ನು ಬ್ಯಾಂಕ್ ಹೊಂದಿದ್ದು ಇದನ್ನು ಯಾವುದೇ ಬಿಡ್‌ದಾರರು ಪ್ರಶ್ನಿಸುವಂತಿಲ್ಲ.
7. ಬ್ಯಾಂಕ್ ಬಿಡ್ಡುಗಳನ್ನು ಯಾವುದೇ ಹಂತದಲ್ಲಿ ಅಂಗೀಕರಿಸುವ/ ತಿರಸ್ಕರಿಸುವ/ ಬದಲಾಯಿಸುವ, ಮಾರ್ಪಡಿಸುವ ಯಾವುದೇ ಮಾರಾಟದ ನಿಯಮವನ್ನು ಮನ್ನಾ ಮಾಡುವ ಅಧಿಕಾರವನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.
8. ಶಾಸನಬದ್ಧ ಬಾಕಿಗಳಾದ ಆಸ್ತಿತೆರಿಗೆಗಳು/ಖಾತ/ಸೆಸ್ ಮತ್ತು/ ಅಥವಾ ಬಿಲ್ಡರ್/ ಸೊಸೈಟಿ ಅಸೋಸಿಯೇಷನ್/ಕಾಂಡೋಮಿನಿಯಂ/ಅಪಾರ್ಟ್‌ಮೆಂಟ್ ಅಭಿವೃದ್ಧಿ ಬಾಕಿಗಳು, ಸಂಘದ ನಿಧಿಗಳಿಗೆ ಕೊಡುಗೆ, ವರ್ಗಾವಣೆ ಚಾರ್ಜ್‌ಗಳು, ವಿದ್ಯುತ್ ಬಾಕಿಗಳು, ನೀರಿನ ಚಾರ್ಜ್‌ಗಳ ಬಾಕಿಗಳನ್ನು ಬಿಡ್ಡುದಾರರು/ಆಫರ್‌ಗಳು/ಭಾವಿ ಖರೀದಿದಾರರು ಮೊದಲೇ ಖಚಿತ ಪಡಿಸಿಕೊಳ್ಳಬೇಕು ಮತ್ತು ಅದನ್ನು ಖರೀದಿದಾರನು ಮಾರಾಟ ಪ್ರಮಾಣ ಪತ್ರವನ್ನು ಬರೆದು ಕೊಡುವ ಮುಂಚೆ ಪಾವತಿಮಾಡತಕ್ಕದು ಮತ್ತು ಮಾರಾಟಕ್ಕೆ ಪ್ರಾಸಂಗಿಕವಾದ ಎಲ್ಲಾ ವೆಚ್ಚಗಳನ್ನು ಖರೀದಿದಾರನೇ ಭರಿಸತಕ್ಕದು.
9. ಅಧಿಕೃತ ಅಧಿಕಾರಿಯವರು **ಎಲ್ಲಿ ಹೇಗಿದೆಯೋ ಹಾಗೆ ಆಧಾರದ ಮೇಲೆ** ಆಸ್ತಿಯನ್ನು ಮಾರಾಟ ಮಾಡುತ್ತಾರೆ ಮಾರಾಟ ಪ್ರಕ್ರಿಯೆ ಮುಗಿದ ನಂತರ ಯಶಸ್ವಿ ಬಿಡ್‌ದಾರರಿಂದ ಮಾರಾಟವಾಗಿರುವ ಆಸ್ತಿಯ ಬಗ್ಗೆ ಯಾವುದೇ ಸಮಸ್ಯೆ ತಂಟೆ/ತಕರಾರು ಬಂದಲ್ಲಿ ಅದಕ್ಕೆ ಅಧಿಕೃತ ಅಧಿಕಾರಿಯವರು ಜವಾಬ್ದಾರರಾಗಿರುವುದಿಲ್ಲ. ಆಸ್ತಿಯನ್ನು ತೆರವು ಮಾಡಿಸುವುದಕ್ಕಾಗಲೀ / ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕಾಗಲೀ ಅಥವಾ ಯಾವುದೇ ತಕರಾರುಗಳನ್ನು ಪರಿಹರಿಸಿಕೊಳ್ಳಲು ಯಶಸ್ವಿ ಬಿಡ್‌ದಾರರೇ ಏರ್ಪಾಡು ಮಾಡಿಕೊಳ್ಳಬೇಕು. ಮಾರಾಟ ಪ್ರಕ್ರಿಯೆ ಮುಗಿದ ನಂತರ ಯಶಸ್ವಿ ಬಿಡ್‌ದಾರರು ಯಾವುದೇ ಕ್ಲೈಮುಗಳು/ತಗಾದೆಯನ್ನು ಅಧಿಕೃತ ಅಧಿಕಾರಿಯವರ ಗಮನಕ್ಕೆ ತರುವಂತಿಲ್ಲ.

ಮೇಲೆ ತಿಳಿಸಿರುವ ಮಾರಾಟದ ನಿಯಮ ನಿಬಂಧನೆಗಳಿಗೆ ಅನುಗುಣವಾಗಿ ಷೆಡ್ಯೂಲ್–1, ಭಾಗ–ಎ ನಲ್ಲಿರುವ ಆಸ್ತಿಯನ್ನು ಖರೀದಿಸಲು ಆಸಕ್ತಿಯುಳ್ಳ ವ್ಯಕ್ತಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

- **ಷೆಡ್ಯೂಲ್ 1ನೇ ಆಸ್ತಿಗೆ** ಮುಚ್ಚಿದ ಟೆಂಡರ್‌ಗಳನ್ನು **ದಿನಾಂಕ 08.07.2026 ಸಂಜೆ 4.00 ಗಂಟೆಯ ಒಳಗೆ** ಭರ್ತಿ ಮಾಡಿ ಮೇಲೆ ತಿಳಿಸಿರುವ ಬ್ಯಾಂಕ್‌ನ ವಿಳಾಸಕ್ಕೆ ಅರ್ಜಿಯ ಜೊತೆ ಪಾವತಿಸಬೇಕು. ಡಿ.ಡಿ/ಪಿ.ಒ. ಅನ್ನು **ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು–570001** ಇವರ ಹೆಸರಿನಲ್ಲಿ ಮೈಸೂರಿನಲ್ಲಿ ಪಾವತಿಯಾಗುವಂತೆ ಪಡೆಯಬೇಕು ಬಿಡ್ ಅರ್ಜಿಗಳನ್ನು **ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು–570001** ಆಫೀಸಿನಿಂದ ಪಡೆಯಬಹುದು. ಚೆಕ್ ಮೂಲಕ ಸ್ವೀಕರಿಸಲಾಗುವುದಿಲ್ಲ. ಚೆಕ್‌ಗಳ ಜೊತೆಗೆ ಕಳುಹಿಸಲಾಗುವ ಬಿಡ್‌ಗಳನ್ನು ಅನರ್ಹಗೊಳಿಸಲಾಗುವುದು. ಬಿಡ್‌ಗಳು ತೆರೆಯುವ ದಿನಾಂಕ **ಷೆಡ್ಯೂಲ್–1 ಭಾಗ–ಎ ಆಸ್ತಿಯು ದಿನಾಂಕ 09.07.2026 ರಂದು ಬೆಳಗ್ಗೆ 11.00 ಗಂಟೆಯ ನಂತರ** ಅಧಿಕೃತ ಅಧಿಕಾರಿಯವರ ಉಪಸ್ಥಿತಿಯಲ್ಲಿ ಮತ್ತು ಪ್ರಸ್ತುತ ಬಿಡ್‌ದಾರರಿಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಆಸ್ತಿ **ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು–570001** ಇವರ ಸಮ್ಮುಖದಲ್ಲಿ ತೆರೆಯಲಾಗುವುದು.
- ಷರತ್ತುಗೊಳಪಟ್ಟಿರದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು.
- ಒಂದು ವೇಳೆ ಒಂದಕ್ಕಿಂತ ಹೆಚ್ಚು ಗರಿಷ್ಠ ಬಿಡ್‌ಗಳು ಇದ್ದು, ಒಂದೇ ಆಫರ್ ಬೆಲೆಯನ್ನು ಹೊಂದಿದ್ದರೆ, ಒಂದೇ ಮೊತ್ತದ ಆಫರ್‌ಗಳನ್ನು ಹೊಂದಿರುವ ಬಿಡ್‌ಗಳಬಗ್ಗೆ ಅಧಿಕೃತ ಅಧಿಕಾರಿಯವರ ನಿರ್ಣಯಕ್ಕೆ ಬಿಟ್ಟದ್ದು.
- ಇಂಥ ಸಮಯದಲ್ಲಿ ಬಿಡ್ಡಿನ ಮೊತ್ತವನ್ನು ಹೆಚ್ಚಿಸುವ ಅಥವಾ ಬಿಡ್‌ನ ವಿಧಾನವನ್ನು ಬದಲಾಯಿಸುವ ಅಧಿಕಾರವನ್ನು ಅಧಿಕೃತ ಅಧಿಕಾರಿಯವರು ಹೊಂದಿರುತ್ತಾರೆ.
- ದಲ್ಲಾಳಿ / ಮಧ್ಯವರ್ತಿಗಳಿಗೆ ಯಾವುದೇ ಅವಕಾಶಗಳಿರುವುದಿಲ್ಲ.
- ಬಿಡ್‌ದಾರರು ಮಾತ್ರ ಹರಾಜಿನಲ್ಲಿ ಭಾಗವಹಿಸತಕ್ಕದ್ದು.
- ಸಾಲಗಾರರಿಗೆ ಮಾರಾಟದ ನೋಟೀಸ್ ನೀಡಲಾದ **ದಿನಾಂಕ: 17.06.2026.**
- ಬಿಡ್‌ದಾರರು ಹರಾಜು ದಿನಾಂಕದ ಮತ್ತು ಹರಾಜು ಸಮಯದ ಒಳಗೆ ಮುಂಗಡ ಠೇವಣಿಯನ್ನು ಡಿ.ಡಿ. ಮುಖಾಂತರ ಪಾವತಿಸಬೇಕು ಹಾಗೂ ಪಾನ್ ಮತ್ತು ಆಧಾರ್ ಪ್ರತಿಯನ್ನು ಕೂಡ ಹಾಜರುಪಡಿಸಬೇಕು.
- **ಇಚ್ಛಿಸುವ ಬಿಡ್‌ದಾರರು ಆಸ್ತಿಯನ್ನು ಪರಿವೀಕ್ಷಿಸಲು ಮತ್ತು ಹೆಚ್ಚಿನ ವಿವರಗಳಿಗೆ ಹೇಮಂತ್ ಕುಮಾರ್ ಮೊಬೈಲ್: 9480365397 ಇವರನ್ನು ಸಂಪರ್ಕಿಸುವುದು.**

ದಿನಾಂಕ: 20.06.2026
ಸ್ಥಳ: ಮೈಸೂರು.

ಸಹಿ/– ಅಧಿಕೃತ ಅಧಿಕಾರಿ
ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು.

